# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ಎಂ.ಎಸ್. ವಿಕಾಸ್

ದಾವಣಗೆರೆ
ಶನಿವಾರ, ಅಕ್ಟೋಬರ್ 26, 2024

ಸಂಪುಟ : 51 ಸಂಚಿಕೆ : 163 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com







# ಅತಿವೃಷ್ಟಿ: ನಿರಾಶ್ರಿತರಿಗೆ ಶಾಶ್ವತ ಪರಿಹಾರ

## ಶೀಘ್ರ ಹಿಂಗಾರು ಬೆಳೆ ಪರಿಹಾರ ವಿತರಣೆ: ಕಂದಾಯ ಸಚಿವ ಕೃಷ್ಣ ಬೈರೇಗೌಡ ಭರವಸೆ





ಜಗಳೂರು,ಅ.25- ರಾಜ್ಯದಲ್ಲಿ ಹಿಂಗಾರು ಹಂಗಾಮಿನ ಅಕ್ಟೋಬರ್ ತಿಂಗಳಲ್ಲಿಯೇ ಶೇ. 66 ರಷ್ಟು ಸುರಿದ ಅಧಿಕ ಮಳೆಯಿಂದ ರಾಜ್ಯದಲ್ಲಿ ಈವರೆಗೆ 56993 ಹೆಕ್ಟೇರ್ ಪ್ರದೇಶಕ್ಕೂ ಹೆಚ್ಚು ಪ್ರದೇಶದಲ್ಲಿ ಬೆಳೆಹಾನಿ ಉಂಟಾದ ವರದಿ ಇದ್ದು, ಜಂಟಿ ಬೆಳೆ ಸಮೀಕ್ಷೆ ನಡೆಸಿ ಹಾನಿಯಾದ ರೈತರಿಗೆ ಶೀಘ್ರವಾಗಿ ಬೆಳೆ ನಷ್ಟ ಪರಿಹಾರ ವಿತರಿಸಲಾಗುವುದು ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ತಾಲ್ಲೂಕಿನ ಹಿರೇಮಲ್ಲನಹೊಳೆ ಗ್ರಾಮದ ಕೆರೆ ಅಂಗಳದಲ್ಲಿ ನೀರು ನುಗ್ಗಿರುವ ಮತ್ತು ಭಾರೀಮಳೆಗೆ ಕುಸಿತಗೊಂಡ ಮನೆಗಳನ್ನು ಹಾಗೂ ಜಲಾವೃತಗೊಂಡ ಜಮೀನಿನಲ್ಲಿನ ಬೆಳೆಗಳನ್ನು ವೀಕ್ಷಿಸಿ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದರು.

ರಾಜ್ಯದಲ್ಲಿ ಹಿಂಗಾರು ಹಂಗಾಮಿನಲ್ಲಿ 21 ಜನರ ಪ್ರಾಣಹಾನಿಯಾಗಿದ್ದು, ಇದರಲ್ಲಿ 9 ಜನರು ಸಿಡಿಲಿನಿಂದ ಮರಣ ಹೊಂದಿದ್ದರೆ, 6 ಜನರು ಮನೆ ಕುಸಿತದಿಂದ ಸಾವನ್ನಪ್ಪಿದ್ದಾರೆ. 3 ರಿಂದ 4 ಜನರು ನೀರಿನಲ್ಲಿ ಕೊಚ್ಚಿ ಹೋಗಿದ್ದಾರೆ. ಮುಂಗಾರು ಸೇರಿದಂತೆ ಇಲ್ಲಿಯವರೆಗೆ 121 ಜನರು ಪ್ರಾಣ ಕಳೆದುಕೊಂಡಿದ್ದಾರೆ. ಮುಂಗಾರು ಹಂಗಾಮಿನಲ್ಲಿ 2589 ಮತ್ತು ಹಿಂಗಾರಿನಲ್ಲಿ 121 ಮನೆಗಳು ಬಿದ್ದು ಹೋಗಿವೆ, ಇವರಿಗೆ ಮನೆ ಪರಿಹಾರದ ಜೊತೆಗೆ ಮನೆ ನಿರ್ಮಿಸಿಕೊಡಲಾಗುತ್ತದೆ. ಸರ್ಕಾರಿ ಜಾಗದಲ್ಲಿ ಅನಧಿಕೃತವಾಗಿ ಕಟ್ಟಿದ ಮನೆ ಬಿದ್ದು ಹೋಗಿದ್ದಲ್ಲಿ ಎಸ್.ಡಿ.ಆರ್.ಎಫ್ ನಡಿ ಒಂದು ಲಕ್ಷ ಪರಿಹಾರ ನೀಡಲಾಗುತ್ತದೆ ಎಂದರು.

**666 ಕೋಟಿ ಲಭ್ಯ :** ಬೆಳೆಹಾನಿ, ಜೀವಹಾನಿ ಹಾಗೂ ಮನೆ ಬಿದ್ದುಹೋಗಿದ್ದಲ್ಲಿ ತಕ್ಷಣವೇ ಪರಿಹಾರ ನೀಡಲು ಜಿಲ್ಲಾಧಿಕಾರಿ, ತಹಶೀಲ್ದಾರರ ಖಾತೆಗಳಲ್ಲಿ 666 ಕೋಟಿಯಷ್ಟು ಹಣವಿದ್ದು, ಪ್ರಕೃತಿ ವಿಕೋಪ ಎದುರಿಸಲು ಯಾವುದೇ ಅನುದಾನದ ಕೊರತೆ ಇರುವುದಿಲ್ಲ. ಕಷ್ಟ (4ನೇ ಪುಟಕ್ಕೆ)

# ಶೇಂಗಾ ಖರೀದಿಗೆ ಕೇಂದ್ರ ಸಮ್ಮತಿ

**6,783 ರೂ. ದರದಲ್ಲಿ ಖರೀದಿ**

**ದಾವಣಗೆರೆ ಸೇರಿ ಹಲವು ಜಿಲ್ಲೆಗಳಲ್ಲಿ ಖರೀದಿಗೆ ಅಸ್ತು**

ಬೆಂಗಳೂರು, ಅ. 25 - ಬೆಂಬಲ ಬೆಲೆಯಡಿ ಶೇಂಗಾ ಖರೀದಿಗೆ ಕೇಂದ್ರ ಸರ್ಕಾರ ಸಮ್ಮತಿಸಿದ್ದು, ಪ್ರತಿ ಕ್ವಿಂಟಾಲ್‌ಗೆ 6,783 ರೂ. ದರ ನಿಗದಿಪಡಿಸಲಾಗಿದೆ ಎಂದು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ್ ತಿಳಿಸಿದ್ದಾರೆ.



ಈ ಸಂಬಂಧ ಹೇಳಿಕೆ ಬಿಡುಗಡೆ ಮಾಡಿರುವ ಅವರು, ಬೆಲೆ ಕುಸಿತದ ಹಿನ್ನೆಲೆಯಲ್ಲಿ ರೈತರ ನೆರವಿಗೆ ಧಾವಿಸಲು ಬೆಂಬಲ ಬೆಲೆಯಲ್ಲಿ ಶೇಂಗಾ ಖರೀದಿಗೆ ಅನುಮತಿ ನೀಡಬೇಕೆಂಬ ರಾಜ್ಯ ಸರ್ಕಾರದ ಮನವಿಗೆ ಕೇಂದ್ರ ಸರ್ಕಾರ ಸಮ್ಮತಿಸಿದೆ ಎಂದಿದ್ದಾರೆ.

ಬೆಂಬಲ ಬೆಲೆಯಲ್ಲಿ ಶೇಂಗಾ ಖರೀದಿಗೆ ಕೇಂದ್ರ ಸರ್ಕಾರದಿಂದ ಎರಡು ಹಾಗೂ ರಾಜ್ಯ ಸರ್ಕಾರದಿಂದ ನಾಲ್ಕು ಖರೀದಿ ಏಜೆನ್ಸಿಗಳನ್ನು ನೇಮಕ ಮಾಡಲಾಗಿದೆ.

ಬೆಂಬಲ ಬೆಲೆ ಮಾರ್ಗಸೂಚಿ ಅನ್ವಯ ಕೊಪ್ಪಳ, ಧಾರವಾಡ, ಹಾವೇರಿ, ಬಳ್ಳಾರಿ, ಚಿತ್ರದುರ್ಗ, ಗದಗ, ಬಾಗಲಕೋಟೆ, ದಾವಣಗೆರೆ, ರಾಯಚೂರು, ತುಮಕೂರು ಹಾಗೂ ವಿಜಯನಗರ ಜಿಲ್ಲೆಗಳ ರೈತರಿಂದ ಶೇಂಗಾ ಖರೀದಿಗೆ ಅನುಮತಿ ದೊರೆತಿದೆ ಎಂದು ಹೇಳಿದರು.

ಶೇಂಗಾ ಸೇರಿದಂತೆ ರಾಜ್ಯದಲ್ಲಿ ಇದೇ ಮೊದಲ ಬಾರಿಗೆ ಒಟ್ಟು ಎಂಟು ಕೃಷಿ ಉತ್ಪನ್ನಗಳನ್ನು ಬೆಂಬಲ ಬೆಲೆ ಯೋಜನೆಯಡಿ ಖರೀದಿ ಮಾಡಲಾಗುತ್ತಿದೆ.

ಇದುವರೆಗೆ ಉಂಡೆ ಕೊಬ್ಬರಿ, ಮಿಲ್ಲಿಂಗ್ ಕೊಬ್ಬರಿ, ಹೆಸರುಕಾಳು, ಉದ್ದಿನಕಾಳು, ಸೋಯಾಬೀನ್, ಸೂರ್ಯಕಾಂತಿ ಹಾಗೂ ಹತ್ತಿ ಖರೀದಿಸಲಾಗುತ್ತಿತ್ತು.

ಅವಶ್ಯಕತೆಗೆ ಅನುಗುಣವಾಗಿ ಖರೀದಿ ಕೇಂದ್ರಗಳನ್ನು ಆರಂಭಿಸಲು ನಫೆಡ್, ಎನ್‌ಸಿಸಿಎಫ್ ಹಾಗೂ ಇತರೆ ಖರೀದಿ (5ನೇ ಪುಟಕ್ಕೆ)

# ಷೇರುಪೇಟೆಯಲ್ಲಿ ಕರಗಿದ 6.80 ಲಕ್ಷ ಕೋಟಿ

ನವದೆಹಲಿ, ಅ. 25 - ಶುಕ್ರವಾರ ಷೇರುಪೇಟೆ ಕುಸಿತದ ಕಾರಣದಿಂದಾಗಿ ಹೂಡಿಕೆದಾರರ ಆಸ್ತಿ ಮೌಲ್ಯ 6.80 ಲಕ್ಷ ಕೋಟಿ ರೂ. ಕರಗಿದೆ. ಇಂಡಸ್‌ಇಂಡ್ ಬ್ಯಾಂಕ್ ಷೇರುಗಳ ಕುಸಿತ ಹಾಗೂ ವಿದೇಶಿ ಹೂಡಿಕೆ ನಿರಂತರವಾಗಿ ಹೊರ ಹೋಗುತ್ತಿರುವ ಹಿನ್ನೆಲೆಯಲ್ಲಿ ಷೇರುಪೇಟೆಯಲ್ಲಿ ಕುಸಿತ ಉಂಟಾಗಿದೆ.

ಬಿಎಸ್‌ಇ ಸೂಚ್ಯಂಕ 66.287 ಅಂಕಗಳ ಕುಸಿತ ಕಂಡು 79,402.29ರಲ್ಲಿ ಅಂತ್ಯವಾಗಿದೆ. ಇದು ಶೇ.0.83ರ ಕುಸಿತವಾಗಿದೆ. ವಿದೇಶಿ ಹೂಡಿಕೆದಾರರು ಷೇರುಗಳನ್ನು ಮಾರುತ್ತಿರುವುದು, ಷೇರು ಮೌಲ್ಯದ ಕುರಿತ ಕಳವಳ ಹಾಗೂ ಚೀನಾ ಮಾರುಕಟ್ಟೆಯ ಆಕರ್ಷಣೆ ಹೆಚ್ಚಾಗುತ್ತಿರುವುದು (4ನೇ ಪುಟಕ್ಕೆ)

# ಹರಿಹರ ಊರಮ್ಮ ದೇವಿ ಹಬ್ಬ ಆಚರಣೆಗೆ ತೀರ್ಮಾನ



**ಮಾ.18 ರಿಂದ 22ರವರೆಗೆ ಹಬ್ಬ ಆಚರಣೆ**

ಹರಿಹರ, ಅ. 25- ನಗರದಲ್ಲಿ ಮಾರ್ಚ್ 18 ರಿಂದ 22 ರವರೆಗೆ ಗ್ರಾಮದೇವತೆ ಊರಮ್ಮ ದೇವಿ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸಲು ತೀರ್ಮಾನ ಕೈಗೊಳ್ಳಲಾಗಿದೆ ಎಂದು ಕಸಬಾ ಗೌಡ್ರು ಲಿಂಗರಾಜ್ ಪಾಟೀಲ್ ಮತ್ತು ಮಾಜೇನಹಳ್ಳಿ ಗೌಡ್ರು ಚನ್ನಬಸಪ್ಪ ತಿಳಿಸಿದರು.

ದೇವಸ್ಥಾನ ಆವರಣದಲ್ಲಿ ಇಂದು ಸೇರಿದ್ದ ಸಭೆಯಲ್ಲಿ ಈ ಹಿಂದೆ ನಡೆದ ಗ್ರಾಮ ದೇವತೆ ಹಬ್ಬದ ಲೆಕ್ಕಪತ್ರದ ಜಮಾ ಖರ್ಚಿನ ವಿವರವನ್ನು ಉತ್ಸವ ಸಮಿತಿಯ ಅಧ್ಯಕ್ಷ ಕೆ.ಅಣ್ಣಪ್ಪ, ಪ್ರಧಾನ ಕಾರ್ಯದರ್ಶಿ ಬೆಣ್ಣೆ ರೇವಣಸಿದ್ದಪ್ಪ, ಖಜಾಂಚಿ ಶೇರಾಪುರ ರಾಜಶೇಖರಪ್ಪ, ಸಹ ಕಾರ್ಯದರ್ಶಿ ಪಾಲಾಕ್ಷಪ್ಪ ಸಭೆಯಲ್ಲಿ ಮಂಡಿಸಿದರು.

ಲೆಕ್ಕಪತ್ರ ಮಂಡನೆ ನಂತರ ಹರಿಶಂಕರ ಜೋಯಿಸರು ಹಬ್ಬದ ದಿನಾಂಕವನ್ನು ನೀಡಿದರು.

ಬರುವ ಮಂಗಳವಾರ (5ನೇ ಪುಟಕ್ಕೆ)

## ಫಿಲಿಪೈನ್ಸ್‌ಗೆ ಮತ್ತೆ ಅಪ್ಪಳಿಸಲಿದೆ 'ಟ್ರಾಮಿ'



ಮನಿಲಾ, ಅ. 25 - ಟ್ರಾಮಿ ಎಂಬ ಹೆಸರಿನ ಚಂಡಮಾರುತ ಶುಕ್ರವಾರ ದಂದು ಫಿಲಿಪೈನ್ಸ್ ವಾಯುವ್ಯ ಭಾಗಕ್ಕೆ ಅಪ್ಪಳಿಸಿದ್ದು, 46 ಜನ ಸಾವನ್ನಪ್ಪಿದ್ದಾರೆ. ಚಂಡಮಾರುತದಿಂದ ವ್ಯಾಪಕ ಹಾನಿಯಾಗಿದೆ. ಆದರೆ, ಈ ಚಂಡ ಮಾರುತದ ಕಥೆ ಇಲ್ಲಿಗೇ ಮುಗಿದಿಲ್ಲ. ಚಂಡ ಮಾರುತ ಉಲ್ಟಾ ತಿರುಗಿ ಮತ್ತೆ ಅಪ್ಪಳಿಸುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ಚಂಡಮಾರುತ ಈ ರೀತಿ ತಿರುಗಿ ಬರುವುದು ಅಪರೂಪವಾಗಿದೆ.ಈ ವರ್ಷ ಫಿಲಿಪೈನ್ಸ್‌ಗೆ ಒಟ್ಟು 11 ಚಂಡಮಾರುತಗಳು ಅಪ್ಪಳಿಸಿವೆ. (4ನೇ ಪುಟಕ್ಕೆ)

## ಮುಡಾ : ಲೋಕಾಯುಕ್ತರಿಂದ ಸಿದ್ದರಾಮಯ್ಯ ಪತ್ನಿ ವಿಚಾರಣೆ

ಮೈಸೂರು, ಅ. 25 - ಮುಡಾ ವಿವಾದಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತ ಪೊಲೀಸರು ಶುಕ್ರವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಬಿ.ಎಂ. ಪಾರ್ವತಿ ಅವರನ್ನು ಪ್ರಶ್ನಿಸಿದ್ದಾರೆ. ಪಾರ್ವತಿ ಅವರಿಗೆ ಸಮನ್ಸ್ ಕಳಿಸಲಾಗಿತ್ತು. ಎರಡು ಗಂಟೆಗೂ ಹೆಚ್ಚು ಕಾಲ ಪ್ರಶ್ನಿಸಲಾಗಿದೆ ಎಂದು ಲೋಕಾಯುಕ್ತ ಮೂಲಗಳು ತಿಳಿಸಿವೆ.

# ವಲಸೆ ಸಮಸ್ಯೆ ಸುಳಿಯಲ್ಲಿ ಕೆನಡಾ ಸರ್ಕಾರ

**ತಪ್ಪಾಯಿತು, ವಲಸಿಗರಿಗೆ ಕಡಿವಾಣ ಹಾಕುವೆ ಎಂದ ಪ್ರಧಾನಿ ಟ್ರುಡ್ಯೂ**

ಟೊರಂಟೊ, ಅ. 25 - ಕೊವಿಡ್ ನಂತರ ವಲಸೆಯಲ್ಲಿ ಸಮತೋಲನ ತರುವಲ್ಲಿ ತಮ್ಮ ಸರ್ಕಾರ ವಿಫಲವಾಗಿದೆ ಎಂದು ಒಪ್ಪಿಕೊಂಡಿರುವ ಕೆನಡಾ ಪ್ರಧಾನ ಮಂತ್ರಿ ಜಸ್ಟಿನ್ ಟ್ರುಡ್ಯೂ, ವಲಸಿಗರ ಸಂಖ್ಯೆಗೆ ಗಣನೀಯವಾಗಿ ಕಡಿವಾಣ ಹಾಕುವುದಾಗಿ ಹೇಳಿದ್ದಾರೆ.

ಮುಂದಿನ ಎರಡು ವರ್ಷಗಳವರೆಗೆ ತಲಾ 5 ಲಕ್ಷ ಹೊಸ ವಲಸಿಗರಿಗೆ ಅವಕಾಶ ನೀಡಲಾಗುವುದು ಎಂದು ಟ್ರುಡ್ಯೂ ನೇತೃತ್ವದ ಲಿಬರಲ್ ಸರ್ಕಾರ ತಿಳಿಸಿತ್ತು.

ಆದರೆ, ಈಗ ನಿಲುವು ಬದಲಿಸಿರುವ ಟ್ರುಡ್ಯೂ, ಮುಂದಿನ ವರ್ಷ 3.95 ಲಕ್ಷ ಜನರಿಗೆ ಶಾಶ್ವತ ನೆಲೆಸಲು ಅನುಮತಿ ನೀಡಲಾಗುವುದು. ಈ ಸಂಖ್ಯೆಯನ್ನು 2026ರಲ್ಲಿ 3.80 ಲಕ್ಷ ಹಾಗೂ 2027ರಲ್ಲಿ 3.65 ಲಕ್ಷಕ್ಕೆ ಇಳಿಸಲಾಗುವುದು ಎಂದಿದ್ದಾರೆ.

ಕೊರೊನಾ ನಂತರದಲ್ಲಿ ಕಾರ್ಮಿಕರ ಬೇಡಿಕೆ ಹಾಗೂ ಜನಸಂಖ್ಯೆ ನಡುವೆ ಸಮತೋಲನ ತರಬೇಕಿತ್ತು. ಆ ಸಮತೋಲನ ತರಲು ಸಾಧ್ಯವಾಗಿಲ್ಲ ಎಂದು ಟ್ರುಡ್ಯೂ ಹೇಳಿದ್ದಾರೆ.

ವಲಸೆ ನೀತಿಗೆ ಸಂಬಂಧಿಸಿದಂತೆ ಅವರು ತೀವ್ರ ಟೀಕೆಗಳನ್ನು ಎದುರಿಸುತ್ತಿದ್ದಾರೆ. ವಲಸೆ ಕಾರಣದಿಂದ ಮನೆಗಳ ಬಾಡಿಗೆ ತೀವ್ರವಾಗಿ ಹೆಚ್ಚಾಗಿದೆ. ಇದು ಸರ್ಕಾರದ ವರ್ಚಸ್ಸಿಗೆ ಹಿನ್ನಡೆ ತಂದಿದೆ. ಟ್ರುಡ್ಯೂ ನಾಲ್ಕನೇ ಅವಧಿಗೆ ಚುನಾವಣೆಗೆ ನಿಲ್ಲಬಾರದು ಎಂದು ಅವರ ಪಕ್ಷದಿಂದಲೇ ಬೇಡಿಕೆ ಬರುತ್ತಿದೆ.

ಮುಂದಿನ ಎರಡು ವರ್ಷಗಳಲ್ಲಿ ವಲಸಿಗರ ಸಂಖ್ಯೆ ಕಡಿಮೆ ಮಾಡಲಾಗುವುದು. ಜನಸಂಖ್ಯೆ ಸ್ಥಿರಗೊಳಿಸಲಾಗುವುದು ಎಂದು ಕೆನಡಾ ಪ್ರಧಾನಿ ಹೇಳಿದ್ದಾರೆ. ಏಪ್ರಿಲ್ ತಿಂಗಳಲ್ಲಿ ಕೆನಡಾ ಜನಸಂಖ್ಯೆ 41 ದಶಲಕ್ಷಕ್ಕೆ ತಲುಪಿದೆ. 2019ರಲ್ಲಿ ದೇಶದ ಜನಸಂಖ್ಯೆ 37.5 ದಶಲಕ್ಷ ಆಗಿತ್ತು.

ಆದರೆ, ವಲಸೆ ಸಮಸ್ಯೆಗೆ ಬೇರೆಯವರು ಕಾರಣವೇ ಹೊರತು ನಾನಲ್ಲ. ಕಾರ್ಪೊರೇಟ್ ಸಂಸ್ಥೆಗಳು ತಾತ್ಕಾಲಿಕ ವಲಸೆ ದುರ್ಬಳಕೆ ಮಾಡಿಕೊಂಡಿವೆ ಎಂದು ಟ್ರುಡ್ಯೂ ಆರೋಪಿಸಿದ್ದಾರೆ.

ಕಾರ್ಪೊರೇಟ್ ಸಂಸ್ಥೆಗಳು ನ್ಯಾಯೋಚಿತ ಕೂಲಿ ನೀಡಿ ಕೆನಡಾದ ಜನತೆಯನ್ನು ನೇಮಿಸಿಕೊಳ್ಳುವ ಬದಲು, ವಿದೇಶಿ ಕಾರ್ಮಿಕರನ್ನು ಶೋಷಣೆ ಮಾಡುತ್ತಿವೆ. ಕೆಲ ಕಾಲೇಜು ಹಾಗೂ ವಿಶ್ವವಿದ್ಯಾಲಯಗಳು ಸಾಮರ್ಥ್ಯಕ್ಕಿಂತ ಹೆಚ್ಚು ಅಂತರರಾಷ್ಟ್ರೀಯ ವಿದ್ಯಾರ್ಥಿಗಳಿಗೆ ಪ್ರವೇಶ ನೀಡುತ್ತಿವೆ. ಅವರನ್ನು ಬಳಸಿಕೊಂಡು ತಮ್ಮ ಜೇಬು ತುಂಬಿ ಕೊಳ್ಳುತ್ತಿವೆ ಎಂದೂ ಅವರು ಹೇಳಿದ್ದಾರೆ.

ಹೊಸಬರನ್ನು ಸ್ವಾಗತಿಸುವಲ್ಲಿ ಹಾಗೂ ಅವರನ್ನು ಆರ್ಥಿಕತೆಯಲ್ಲಿ ಸೇರ್ಪಡೆ ಮಾಡಿಕೊಳ್ಳುವಲ್ಲಿ ಕೆನಡಾದ ವಲಸೆ ನೀತಿ ಬೇರೆಯವರಿಗಿಂತ ಉತ್ತಮವಾಗಿದೆ ಎಂದು ಟ್ರುಡ್ಯೂ ಸರ್ಕಾರ ಸಾಕಷ್ಟು ವರ್ಷಗಳಿಂದ ಹೇಳುತ್ತಾ ಬಂದಿತ್ತು.

ಟ್ರುಡ್ಯೂ ನೀತಿಯನ್ನು ತರಾಟೆಗೆ ತೆಗೆದುಕೊಂಡಿರುವ ಪ್ರತಿಪಕ್ಷವಾದ ಕನ್ಸರ್ವೇಟಿವ್ ಪಾರ್ಟಿ ನಾಯಕ ಪೀರೆ (4ನೇ ಪುಟಕ್ಕೆ)




# ಪೋಕ್ಸೋ : ಜಾಗೃತಿ ಹೆಚ್ಚಿಸಲು ಡಿಸಿ ಸೂಚನೆ



ದಾವಣಗೆರೆ, ಅ. 25- ಅನಾಥವಾಗಿರುವ ಮಕ್ಕಳನ್ನು ಹೆಚ್ಚು ದತ್ತು ಪ್ರಕ್ರಿಯೆಗೆ ಒಳಪಡಿಸಲು ಹಾಗೂ ಈ ಪ್ರಕ್ರಿಯೆಯನ್ನು ಕಾಲಮಿತಿಯಲ್ಲಿ ಪೂರ್ಣಗೊಳಿಸಲು ಮಕ್ಕಳ ರಕ್ಷಣಾಧಿಕಾರಿಗೆ ಜಿಲ್ಲಾಧಿಕಾರಿ ಗಂಗಾಧರಸ್ವಾಮಿ.ಜಿ.ಎಂ ಸೂಚನೆ ನೀಡಿದರು.

ಮಂಗಳವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ 2ನೇ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪೋಕ್ಸೋ ಪ್ರಕರಣದಲ್ಲಿ ದಾಖಲಾಗಿರುವ ಮಕ್ಕಳಿಗೆ ನ್ಯಾಯ ಒದಗಿಸಲು ಆರೋಪಿಗಳ ವಿರುದ್ಧ ತಕ್ಷಣ ಎಫ್.ಐ.ಆರ್ ದಾಖಲಿಸಬೇಕು. ಜಿಲ್ಲೆಯಲ್ಲಿ ಸಂಕಷ್ಟಗಳಿಗೆ ಒಳಗಾದ ಮಕ್ಕಳನ್ನು ಅನಾಥ, ಏಕಪೋಷಕ, ಶಾಲೆ ಬಿಟ್ಟ ಮಕ್ಕಳನ್ನು ಗುರುತಿಸಿ ಶಾಲೆಗಳಿಗೆ ದಾಖಲಿಸಿ, ಅವರ ವಿದ್ಯಾಭ್ಯಾಸ ಮುಂದುವರೆಸುವಂತೆ ಕ್ರಮವಹಿಸುವ ಜೊತೆಗೆ ಪ್ರಗತಿಯ ಬಗ್ಗೆ ಪರಿಶೀಲನೆ ಮಾಡಬೇಕು ಎಂದರು.

ಬಾಲನ್ಯಾಯ ಮಂಡಳಿ ಹಾಗೂ ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಬಾಕಿ ಇರುವ ಮಕ್ಕಳ ಎಲ್ಲಾ ಪ್ರಕರಣಗಳನ್ನು ಒಂದು ತಿಂಗಳ ಒಳಗಾಗಿ ಇತ್ಯರ್ಥಗೊಳಿಸುವಂತೆ ತಿಳಿಸಿದರು. ಬಾಲಕಾರ್ಮಿಕ, ಮಕ್ಕಳ ಸಾಗಾಣಿಕೆ ಹಾಗೂ ಮಕ್ಕಳು ಕಾಣೆಯಾಗುತ್ತಿರುವ ಮಾಹಿತಿಯ ಕರೆ ಮಕ್ಕಳ ಸಹಾಯವಾಣಿಗೆ ಬಂದ ತಕ್ಷಣ ಹತ್ತಿರದ ಪೊಲೀಸ್ ಠಾಣೆಗೆ ಮಾಹಿತಿ ನೀಡುವಂತೆ ಸೂಚಿಸಿದರು.

ಶಾಲೆ ಬಿಟ್ಟ ಮಕ್ಕಳ ಮಾಹಿತಿಯನ್ನು ಪಡೆದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಉಪನಿರ್ದೇಶಕರಿಗೆ ನೀಡಬೇಕು. ಶಿಕ್ಷಣ ಇಲಾಖೆಯಿಂದ ಶಾಲೆ ಬಿಟ್ಟಂತಹ ಮಕ್ಕಳನ್ನು ಗುರುತಿಸಿ ಮರು ಶಾಲೆಗೆ ದಾಖಲಿಸಲು ಕ್ರಮವಹಿಸುವಂತೆ ತಿಳಿಸಿದರು.

ಜಿಲ್ಲೆಯಲ್ಲಿ ನಡೆಯುತ್ತಿರುವ ಬಾಲ್ಯವಿವಾಹ ಪ್ರಕರಣಗಳ ಮಾಹಿತಿ ಬಂದ ಕೂಡಲೇ ನಿಯಮಾನುಸಾರ ಕ್ರಮ ಕೈಗೊಳ್ಳಲು ಮತ್ತು ಅವಶ್ಯಕತೆ ಇರುವ ಮಕ್ಕಳಿಗೆ ಹಾಸ್ಟೆಲ್ ವ್ಯವಸ್ಥೆ ಹಾಗೂ ಶಾಲೆಗೆ ದಾಖಲಿಸಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ತಿಳಿಸಿದರು.

ಎಲ್ಲಾ ಇಲಾಖೆ ಅಧಿಕಾರಿಗಳು ಸಹ ಸಂಕಷ್ಟಗಳಿಗೆ ಒಳಗಾದ ಮಕ್ಕಳಿಗೆ ಪೋಷಣೆ, ರಕ್ಷಣೆ, ಒದಗಿಸಲು ಸಹಭಾಗಿತ್ವ ಮತ್ತು ಸಮನ್ವಯತೆಯಿಂದ ಕಾರ್ಯನಿರ್ವಹಿಸಬೇಕು. ಯಾವುದೇ ಅಧಿಕಾರಿಗಳು ಮಕ್ಕಳ ಕ್ಷೇತ್ರ, ಕಾರ್ಯದ ವಿಷಯದಲ್ಲಿ ಬೇಜವಾಬ್ದಾರಿತನ ಮತ್ತು ನಿರ್ಲಕ್ಷ್ಯತನ ತೋರಿದಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್.ಬಿ. ಇಟ್ನಾಳ್, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ವಿಜಯಕುಮಾರ್ ಎಂ. ಸಂತೋಷ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ರಾಜಾನಾಯ್ಕ, ಪಾಲಿಕೆ ಆಯುಕ್ತರಾದ ರೇಣುಕಾ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

# ಕುರ್ಕಿಯಲ್ಲಿ ಕನ್ನಡ ಜ್ಯೋತಿ ರಥಕ್ಕೆ ಭವ್ಯ ಸ್ವಾಗತ



ದಾವಣಗೆರೆ, ಅ.25- ಮಂಡ್ಯದಲ್ಲಿ ನಡೆಯುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಕನ್ನಡ ಜ್ಯೋತಿ ರಥಯಾತ್ರೆ ರಾಜ್ಯಾದ್ಯಂತ ಸಂಚರಿಸುತ್ತಾ ದಾವಣಗೆರೆ ಮೂಲಕ ಕುರ್ಕಿ ಗ್ರಾಮಕ್ಕೆ ಬಂದಾಗ ಅದ್ದೂರಿಯಾಗಿ ಸ್ವಾಗತಿಸಲಾಯಿತು. ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಕೆ.ಜಿ. ನಾಗಮ್ಮ ಪುಷ್ಪ ಮಾಲೆ ಹಾಕುವುದರ ಮೂಲಕ ಸ್ವಾಗತಿಸಿದರು.

ಹಾವೇರಿಯಲ್ಲಿ ನಡೆದ 86ನೇ ಸಾಹಿತ್ಯ ಸಮ್ಮೇಳನ ನಡೆದ ಸಂದರ್ಭದಲ್ಲಿಯೂ ಕುರ್ಕಿ ಗ್ರಾಮಕ್ಕೆ ಕನ್ನಡ ಜ್ಯೋತಿ ರಥ ಬಂದಿತ್ತು. ಈಗ ಮತ್ತೆ ನಮ್ಮ ಗ್ರಾಮದ ಮೂಲಕ ಹಾಯ್ದು ಹೋಗುತ್ತಿರುವುದು ನಮ್ಮ ಅದೃಷ್ಟ. ಹಾಗೆಯೇ ನಮ್ಮ ಗ್ರಾಮದವರಿಗೆ ಸಂತೋಷವನ್ನುಂಟು ಮಾಡಿದೆ ಎಂದು ಹಿರಿಯ ಸಾಹಿತಿ ಎಸ್. ಸಿದ್ದೇಶ್ ಕುರ್ಕಿ ಸ್ಮರಿಸಿದರು.

ಓದೋಗೌಡ್ರು ರೇವಣಸಿದ್ಧಪ್ಪ ಅವರು ರಥಯಾತ್ರೆಯ ರೂಪುರೇಷೆಗಳ ಬಗ್ಗೆ ಮಾತನಾಡಿದರು. ಜಗದೀಶ ಕೂಲಂಬಿ ಸಾಹಿತ್ಯ ಸಮ್ಮೇಳನ ನಡೆಯುವುದರ ಬಗ್ಗೆ ತಿಳಿಸಿದರು.

ವಾದ್ಯ ಮೇಳದೊಂದಿಗೆ ಒಂದು ಕಿ.ಮೀ. ವರೆಗೂ ಮೆರವಣಿಗೆ ಮಾಡಿ ಬೀಳ್ಕೊಡಲಾಯಿತು.

ಮೆರವಣಿಗೆಯಲ್ಲಿ ಎ.ಎಂ. ಸಿದ್ದೇಶ್, ನಂದ್ಯಪ್ಪ, ಕೆ.ಜಿ.ಬಸವರಾಜಪ್ಪ, ಹೆಚ್. ಜಿ. ಮಲ್ಲಿಕಾರ್ಜುನ, ಅಜ್ಜಯ್ಯ, ರವಿ, ಅಂಗಡಿ ಮಹೇಶ್, ನಾಗರಾಜ, ಕೆ.ವಿ.ಓಂಕಾರಪ್ಪ, ಶಾಲೆಯ ಮುಖ್ಯ ಶಿಕ್ಷಕರಾದ ಮೀರಾ ಮತ್ತು ಇತರರು ಭಾಗವಹಿಸಿದ್ದರು.

## ಸೊರಟೂರು ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಕಲ್ಯಾಣಿ ಮರಿಯಪ್ಪ



ಹೊನ್ನಾಳಿ, ಅ. 25 - ತಾಲ್ಲೂಕಿನ ಸೊರಟೂರು ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಕೆ. ಕಲ್ಯಾಣಿ ಮರಿಯಪ್ಪ ಇವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಡಾ. ವಿಶ್ವನಟೇಶ್ ಘೋಷಿಸಿದರು.

ಹಿಂದಿನ ಅಧ್ಯಕ್ಷರಾಗಿದ್ದ ಪರಶುರಾಮರಾಮ್ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಬೇರೆ ಸದಸ್ಯರು ಯಾರೂ ನಾಮಪತ್ರ ಸಲ್ಲಿಸದೇ ಇರುವುದರಿಂದ ಕೆ. ಕಲ್ಯಾಣಿ ಮರಿಯಪ್ಪ ಅವರು ಶುಕ್ರವಾರ ಅಧ್ಯಕ್ಷರಾಗಿ ಆಯ್ಕೆಗೊಂಡರು.

ಈ ಸಂದರ್ಭದಲ್ಲಿ ಶಾಸಕ ಡಿ.ಜಿ. ಶಾಂತನಗೌಡ, ಕಾಂಗ್ರೆಸ್ ಮುಖಂಡ ಹೆಚ್.ಬಿ. ಮಂಜಪ್ಪ, ಹೆಚ್.ಎ. ಉಮಾಪತಿ, ಗ್ರಾ.ಪಂ. ಮಾಜಿ ಅಧ್ಯಕ್ಷ ಜಿ. ಬಸವನಗೌಡ ಪಾಟೀಲ್, ಉಪಾಧ್ಯಕ್ಷೆ ರಾಧಮ್ಮ, ಸದಸ್ಯರಾದ ವಿರೂಪಾಕ್ಷಪ್ಪ, ಹನುಮಂತಪ್ಪ, ಮರಿಯಪ್ಪ, ರಾಧಮ್ಮ, ನಾಗರತ್ನಬಾಯಿ, ಕೆಂಚಮ್ಮ, ರಂಜಿತಾ, ಸುಮಾ, ಪಿಡಿಒ ಎನ್. ನಾಗರಾಜ್, ಕಾರ್ಯದರ್ಶಿ ಹಳದಪ್ಪ ಗ್ರಾಮದ ಮುಖಂಡ ಶಿವನಗೌಡ, ಎಂ. ಬಸವಣ್ಯಪ್ಪ, ಚಂದ್ರಪ್ಪ ಮಾಸ್ಟರ್, ಒ. ಹನುಮಪ್ಪ, ಎನ್. ನಾಗೇಶ್‌ರಾವ್, ಕೆ.ಬಿ. ರಾಮನಗೌಡ ಇನ್ನಿತರರಿದ್ದರು.

## ನಗರದಲ್ಲಿಂದು ಯುಗಧರ್ಮ ಪ್ರತಿಷ್ಠಾನದ ಉದ್ಘಾಟನೆ, ಕೃತಿಗಳ ಲೋಕಾರ್ಪಣೆ

ದಾವಣಗೆರೆ, ಅ. 25- ಯುಗಧರ್ಮ ಪ್ರತಿಷ್ಠಾನ ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ನಾಳೆ ದಿನಾಂಕ 26 ರ ಶನಿವಾರ ಬೆಳಿಗ್ಗೆ 11 ಗಂಟೆಗೆ ನಗರದ ಕುವೆಂಪು ಕನ್ನಡ ಭವನದಲ್ಲಿ ಯುಗಧರ್ಮ ಪ್ರತಿಷ್ಠಾನದ ಉದ್ಘಾಟನೆ ಹಾಗೂ ಯುಗಧರ್ಮ ರಾಮಣ್ಣ ವಿರಚಿತ ಆರು ಕೃತಿಗಳ ಲೋಕಾರ್ಪಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಪ್ರತಿಷ್ಠಾನದ ಅಧ್ಯಕ್ಷ ರಾಧಾಕೃಷ್ಣ ಪಲ್ಲಕ್ಕಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್, ಜಗಳೂರು ಶಾಸಕ ಬಿ. ದೇವೇಂದ್ರಪ್ಪ ಕೃತಿಗಳ ಲೋಕಾರ್ಪಣೆ ಮಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವಿಚಂದ್ರ, ಪ್ರತಿಷ್ಠಾನದ ಕಾರ್ಯದರ್ಶಿ ನವೀನ್ ಚನ್ನಗಿರಿ ಭಾಗವಹಿಸಲಿದ್ದಾರೆ.

ತ್ರಿಪದಿಗಳು, ಕನ್ನಡಮ್ಮನ ತೇರು, ಬ್ರಹ್ಮಾಂಡ, ತತ್ವಪದ, ನಿಶ್ಯಬ್ಧ ಪುಸ್ತಕ, ವಚನಗಳ ಕುರಿತು ಹಲವು ಗಣ್ಯರು ಮಾತನಾಡಲಿದ್ದಾರೆ. ಈ ಪ್ರತಿಷ್ಠಾನದ ಪ್ರಥಮ ವರ್ಷದ ಯುಗಧರ್ಮ ಪ್ರಶಸ್ತಿಗೆ ಚಿಕ್ಕಜಾಜೂರಿನ ವರದಿಗಾರ ಎಸ್.ಎಂ.ಆರ್. ಮಹೇಂದ್ರಪ್ಪ ಆಯ್ಕೆಯಾಗಿದ್ದು, ಅವರನ್ನು ಇದೇ ವೇಳೆ ಸನ್ಮಾನಿಸಲಾಗುವುದು ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಕಸಾಪ ಪದಾಧಿಕಾರಿಗಳಾದ ರಾಘವೇಂದ್ರ ನಾಯರಿ, ಬಿ. ದಿಳ್ಳೆಪ್ಪ ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ಸಾಹಿತ್ಯ - ಸಂವಾದ

ನಿಟ್ಟೂರು ಬಜ್ಜಿ ಹನುಮಂತಪ್ಪ ಚಾರಿಟೆಬಲ್ ಟ್ರಸ್ಟ್ (ದಾವಣಗೆರೆ) ಹಾಗೂ ತಿಂಗಳ ಅಂಗಳ ಸಾಹಿತ್ಯ ಸಾಂಸ್ಕೃತಿಕ ಬಳಗ (ದಾವಣಗೆರೆ) ಇವರ ಸಂಯುಕ್ತಾಶ್ರಯದಲ್ಲಿ ರೋಟರಿ ಬಾಲ ಭವನದಲ್ಲಿ ಇಂದು ಸಂಜೆ 4 ಗಂಟೆಗೆ ಸಾಹಿತ್ಯ - ಸಂವಾದ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಕಾರ್ಯಕ್ರಮ ಸಂಯೋಜಕ ಮಹಾಂತೇಶ್ ಬಿ. ನಿಟ್ಟೂರು ಹಾಗೂ ಸಂಚಾಲಕರಾದ ಗಂಗಾಧರ ಬಿ. ಎಲ್. ನಿಟ್ಟೂರ್ ತಿಳಿಸಿದ್ದಾರೆ.

ಕೃಷಿ ವಿಜ್ಞಾನಿ ಮತ್ತು ಸಾಹಿತಿಗಳಾದ ಕೆ.ಎನ್. ಗಣೇಶಯ್ಯ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಸಾಹಿತಿ ಪ್ರೊ. ರಾಘವೇಂದ್ರ ಪಾಟೀಲ್, ಧಾರವಾಡ ಅವರು ಚಿಂತಕರಾಗಿ ಭಾಗವಹಿಸುವರು.

ಸಾಹಿತಿಗಳಾದ ಬಿ.ಎನ್. ಮಲ್ಲೇಶ್, ಬಾ.ಮ.ಬಸವರಾಜಯ್ಯ, ಡಾ. ದಾದಾಪೀರ್ ನವಿಲೇಹಾಳ್, ಓಂಕಾರಯ್ಯ ತವನಿಧಿ, ಡಾ.ಆನಂದ್ ಋಗ್ವೇದಿ, ಶಿವಯೋಗಿ ಹಿರೇಮಠ್, ರಾಜಶೇಖರ ಗುಂಡಗತ್ತಿ, ಸುಬ್ರಹ್ಮಣ್ಯ ನಾಡಿಗೇರ್, ವೀರಭದ್ರಪ್ಪ ತೆಲಿಗಿ, ಪಾಪು ಗುರು ಸಂವಾದದಲ್ಲಿ ಪಾಲ್ಗೊಳ್ಳುವರು.

## ಜಗಳೂರಿನಲ್ಲಿ ಇಂದು ವಿದ್ಯುತ್ ವ್ಯತ್ಯಯ

ಜಗಳೂರು ಟೌನ್ ವಿ.ವಿ. ಕೇಂದ್ರದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಎನ್.ಜೆ.ವೈ ಮಾರ್ಗ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಗ್ಗೆ 10ರಿಂದ ಸಂಜೆ 5ರ ವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ಬಸವಾಪಟ್ಟಣದಲ್ಲಿ ಇಂದು ಅಂತರ ಕಾಲೇಜು ಗುಡ್ಡಗಾಡು ಓಟದ ಸ್ಪರ್ಧೆ

ದಾವಣಗೆರೆ, ಅ.25- ಬಸವಾಪಟ್ಟಣ ಜನತಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದಾವಣಗೆರೆ ವಿಶ್ವವಿದ್ಯಾನಿಲಯ ಹಾಗೂ ದಾವಿವಿ ದೈಹಿಕ ಶಿಕ್ಷಣ ನಿರ್ದೇಶಕರ ಸಂಘದ ಸಂಯುಕ್ತಾಶ್ರಯದಲ್ಲಿ ನಾಳೆ ದಿನಾಂಕ 26 ರ ಶನಿವಾರ ಕಾಲೇಜಿನ ಮೈದಾನದಲ್ಲಿ 2024-25 ನೇ ಸಾಲಿನ ದಾವಣಗೆರೆ ವಿವಿ ಅಂತರ ಕಾಲೇಜು ಪುರುಷ ಮತ್ತು ಮಹಿಳೆಯರ ಗುಡ್ಡಗಾಡು ಓಟದ ಸ್ಪರ್ಧೆ, ದಾವಣಗೆರೆ ವಿವಿ ತಂಡದ ಆಯ್ಕೆ ಪ್ರಕ್ರಿಯೆ ನಡೆಯಲಿದೆ ಎಂದು ಜನತಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯ ಡಾ.ಟಿ.ಮಂಜಣ್ಣ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ನಾಳೆ ದಿನಾಂಕ 26 ರ ಶನಿವಾರ ಬೆಳಿಗ್ಗೆ 6 ಗಂಟೆಗೆ ಗುಡ್ಡಗಾಡು ಓಟದ ಸ್ಪರ್ಧೆ ನಡೆಯಲಿದೆ ಎಂದು ಹೇಳಿದರು.

ಶಾಸಕ ಕೆ.ಎಸ್.ಬಸವಂತಪ್ಪ ಸ್ಪರ್ಧೆಗೆ ಚಾಲನೆ ನೀಡಲಿದ್ದು, ಮುಖ್ಯ ಅತಿಥಿಗಳಾಗಿ ಬಸವಾಪಟ್ಟಣದ ಗ್ರಾ.ಪಂ. ಅಧ್ಯಕ್ಷ ಬಿ.ಜಿ. ಸಚಿನ್, ಉಪಾಧ್ಯಕ್ಷೆ ಕುಸುಮಾ ಬಸವರಾಜಪ್ಪ, ದಾವಣಗೆರೆ ವಿವಿ ದೈಹಿಕ ಶಿಕ್ಷಣ ನಿರ್ದೇಶಕರ ಸಂಘದ ಕಾರ್ಯದರ್ಶಿ ಡಾ.ಕೆ.ಎಂ. ವೀರೇಂದ್ರ, ದಾವಣಗೆರೆ ವಿವಿ ಕ್ರೀಡಾಧಿಕಾರಿ ಡಾ. ಬಿ.ಹೆಚ್. ವೀರಪ್ಪ, ಬಸವಾಪಟ್ಟಣದ ಜನತಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ದೈಹಿಕ ಶಿಕ್ಷಣ ಅತಿಥಿ ಉಪನ್ಯಾಸಕರಾದ ಡಾ. ಡಿ. ಆಶಾ ಮತ್ತಿತರರು ಭಾಗವಹಿಸುವರು. ಪ್ರಾಚಾರ್ಯ ಡಾ.ಟಿ. ಮಂಜಣ್ಣ ಅಧ್ಯಕ್ಷತೆ ವಹಿಸಲಿದ್ದಾರೆ.

ಅಂದು ಬೆಳಿಗ್ಗೆ 10 ಗಂಟೆಗೆ ಸಮಾರೋಪ ಸಮಾರಂಭ ನಡೆಯಲಿದ್ದು, ಶಾಸಕ ಕೆ.ಎಸ್. ಬಸವಂತಪ್ಪ ಬಹುಮಾನ ವಿತರಣೆ ಮಾಡುವರು. ಗ್ರಾ.ಪಂ. ಅಧ್ಯಕ್ಷ ಬಿ.ಜಿ. ಸಚಿನ್, ಉಪಾಧ್ಯಕ್ಷೆ ಕುಸುಮಾ ಬಸವರಾಜಪ್ಪ, ದಾವಣಗೆರೆ ಶಿಕ್ಷಣ ನಿಕಾಯ ಮತ್ತು ದೈಹಿಕ ಶಿಕ್ಷಣ ನಿರ್ದೇಶಕ (ಪ್ರಭಾರಿ) ಹಾಗೂ ಡೀನ್ ಡಾ. ಕೆ. ವೆಂಕಟೇಶ್, ದಾವಣಗೆರೆ ವಿವಿ ದೈಹಿಕ ನಿರ್ದೇಶಕರ ಸಂಘದ ಮಹಿಳಾ ಉಪಾಧ್ಯಕ್ಷೆ ಎಂ.ಆರ್. ರೇಖಾ, ದೈಹಿಕ ಶಿಕ್ಷಣ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ. ಸಿ. ಅಭಯಾ ಪ್ರಕಾಶ್, ಬಸವಾಪಟ್ಟಣದ ಕಾಲೇಜಿನ ಸಹ ಪ್ರಾಧ್ಯಾಪಕ ಡಾ.ಎಂ. ಆರ್. ಲೋಕೇಶ ಮತ್ತಿತರರು ಆಗಮಿಸಲಿದ್ದಾರೆ.

ಡಾ. ಕೆ.ಎಂ.ವೀರೇಂದ್ರ, ಡಾ. ಡಿ. ಆಶಾ, ಡಾ.ಎಂ.ಆರ್. ರೇಖಾ, ಹರೀಶ್, ಹನುಮಂತ ಇತರರು ಪತ್ರಿಕಾಗೋಷ್ಠಿಯಲ್ಲಿ

### ನ.1ಕ್ಕೆ ಬೈಕ್ ರ್‍ಯಾಲಿ

ದಾವಣಗೆರೆ, ಅ.25- ಕಲಾಕುಂಚ ಸಂಸ್ಥೆಯಿಂದ ನವೆಂಬರ್ 1ರ ಶುಕ್ರವಾರ ಬೆಳಗ್ಗೆ 8 ಗಂಟೆಗೆ ರಾಜ್ಯೋತ್ಸವ ಹಾಗೂ ಮಹಿಳೆಯರಿಂದ ಬೈಕ್ ರ್‍ಯಾಲಿ ನಡೆಯಲಿದೆ.

## ಹೊನ್ನಾಳಿ: ವಿಜಯೋತ್ಸವಕ್ಕೆ ಮೆರಗು ತಂದ ಕೇಂದ್ರ ಸರ್ಕಾರ



ಹೊನ್ನಾಳಿ, ಅ. 25 - ಮಹಿಳೆಯರಿಗೆ ಸದಾ ಸ್ಫೂರ್ತಿ ಹಾಗೂ ಪ್ರೇರಣೆಯಾಗಿರುವ ಕಿತ್ತೂರು ರಾಣಿ ಚೆನ್ನಮ್ಮ ಬ್ರಿಟೀಷರ ವಿರುದ್ಧ ಹೋರಾಡಿ ಗೆದ್ದ ವಿಜಯೋತ್ಸವ ಸಂಭ್ರಮಾಚರಣೆ ದಿನವನ್ನು ನಾವೆಲ್ಲರೂ ಆಚರಿಸುವುದೇ ಒಂದು ಸಂಭ್ರಮದ ದಿನವಾಗಿದೆ ಎಂದು ಉಪವಿಭಾಗಾಧಿಕಾರಿ ಅಭಿಷೇಕ್ ತಿಳಿಸಿದರು.

ಹೊನ್ನಾಳಿ ತಾಲ್ಲೂಕು ಆಡಳಿತದಿಂದ ನಿನ್ನೆ ನಡೆದ ಕಿತ್ತೂರು ಚನ್ನಮ್ಮ 200ನೇ ವಿಜಯೋತ್ಸವ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪಂಚಮಸಾಲಿ ಸಮಾಜದ ತಾಲ್ಲೂಕು ಅಧ್ಯಕ್ಷ ಬೆನಕನಹಳ್ಳಿ ವೀರಣ್ಣ ಮಾತನಾಡಿ, ರಾಣಿ ಚನ್ನಮ್ಮನ ಗೆಲುವಿನ ಸಂಭ್ರಮದ ಸವಿನೆನಪಿಗಾಗಿ ಕೇಂದ್ರ ಸರ್ಕಾರ ಅಂಚೆ ಚೀಟಿ ಬಿಡುಗಡೆಗೊಳಿಸುವ ಆದೇಶದ ಮೂಲಕ ಈ ದಿನವನ್ನು ಸ್ಮರಣೆಯ ದಿನವನ್ನಾಗಿಸುವುದರೊಂದಿಗೆ ಚನ್ನಮ್ಮನ ಸ್ವಾಭಿಮಾನಿ ಹಾಗೂ ದಿಟ್ಟತನದ ಹೋರಾಟಕ್ಕೆ ಗೌರವ ಸಲ್ಲಿಸಿದೆ ಎಂದರು.

ಪಂಚಮಸಾಲಿ ಸಮಾಜದ ರಾಜ್ಯ ಸಂಘಟನಾ ಕಾರ್ಯದರ್ಶಿ ಪಟ್ಟಣ ಶೆಟ್ಟಿ ಪರಮೇಶ್ ಮಾತನಾಡಿದರು. ಕಿತ್ತೂರು ಚನ್ನಮ್ಮ ಬಗ್ಗೆ ಪತ್ರಕರ್ತ ಗಿರೀಶ್ ನಾಡಿಗ್ ಇವರಿಂದ ಉಪನ್ಯಾಸ ನಡೆಯಿತು.

ಈ ಸಂದರ್ಭದಲ್ಲಿ ತಹಶೀಲ್ದಾರ್ ಪಟ್ಟರಾಜೇಗೌಡ, ಪಂಚಮಸಾಲಿ ಯುವ ಘಟಕದ ಅಧ್ಯಕ್ಷ ಹಾಲೇಶ ರಾಂಪುರ, ಉಪಾಧ್ಯಕ್ಷ ಮೃತ್ಯುಂಜಯ ಪಾಟೀಲ್, ಚಂದ್ರಶೇಖರ, ಮಹಿಳಾ ಪದಾಧಿಕಾರಿಗಳಾದ ಶಿಲ್ಪಾ ರಾಜುಗೌಡ, ಕವಿತಾ ಚನ್ನೇಶ್, ರೈತ ಮುಖಂಡರಾದ ಹಿರೇಮಠ ಬಸವರಾಜಪ್ಪ, ಅರಬಗಟ್ಟೆ ಬಸಪ್ಪ ಇನ್ನಿತರರಿದ್ದರು.

# ಲೋಕಾಯುಕ್ತ ಬಲೆಗೆ ಹರಿಹರ ನಗರಸಭೆ ಕಂದಾಯ ಇಲಾಖೆ ನೌಕರರು

ಹರಿಹರ, ಅ.25- ಇಲ್ಲಿನ ನಗರಸಭೆಯ ಪ್ರಥಮ ದರ್ಜೆ ಕಂದಾಯ ನಿರೀಕ್ಷಕ ನಾಗೇಶ್ ಹಾಗೂ ಕಂದಾಯ ಅಧಿಕಾರಿ ಯು. ರಮೇಶ್ ಅವರು 20 ಸಾವಿರ ರೂ. ಲಂಚ ಪಡೆಯುವಾಗ ಲೋಕಾಯುಕ್ತರ ಬಲೆಗೆ ಬಿದ್ದಿದ್ದಾರೆ.

ರಾಣೇಬೆನ್ನೂರು ನಗರದ ರಾಜು ಲಕ್ಷ್ಮಣ್ ಕಾಂಬ್ಳೆ ಎಂಬಾತ ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು. ತನ್ನ ಸಹೋದರ ಬಾಬು ಹರಿಹರ ನಗರದ ಹೊರ ವಲಯದ ರಾಷ್ಟ್ರೀಯ ಹೆದ್ದಾರಿ ಬಳಿಯ ಶ್ರೀದೇವಿ ಪೆಟ್ರೋಲ್ ಬಂಕ್ ನ ನಿವೇಶನದ ಸುಮಾರು 3-4 ವರ್ಷಗಳ ಕಂದಾಯ ಪಾವತಿಸಬೇಕಿತ್ತು. ಹರಿಹರ ನಗರಸಭೆಯ ಪ್ರಥಮ ದರ್ಜೆ ಕಂದಾಯ ನಿರೀಕ್ಷಕ ನಾಗೇಶ್ ಹಾಗೂ ಕಂದಾಯ ಅಧಿಕಾರಿ ಯು. ರಮೇಶ ಅವರು ನಿವೇಶನಕ್ಕೆ ಪ್ರಸಕ್ತ ಸಾಲಿನಲ್ಲಿ ಸರ್ಕಾರ ನಿಗದಿಪಡಿಸಿದ ಕಂದಾಯದ ಮೊತ್ತ 1,39,400 ರೂ.ಗಳನ್ನು ಪಾವತಿಸಬೇಕಾಗುತ್ತದೆ ಎಂದು ತಿಳಿಸಿದ್ದರು.

### ಹರಿಹರ ಇತಿಹಾಸದಲ್ಲೇ ಅತಿ ಹೆಚ್ಚು ಅಧಿಕಾರಿಗಳು ಲೋಕಾಯುಕ್ತ ಬಲೆಗೆ

ಹರಿಹರ ನಗರಸಭೆಯ ಇತಿಹಾಸದಲ್ಲೇ ಇಷ್ಟೊಂದು ಅಧಿಕಾರಿಗಳು, ಸಿಬ್ಬಂದಿಗಳು ಲೋಕಾಯುಕ್ತ ಬಲೆಗೆ ಬಿದ್ದಿರುವ ಉದಾಹರಣೆ ಇರಲಿಲ್ಲ. ಆದರೆ ಇತ್ತೀಚಿನ ವರ್ಷಗಳಲ್ಲಿ ನಗರಸಭೆ ಸಿಬ್ಬಂದಿ ಮಂಜುನಾಥ್, ಇಂಜಿನಿಯರ್ ಅಬ್ದುಲ್ ಹಮ್ಮಿದ್, ಪೌರಾಯುಕ್ತ ಐಗೂರ್ ಬಸವರಾಜ್, ಇದೀಗ ನಾಗೇಶ್ ,ಯು.ರಮೇಶ್ ಇವರುಗಳು ಲೋಕಾಯುಕ್ತರು ಬೀಸಿದ ಬಲೆಗೆ ಬಿದ್ದಿದ್ದಾರೆ.

ಈ ಹಿಂದೆ ಬಿಇಓ ಸಿದ್ದಪ್ಪ, ತಾ.ಪಂ. ಇಓ ರವಿಕುಮಾರ್, ಬೆಸ್ಕಾಂ ಇಲಾಖೆ ಕರಿಬಸಯ್ಯ, ಅಬಕಾರಿ ಇಲಾಖೆ ಶಿಲಾ, ನೊಂದಣಿ ಇಲಾಖೆಯ ಪರಮೇಶ್ವರ ರವರು ಸೇರಿದಂತೆ, ಇತರೆ ಅಧಿಕಾರಿಗಳು, ಸಿಬ್ಬಂದಿಗಳು ಒಬ್ಬರ ಮೇಲೆ ಒಬ್ಬರು ಲೋಕಾಯುಕ್ತರು ಬೀಸಿದ ಬಲೆಗೆ ಬಿದ್ದಿರುವುದರಿಂದ ಹರಿಹರ ನಗರಕ್ಕೆ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಕರ್ತವ್ಯವನ್ನು ನಿರ್ವಹಿಸುವುದಕ್ಕೆ ಮುಂದೆ ಬರಲು ಮನಸ್ಸು ಮಾಡದೇ ಇರುವುದನ್ನು ಕಾಣಬಹುದಾಗಿದೆ.

ಮತ್ತೆ ಕೆಲವರನ್ನು ಒತ್ತಾಯ ಪೂರ್ವಕವಾಗಿ ಕರೆದುಕೊಂಡು ಬಂದಿರುವ ಘಟನೆ ಕೂಡ ನಡೆಯುತ್ತಿರುವುದನ್ನು ಕಾಣಬಹುದಾಗಿದೆ.

ಮೊತ್ತ ಕಡಿಮೆ ಮಾಡಲು 20 ಸಾವಿರ ರೂ. ಲಂಚಕ್ಕೆ ಬೇಡಿಕೆ ಇಟ್ಟಿದ್ದರು ಎಂದು ದೂರಲಾಗಿದೆ. ಲಂಚದ ಹಣ ನೀಡಲು ಒಪ್ಪದ ಲಕ್ಷ್ಮಣ ಕಾಂಬ್ಳೆ, ನಗರಸಭೆ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಜರುಗಿಸುವಂತೆ ದಾವಣಗೆರೆ ಲೋಕಾಯುಕ್ತ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಅ. 25 ರಂದು 20 ಸಾವಿರ ರೂ. ಲಂಚ ಸ್ವೀಕರಿಸುವ ಸಂದರ್ಭದಲ್ಲಿ ಕಾರ್ಯಾಚರಣೆ ನಡೆಸಿದ ಕಂದಾಯ ಅಧಿಕಾರಿ ರಮೇಶ್ ಹಾಗೂ ನಿರೀಕ್ಷಕ ನಾಗೇಶ್ ಇಬ್ಬರನ್ನೂ ವಶಕ್ಕೆ ಪಡೆದು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಎಂ.ಎಸ್. ಕೌಲಾಪೂರೆ, ಉಪಾಧೀಕ್ಷಕಿ ಕೆ. ಕಲಾವತಿ ಮಾರ್ಗದರ್ಶನದಲ್ಲಿ ಪೊಲೀಸ್ ನಿರೀಕ್ಷಕರಾದ ಮಧುಸೂದನ್, ಪ್ರಭು ಸೂರಿನ್, ಪಿ. ಸರಳ ಹಾಗೂ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ತೊಡಗಿದ್ದರು.

# ಮಾದಿಗ ಸಮಾಜದ ಆಸ್ತಿ ಉಳಿವಿಗಾಗಿ ಪ್ರತಿಭಟನೆ




ಚಳ್ಳಕೆರೆ, ಅ.25- ತಾಲ್ಲೂಕಿನ ಸಮಸ್ತ ಮಾದಿಗ ಸಮಾಜದ ಕೋಟ್ಯಾಂತರ ರೂ. ಬೆಲೆ ಬಾಳುವ ಆಸ್ತಿಯನ್ನು ಅತಿಕ್ರಮಣ ಮಾಡುವಂತಹ ಕಾನೂನು ಬಾಹಿರ ಕೆಲಸದ ವಿರುದ್ಧ ಪ್ರತಿಯೊಬ್ಬ ಪ್ರಜ್ಞಾವಂತ ಮಾದಿಗ ಬಂಧುಗಳು ಪ್ರತಿಭಟಿಸಲೇ ಬೇಕಾದ ಅನಿವಾರ್ಯತೆ ಮತ್ತು ಹೋರಾಟ ಮಾಡಿ ನಮ್ಮ ಆಸ್ತಿ ಉಳಿಸಬೇಕಾಗಿದೆ ಎಂದು ಇಲ್ಲಿಯ ನಗರಸಭೆ ಮುಂಭಾಗದಲ್ಲಿ ಧರಣಿನಿರತ ನಗರಸಭೆ ಮಾಜಿ ಸದಸ್ಯ ಎಂ. ಶಿವಮೂರ್ತಿ ಹೇಳಿದರು.

ನಮ್ಮ ಪೂರ್ವಜರು ಸಮಾಜದ ಏಳಿಗೆಗಾಗಿ ಒದಗಿಸಿರುವ ಚಳ್ಳಕೆರೆ ನಗರದಲ್ಲಿ ಹೊಂದಿಕೊಂಡಿರುವ ಕುಲುಮೆ ರಸ್ತೆ ಮತ್ತು ಚರ್ಮ ಹದ ಮಾಡುವ ಕೈಗಾರಿಕೆ ಹಾಗೂ ಚರ್ಮ ಮಾರಾಟ ಮಾಡುವ ಮಳಿಗೆಯನ್ನು ಮತ್ತು ಚಿತ್ರದುರ್ಗ ರಸ್ತೆಯಲ್ಲಿರುವ ಜಗಜೀವನ್ ರಾಂ ಸಮುದಾಯ ಭವನ ಮತ್ತು ಪುರಸಭಾ ಕಲ್ಯಾಣ ಮಂಟಪ ಅನ್ಯ ಧರ್ಮೀಯರ ಪಾಲಾಗುವ ಪರಿಸ್ಥಿತಿ ಬಂದಿದೆ ಎಂದು ಅವರು ವ್ಯಾಕುಲತೆ ವ್ಯಕ್ತಪಡಿಸಿದರು.

ಜಲಮಂಡಳಿ ಅಧಿಕಾರಿ ಕೆ.ನಾಗರಾಜ್, ಬ್ಯಾಂಕಿನ ಅಧಿಕಾರಿ ಅಂಜನಪ್ಪ, ಬ್ಯಾಂಕ್ ಶಿವಮೂರ್ತಿ, ನಾಮ ನಿರ್ದೇಶಿತ ಸದಸ್ಯರಾದ ಇಂದ್ರೇಶ್, ವೀರಭದ್ರಪ್ಪ, ಎಸ್.ಸಿ.ಪಿ.ಇ.ಸಿ. ಎಲ್. ಶಾಂತಕುಮಾರ್, ಮೇತ್ರಿ ದೇಮಯ್ಯ, ಪಿ. ಹೆಚ್. ವೀರಣ್ಣ, ಪತ್ರಕರ್ತರಾದ ಸಿ. ವೈ. ಗಂಗಾಧರ್, ಚೌಡಪ್ಪ, ವಕೀಲರಾದ ಕಾಂತರಾಜ್, ಮಹೇಶ್ ಕೊರ್ತಿಕುಂಟೆ, ಪತ್ರಕರ್ತ ತಿಪ್ಪೇಸ್ವಾಮಿ, ಗಂಗಾಧರ್ ಮತ್ತು ಇತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

## ಲೋಕಿಕೆರೆಯಲ್ಲಿ ಮೂಲಭೂತ ಸೌಕರ್ಯಗಳ ಕೊರತೆ

**ಗ್ರಾಮಸ್ಥರ ದೂರು**

ದಾವಣಗೆರೆ, ಅ. 25- ತಾಲ್ಲೂಕಿನ ಲೋಕಿಕೆರೆ ಗ್ರಾಮದಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಇದ್ದು, ಕೂಡಲೇ ಸಂಬಂಧಿಸಿದ ಅಧಿಕಾರಿಗಳು ಸ್ಪಂದಿಸದಿದ್ದಲ್ಲಿ ಗ್ರಾಮಕ್ಕೆ ಆಗಮಿಸುವ ಶಾಸಕರು, ಸಚಿವರು ಹಾಗೂ ಅಧಿಕಾರಿಗಳಿಗೆ ಘೇರಾವ್ ಹಾಕಲಾಗುವುದು ಮತ್ತು ನ್ಯಾಯಾಲಯದಲ್ಲಿ ಪಿಐಎಲ್ ಹಾಕುವುದಾಗಿ ಗ್ರಾಮಸ್ಥರು ಎಚ್ಚರಿಕೆ ನೀಡಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಗ್ರಾಮದ ಮುಖಂಡ ಪುರಂದರ್ ಲೋಕಿಕೆರೆ ಅವರು, ಜಲಜೀವನ ಮಿಷನ್ ಯೋಜನೆಯಲ್ಲಿ ಕೋಟಿಗಟ್ಟಲೆ ಅವ್ಯವಹಾರ ನಡೆದಿದ್ದು, ಯೋಜನೆಯಡಿ ಕಾಮಗಾರಿ ಕೂಡ ಕಳಪೆಯಿಂದ ಕೂಡಿದೆ. ಎರಡು ವರ್ಷಗಳಿಂದ ಜನರಿಗೆ ಶುದ್ಧ ಕುಡಿಯುವ ನೀರಿನ ಸರಬರಾಜು ಆಗುತ್ತಿಲ್ಲ ಎಂದು ಆರೋಪಿಸಿದರು.

ಪ್ರಾಥಮಿಕ ಆರೋಗ್ಯ ಕೇಂದ್ರವಿದ್ದರೂ ವೈದ್ಯರುಗಳ ಹಾಗೂ ಸಿಬ್ಬಂದಿಗಳ ಕೊರತೆ ಇದ್ದು, ಇಷ್ಟೆಲ್ಲಾ ಸಮಸ್ಯೆಗಳಿದ್ದರೂ ಶಾಸಕರು ಇತ್ತ ಕಡೆ ಗಮನಹರಿಸುತ್ತಿಲ್ಲ. ಮುಖ್ಯಮಂತ್ರಿಗಳು ಕರೆದ ಪತ್ರಿಕಾಗೋಷ್ಠಿಯಲ್ಲಿ ಮಾತ್ರ ಕಾಣಿಸಿಕೊಳ್ಳುತ್ತಾರೆ. ನಾವಾಗಿಯೇ ಮೂಲಭೂತ ಸೌಕರ್ಯ ಕಲ್ಪಿಸುವಂತೆ ಮನವಿ ಮಾಡಿದರೆ ಆಯ್ತು ಮಾಡೋಣ ಎನ್ನುತ್ತಾರೆ. ಆದರೆ ಇಲ್ಲಿಯವರೆಗೂ ಯಾವುದೇ ಕೆಲಸ ಮಾಡಿಸಿಲ್ಲ ಎಂದು ದೂರಿದರು.

ಕೆಲಸ ಮಾಡಿಸಲು ಆಗದಿದ್ದರೆ ರಾಜೀನಾಮೆ ನೀಡಿ ಮನೆಗೆ ಹೋಗಿ, ಗ್ರಾಮಕ್ಕೆ ಬಂದರೆ ಘೇರಾವ್ ಹಾಕುವುದಾಗಿ ಎಚ್ಚರಿಕೆ ನೀಡಿದರು.

ಪತ್ರಿಕಾಗೋಷ್ಠಿಯಲ್ಲಿ ಗ್ರಾಮದ ಮುಖಂಡರಾದ ಎಸ್.ಎಸ್. ನಾಗಪ್ಪ, ಆರ್. ರಾಮಸ್ವಾಮಿ, ಪೆರಿಯಾರ್ ಮಂಜುನಾಥ, ರುದ್ರಪ್ಪ ಉಪಸ್ಥಿತರಿದ್ದರು.

## ಜನರಲ್ ಕೆ.ಎಸ್ ತಿಮ್ಮಯ್ಯ ನಗದು ಪ್ರಶಸ್ತಿಗಾಗಿ ಅರ್ಜಿ ಆಹ್ವಾನ

ದಾವಣಗೆರೆ, ಜು. 17 - ಪ್ರಸಕ್ತ ಸಾಲಿನ ಎಸ್.ಎಸ್.ಎಲ್.ಸಿ ಮತ್ತು 2ನೇ ಪಿ.ಯು.ಸಿ ಸಾರ್ವತ್ರಿಕ ಪರೀಕ್ಷೆಗಳಲ್ಲಿ ಗರಿಷ್ಠ ಅಂಕ ಪಡೆದ ಕರ್ನಾಟಕದ ಮೂಲ ನಿವಾಸಿ ಮಾಜಿ ಸೈನಿಕರ ಮಕ್ಕಳಿಗೆ 'ಜನರಲ್ ಕೆ. ಎಸ್. ತಿಮ್ಮಯ್ಯ' ನಗದು ಪ್ರಶಸ್ತಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿಗಳನ್ನು ಅಕ್ಟೋಬರ್ 30 ರೊಳಗಾಗಿ ಕಚೇರಿಗೆ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ದೂ.ಸಂ: 08182-220925 ಸಂಪರ್ಕಿಸಬಹು ದೆಂದು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಉಪ ನಿರ್ದೇಶಕರು ತಿಳಿಸಿದ್ದಾರೆ.

### ನಾಲ್ಕನೇ ವರ್ಷದ ಪುಣ್ಯಸ್ಮರಣೆ




**ದಿ॥ ಬಿ.ಜೆ. ಶಂಕ್ರಪ್ಪ (ಯೋಗಣ್ಣ)**

ನೀವು ನಮ್ಮನ್ನಗಲಿ ಇಂದಿಗೆ ನಾಲ್ಕು ವರ್ಷಗಳಾದವು.
ನೀವು ತೋರಿದ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ
ಹಾಗೂ ಸದಾ ನಿಮ್ಮ ಸ್ಮರಣೆಯಲ್ಲಿರುವ,


**ಕುಟುಂಬ ವರ್ಗದವರು ಹಾಗೂ ಬಂಧು-ಮಿತ್ರರು**

### ಹರಿಹರದ ಮಂಜುನಾಥ್ ಗದ್ದಿಗಿಮಠ ನಿಧನ




ಹರಿಹರದ ನಿವಾಸಿ, HPF ನಿವೃತ್ತ ನೌಕರರಾದ ಮಂಜುನಾಥ್ ಗದ್ದಿಗಿಮಠ (61) ಇವರು ದಿನಾಂಕ 25.10.2024ರ ಶುಕ್ರವಾರ ರಾತ್ರಿ 8.45ಕ್ಕೆ ನಿಧನರಾದರು. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 26.10.2024ರ ಶನಿವಾರ ಮಧ್ಯಾಹ್ನ 12:30ಕ್ಕೆ ಹರಿಹರದ ಹಿಂದೂ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

### ರಾಮಗೊಂಡನಹಳ್ಳಿ ಶಿವಕ್ಕರ ಎಸ್.ಎಂ. ಹಾಲೇಶಪ್ಪ ನಿಧನ




ದಾವಣಗೆರೆ ತಾಲ್ಲೂಕು ರಾಮಗೊಂಡನಹಳ್ಳಿ ಗ್ರಾಮದ ವಾಸಿ ದಿ. ಶಿವಕ್ಕರ ನಿಂಗಮ್ಮ ದಿ. ಶಿವಕ್ಕರ ಮಲ್ಲಪ್ಪ ಇವರ ಪುತ್ರ ಶಿವಕ್ಕರ ಎಸ್.ಎಂ. ಹಾಲೇಶಪ್ಪ (56) ಇವರು ದಿನಾಂಕ 25.10.2024ನೇ ಶುಕ್ರವಾರ ಸಂಜೆ 6ಕ್ಕೆ ನಿಧನರಾದರು. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 26.10.2024ರ ಶನಿವಾರ ಮಧ್ಯಾಹ್ನ 12 ಗಂಟೆಗೆ ಸ್ವಗ್ರಾಮವಾದ ರಾಮಗೊಂಡನಹಳ್ಳಿಯ ಜಮೀನಿನಲ್ಲಿ ನೆರವೇರಲಿದೆ.

### ಎ.ಎಂ. ರುದ್ರಮ್ಮ ನಿಧನ



ದಾವಣಗೆರೆ ತಾಲ್ಲೂಕು ಅತ್ತಿಗೆರೆ ವಾಸಿ ಎ.ಎಂ. ರೇವಣ್ಣ ಸಿದ್ದಯ್ಯ ನವರ ಧರ್ಮಪತ್ನಿ ಎ.ಎಂ. ರುದ್ರಮ್ಮ (89) ರವರು ದಿನಾಂಕ : 25.10.2024 ರ ಶುಕ್ರವಾರ ಸಂಜೆ 6.38ಕ್ಕೆ ನಿಧನ ರಾದರು. ಮೂವರು ಪುತ್ರರು, ಮೂವರು ಪುತ್ರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 26.10.2024ರ ಶನಿವಾರ ಮಧ್ಯಾಹ್ನ 12.30ಕ್ಕೆ ಅತ್ತಿಗೆರೆ ಗ್ರಾಮದಲ್ಲಿ ನೆರವೇರಿಸಲಾಗುವುದು.

### ಸಂಶೀಪುರ (ಶಿವನಹಳ್ಳಿ)ದ ಪಾರ್ವತಮ್ಮ ನಿಧನ



ಹರಿಹರ ತಾಲ್ಲೂಕು ಸಂಶಿಪುರ (ಶಿವನಹಳ್ಳಿ) ಗ್ರಾಮದ ವಾಸಿ ದಿ. ರಾಮಚಂದ್ರಪ್ಪನವರ ಧರ್ಮಪತ್ನಿ ಶ್ರೀಮತಿ ಪಾರ್ವತಮ್ಮ (75) ಇವರು ದಿನಾಂಕ 25.10.2024ರ ಶುಕ್ರವಾರ ಮಧ್ಯಾಹ್ನ 3.30ಕ್ಕೆ ನಿಧನರಾದರು. ಐವರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು, ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 26.10.2024ರ ಶನಿವಾರ ಮಧ್ಯಾಹ್ನ 1 ಗಂಟೆಗೆ ಹರಿಹರ ತಾಲ್ಲೂಕು ಸಂಶಿಪುರ (ಶಿವನಹಳ್ಳಿ) ಗ್ರಾಮದ ಜಮೀನಿನಲ್ಲಿ ನೆರವೇರಲಿದೆ.

## ಸಂಕ್ಷಿಪ್ತ ಸುದ್ದಿ

**ಪಾಕ್ ಚೆಕ್‌ಪೋಸ್ಟ್ ಮೇಲೆ ದಾಳಿ, 10 ಭದ್ರತಾ ಸಿಬ್ಬಂದಿ ಸಾವು**
ಪೇಷಾವರ : ಪಾಕಿಸ್ತಾನದ ಪ್ರಕ್ಷುಬ್ಧಿತ ಖೈಬರ್ ಪಖ್ತುಂಖ್ವ ಪ್ರಾಂತ್ಯದಲ್ಲಿ ಚೆಕ್‌ಪೋಸ್ಟ್ ಮೇಲೆ ಉಗ್ರರು ನಡೆಸಿದ ದಾಳಿಯಲ್ಲಿ ಹತ್ತು ಭದ್ರತಾ ಸಿಬ್ಬಂದಿ ಸಾವನ್ನಪ್ಪಿದ್ದಾರೆ. ದೇರಾ ಅಸ್ಮಾಯಿಲ್ ಜಿಲ್ಲೆಯ ದರಬನ್ ಎಂಬಲ್ಲಿ ಈ ದಾಳಿ ನಡೆಸಲಾಗಿದೆ. ತಾಲಿಬಾನ್ ಪಾಕಿಸ್ತಾನ್ ಈ ದಾಳಿಗೆ ಕಾರಣ ಎನ್ನಲಾಗುತ್ತಿದೆ.

**ಕಟ್ಟಡ ಕುಸಿತ : ಸಾವಿನ ಸಂಖ್ಯೆ 9ಕ್ಕೆ ಏರಿಕೆ**
ಬೆಂಗಳೂರು: ಇಲ್ಲಿನ ಕಟ್ಟಡ ಕುಸಿತದಲ್ಲಿ ಮೃತಪಟ್ಟವರ ಸಂಖ್ಯೆ 9ಕ್ಕೆ ಏರಿಕೆಯಾಗಿದೆ. ಬಾಬು ಸಾ ಪಾಳ್ಯದಲ್ಲಿ ಕಟ್ಟಡ ಕುಸಿದಿತ್ತು. ಶುಕ್ರವಾರ ಅವಶೇಷಗಳನ್ನು ತೆರವುಗೊಳಿಸುವಾಗ ಇನ್ನೊಂದು ಮೃತದೇಹ ಪತ್ತೆಯಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

**ಬಿಷ್ಣೋಯಿ ಸಹೋದರನ ಮಾಹಿತಿಗೆ 10 ಲಕ್ಷ ರೂ.**
ನವದೆಹಲಿ : ಬಂಧಿತ ಭೂಗತ ಲಾರೆನ್ಸ್ ಬಿಷ್ಣೋಯಿ ಸಹೋದರ ಅನ್ಮೋಲ್ ಬಿಷ್ಣೋಯಿ ಕುರಿತು ಮಾಹಿತಿ ನೀಡುವವರಿಗೆ 10 ಲಕ್ಷ ರೂ. ಬಹುಮಾನ ನೀಡುವುದಾಗಿ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್.ಐ.ಎ.) ಘೋಷಿಸಿದೆ. ಅನ್ಮೋಲ್ ಬಿಷ್ಣೋಯಿ ಅಲಿಯಾಸ್ ಭಾನು ಕೆನಡಾದಲ್ಲಿದ್ದಾನೆ ಎಂದು ಶಂಕಿಸಲಾಗಿದೆ.

**ಸಂಘರ್ಷ ತಾಣಗಳಿಂದ ಸೈನ್ಯ ವಾಪಸ್ ಪ್ರಕ್ರಿಯೆ ಆರಂಭ**
ನವದೆಹಲಿ : ಪೂರ್ವ ಲಡಾಖ್‌ನ ಸಂಘರ್ಷದ ತಾಣಗಳಾದ ಡೆಮ್‌ಚೋಕ್ ಹಾಗೂ ಡೆಪ್ಸಂಗ್‌ಗಳಿಂದ ಸೈನ್ಯವನ್ನು ವಾಪಸ್ ಪಡೆಯುವ ಪ್ರಕ್ರಿಯೆಯನ್ನು ಭಾರತ ಹಾಗೂ ಚೀನಾ ಆರಂಭಿಸಿವೆ ಎಂದು ಮೂಲಗಳು ತಿಳಿಸಿವೆ. ನಾಲ್ಕು ವರ್ಷಗಳಿಂದ ಉಂಟಾಗಿದ್ದ ಬಿಕ್ಕಟ್ಟನ್ನು ಅಂತ್ಯಗೊಳಿಸಲು ಈ ತಾಣಗಳಿಂದ ಸೈನ್ಯ ವಾಪಸ್ ಪಡೆಯಲು ಉಭಯ ದೇಶಗಳು ಸಮ್ಮತಿಸಿದ್ದವು.

**ಚಂಡಮಾರುತ : 2.16 ಲಕ್ಷ ಜನರ ಸ್ಥಳಾಂತರ, ಇಬ್ಬರ ಸಾವು**
ಕೊಲ್ಕೊತಾ : ಡಾನಾ ಚಂಡಮಾರುತದ ಕಾರಣದಿಂದಾಗಿ ಪಶ್ಚಿಮ ಬಂಗಾಳದ ತಗ್ಗು ಪ್ರದೇಶಗಳಲ್ಲಿನ 2.16 ಲಕ್ಷ ಜನರನ್ನು ತೆರವುಗೊಳಿಸಲಾಗಿದೆ. ಚಂಡಮಾರುತಕ್ಕೆ ಸಿಲುಕಿ ಇಬ್ಬರು ಸಾವನ್ನಪ್ಪಿದ್ದಾರೆ.


**25 ವಿಮಾನಗಳಿಗೆ ಬಾಂಬ್ ಬೆದರಿಕೆ**
ನವದೆಹಲಿ : ಶುಕ್ರವಾರದಂದು 25ಕ್ಕೂ ಹೆಚ್ಚು ದೇಶಿಯ ಹಾಗೂ ಅಂತರರಾಷ್ಟ್ರೀಯ ವಿಮಾನಗಳಿಗೆ ಬಾಂಬ್ ಬೆದರಿಕೆ ಎದುರಾಗಿದೆ ಎಂದು ಮೂಲಗಳು ತಿಳಿಸಿವೆ.


**ಜ್ಞಾನವಾಪಿ ಸಮೀಕ್ಷೆ ವಿಸ್ತರಣೆಗೆ ನಕಾರ**
ವಾರಣಾಸಿ : ಜ್ಞಾನವಾಪಿ ಸಂಕೀರ್ಣದ ಸಮೀಕ್ಷೆಯ ವ್ಯಾಪ್ತಿ ವಿಸ್ತರಿಸಬೇಕು ಎಂದು ಹಿಂದೂ ಕಕ್ಷಿದಾರರು ಸಲ್ಲಿಸಿದ್ದ ಮನವಿಯನ್ನು ವಾರಣಾಸಿ ನ್ಯಾಯಾಲಯ ತಳ್ಳಿ ಹಾಕಿದೆ.

**ಸಮೀಕ್ಷೆಗಳಲ್ಲಿ ಟ್ರಂಪ್‌ಗೆ ತುಸು ಮುನ್ನಡೆ**
ವಾಷಿಂಗ್ಟನ್ : ಬರುವ ನವೆಂಬರ್ 5ರಂದು ನಡೆಯಲಿರುವ ಅಮೆರಿಕದ ಅಧ್ಯಕ್ಷ ಸ್ಥಾನದ ಚುನಾವಣೆಯಲ್ಲಿ, ರಿಪಬ್ಲಿಕನ್ ಅಭ್ಯರ್ಥಿ ಡೊನಾಲ್ಡ್ ಟ್ರಂಪ್ ಅವರು ಅಲ್ಪ ಮುನ್ನಡೆ ಹೊಂದಿದ್ದಾರೆ. ಡೆಮಾಕ್ರಟಿಕ್ ಅಭ್ಯರ್ಥಿ ಕಮಲಾ ಹ್ಯಾರಿಸ್ ಅವರು ಹಿಂದಿದ್ದಾರೆ ಎಂದು ಸಮೀಕ್ಷೆಯೊಂದು ತಿಳಿಸಿದೆ.

**ಗುಲ್ಮಾರ್ಗ್ ಉಗ್ರ ದಾಳಿಯಲ್ಲಿ ಇಬ್ಬರು ಸೈನಿಕರ ಸಾವು**
ಶ್ರೀನಗರ : ಜಮ್ಮು ಮತ್ತು ಕಾಶ್ಮೀರದ ಗುಲ್ಮಾರ್ಗ್‌ನಲ್ಲಿ ಗುರುವಾರ ನಡೆದ ಉಗ್ರವಾದಿ ದಾಳಿಯಲ್ಲಿ ಇಬ್ಬರು ಸೈನಿಕರು ಸಾವನ್ನಪ್ಪಿದ್ದಾರೆ. ಇದರೊಂದಿಗೆ ದಾಳಿಯಲ್ಲಿ ಮೃತರ ಸಂಖ್ಯೆಯ ನಾಲ್ಕಕ್ಕೆ ಏರಿಕೆಯಾಗಿದೆ.

# ಡಿಕೆಶಿ ಸಹೋದರರ ವಿರೋಧದ ನಡುವೆಯೂ ಯೋಗೇಶ್ವರ್ ಕಣಕ್ಕೆ







ಬೆಂಗಳೂರು, ಅ. 25 - ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಹೋದರರ ವಿರೋಧದ ನಡುವೆಯೂ ಸಿ.ಪಿ.ಯೋಗೇಶ್ವರ್ ಅವರನ್ನು ಪಕ್ಷಕ್ಕೆ ಕರೆತಂದು ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಕಣಕ್ಕಿಳಿಸುವಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಯಶಸ್ವಿಯಾಗಿದ್ದಾರೆ.

ಶಿವಕುಮಾರ್ ಅವರಿಗೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಎಷ್ಟು ವಿರೋಧಿಯೋ ಅಷ್ಟೇ ಸಮನಾಗಿ ಯೋಗೇಶ್ವರ್ ಅವರನ್ನೂ ವಿರೋಧಿಸುತ್ತಾರೆ. ಕುಮಾರಸ್ವಾಮಿ ಅವರನ್ನು ನಂಬಿದರೂ, ಯೋಗೇಶ್ವರ್ ಅವರನ್ನು ರಾಜಕೀಯವಾಗಿ ನಂಬಲು ಶಿವಕುಮಾರ್ ಸಹೋದರರು ಸಿದ್ಧರಿಲ್ಲ. ಆದರೆ, ಸಿದ್ದರಾಮಯ್ಯ ಅವರಿಗೆ ಚನ್ನಪಟ್ಟಣ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯನ್ನು ಗೆಲ್ಲಿಸಿ ಕೇಂದ್ರ ಸಚಿವ ಕುಮಾರಸ್ವಾಮಿ ಅವರಿಗೆ ಮುಖಭಂಗ ಮಾಡಬೇಕೆಂಬುದೇ ಗುರಿ.

ಈ ಗುರಿ ಸಾಧಿಸಲು ಚನ್ನಪಟ್ಟಣದಲ್ಲಿ ಸಮರ್ಥ ಅಭ್ಯರ್ಥಿಗಳು ಇಲ್ಲದ ಕಾರಣ ಕಳೆದ ಎರಡು ತಿಂಗಳ ಹಿಂದಿನಿಂದಲೂ ಯೋಗೇಶ್ವರ್ ಅವರನ್ನು ಪಕ್ಷಕ್ಕೆ ಕರೆತಂದು ಉಪಚುನಾವಣಾ ಕಣಕ್ಕಿಳಿಸಲು ತೆರೆಮರೆಯಲ್ಲಿ ಮಾತುಕತೆ ನಡೆದಿದ್ದವು.

ಕಳೆದ ತಿಂಗಳು ಸಚಿವ ಜಾರ್ಜ್ ನಿವಾಸದಲ್ಲಿ ಮುಖ್ಯಮಂತ್ರಿ ಅವರು, ಯೋಗೇಶ್ವರ್ ಅವರೊಂದಿಗೆ ಮುಖಾಮುಖಿ ಚರ್ಚೆ ನಡೆಸಿ, ಅಂದೇ ಅವರ ಮನವೊಲಿಸುವಲ್ಲಿ ಯಶಸ್ವಿಯಾಗಿದ್ದರು.

ವಿಧಾನ ಪರಿಷತ್ ಸದಸ್ಯತ್ವಕ್ಕೆ ರಾಜೀನಾಮೆ ನೀಡಿ ಉಪಚುನಾವಣೆಯಲ್ಲಿ ಗೆದ್ದು ಬನ್ನಿ, ನಿಮ್ಮನ್ನು ಬರುವ ಜನವರಿಯಲ್ಲಿ ಮಂತ್ರಿ ಮಾಡುವುದಾಗಿ ಭರವಸೆ ನೀಡಿದ್ದಲ್ಲದೆ, ಚುನಾವಣೆಯಲ್ಲಿ ಗೆಲ್ಲಿಸುವುದೂ ನನ್ನ ಹೊಣೆ ಎಂದಿದ್ದರು.

**ಕುಮಾರಸ್ವಾಮಿ ಹಿನ್ನಡೆಗಾಗಿ ಸಿದ್ದರಾಮಯ್ಯ ತಂತ್ರ**

ಈ ಯಾವ ಬೆಳವಣಿಗೆಗಳೂ ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಶಿವಕುಮಾರ್ ಗಮನಕ್ಕೆ ಬಂದಿರಲಿಲ್ಲ, ಅವರಿಗೆ ಚನ್ನಪಟ್ಟಣ ಕ್ಷೇತ್ರದಲ್ಲಿ ಪಕ್ಷದ ಶಕ್ತಿ ಏನು ಎಂಬುದು ತಿಳಿದಿತ್ತು.

ಮೊದಲು ತಮ್ಮ ಸಹೋದರ ಡಿ.ಕೆ. ಸುರೇಶ್ ಅವರನ್ನು ಕಣಕ್ಕಿಳಿಸುವ ಬಗ್ಗೆ ಚಿಂತನೆ ನಡೆಸಿ ಕ್ಷೇತ್ರದಲ್ಲಿ ಹಲವು ಬಾರಿ ಸುತ್ತಾಟವನ್ನೂ ನಡೆಸಿದ್ದರು.

ನಂತರ ತಮ್ಮ ನಿಲುವಿನಿಂದ ಹಿಂದೆ ಸರಿದು, ದೂರದ ಸಂಬಂಧಿ ಹಾಗೂ ಕೆಪಿಎಸ್‌ಸಿ ಮಾಜಿ ಸದಸ್ಯ ರಘುನಂದ ರಾಮಣ್ಣ ಅವರನ್ನು ಕಣಕ್ಕಿಳಿಸುವ ತೀರ್ಮಾನ ಕೈಗೊಂಡಿದ್ದರು.

ಯೋಗೇಶ್ವರ್ ಅವರಿಗೆ ಬಿಜೆಪಿಯಲ್ಲಿ ಟಿಕೆಟ್ ದೊರೆಯುವುದಿಲ್ಲ, ಅವರು ಬಂಡಾಯ ಎದ್ದು ಪಕ್ಷೇತರರಾಗಿ ನಿಲ್ಲಬಹುದು, ಇಂತಹ ಸನ್ನಿವೇಶದಲ್ಲಿ ಅವರು ಗೆಲುವಿನ ದಡ ಮುಟ್ಟುವುದಿಲ್ಲ ಎಂಬ ಅನಿಸಿಕೆ ಶಿವಕುಮಾರ್ ಅವರಲ್ಲಿತ್ತು.

ಆದರೆ, ಉಪಚುನಾವಣಾ ವೇಳಾಪಟ್ಟಿ ಪ್ರಕಟವಾಗುತ್ತಿದ್ದಂತೆ ಸಿದ್ದರಾಮಯ್ಯ ಅವರು ಎಐಸಿಸಿ ರಾಜಕೀಯ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಮೂಲಕ ಯೋಗೇಶ್ವರ್ ಅವರನ್ನು ಪಕ್ಷಕ್ಕೆ ಕರೆತರುವ ವಿಷಯ ಪ್ರಸ್ತಾಪಿಸಿ, ಅನುಮತಿಯನ್ನೂ ಪಡೆದುಕೊಂಡರು.

ಚನ್ನಪಟ್ಟಣ ಗೆಲುವೊಂದೇ ಮುಖ್ಯ, ಇದು ಯೋಗೇಶ್ವರ್ ಅವರಿಂದ ಮಾತ್ರ ಸಾಧ್ಯ, ಕುಮಾರಸ್ವಾಮಿ ಅವರಿಗೆ ರಾಜಕೀಯವಾಗಿ ಹಿನ್ನಡೆ ಉಂಟು ಮಾಡಲು ನಮಗೆ ಇದೊಂದು ಅವಕಾಶ ಎಂದು ವರಿಷ್ಠರಿಗೆ ಸಿದ್ದರಾಮಯ್ಯ ಮನವರಿಕೆ ಮಾಡಿದ್ದು ಯಶಸ್ಸು ತಂದಿತು.

ವೇಣುಗೋಪಾಲ್ ಅವರೇ ಶಿವಕುಮಾರ್ ಅವರನ್ನು ಸಂಪರ್ಕಿಸಿ ಯೋಗೇಶ್ವರ್ ವಿಷಯ ಪ್ರಸ್ತಾಪಿಸಿ, ಅವರೇ ಪಕ್ಷದ ಅಭ್ಯರ್ಥಿ ಎಂದಿದ್ದಲ್ಲದೆ, ಚುನಾವಣಾ ಹೊಣೆಯನ್ನೂ ವಹಿಸಿಕೊಳ್ಳುವಂತೆ ಆದೇಶ ಮಾಡಿದರು.

ಮುಖ್ಯಮಂತ್ರಿ ಗಾದಿಗೆ ಸಮೀಪಿಸುವ ಸಂದರ್ಭದಲ್ಲಿ ಪಕ್ಷದ ವರಿಷ್ಠರ ಹಾಗೂ ಸಿದ್ದರಾಮಯ್ಯ ಅವರ ವಿರೋಧ ಕಟ್ಟಿಕೊಳ್ಳ ಬಾರದೆಂಬ ಕಾರಣಕ್ಕೆ ಒಲ್ಲದ ಮನಸ್ಸಿನಿಂದ ಯೋಗೇಶ್ವರ್ ಆಗಮನಕ್ಕೆ ಶಿವಕುಮಾರ್ ಒಪ್ಪಿಗೆ ಸೂಚಿಸಿದರಾದರೂ, ಚುನಾವಣೆಯಲ್ಲಿ ಇದು ಎಷ್ಟರ ಮಟ್ಟಿಗೆ ಫಲ ನೀಡುವುದೆಂಬುದನ್ನು ಕಾದು ನೋಡಬೇಕಿದೆ.

# ಬಲ್ಗೇರಿಯ : ವರ್ಷ ಮೂರು, ಚುನಾವಣೆ ಏಳು

ಸೋಫಿಯಾ (ಬಲ್ಗೇರಿಯ), ಅ. 25 - ಬಲ್ಗೇರಿಯಾದ ನಾಗರಿಕರು ಬರುವ ಭಾನುವಾರ ಸಾರ್ವತ್ರಿಕ ಚುನಾವಣೆಗಾಗಿ ಮತದಾನ ಮಾಡಲಿದ್ದಾರೆ. ವಿಶೇಷ ಎಂದರೆ, ಕಳೆದ ಮೂರು ವರ್ಷಗಳಲ್ಲಿ ಇದು ಏಳನೇ ಸಾರ್ವತ್ರಿಕ ಚುನಾವಣೆಯಾಗಿದೆ!

ರಾಜಕೀಯ ಅಸ್ಥಿರತೆ ಎದುರಿಸುತ್ತಿರುವ ಬಲ್ಗೇರಿಯಾದಲ್ಲಿ, ಈ ಬಾರಿಯ ಚುನಾವಣೆಯಲ್ಲಿ ರಷ್ಯಾ ಪರ ಹಾಗೂ ಬಲಪಂಥೀಯ ಸಂಘಟನೆಗಳ ಪರ ಇರುವ ಪಕ್ಷಗಳಿಗೆ ಹೆಚ್ಚಿನ ಬಲ ಸಿಗುವ ಸಾಧ್ಯತೆ ಇದೆ.

2021ರ ನಂತರ ದೇಶದಲ್ಲಿ ಆರು ಬಾರಿ ಚುನಾವಣೆಗಳಾಗಿವೆ. ಎರಡರಲ್ಲಿ ಮಾತ್ರ ಚುನಾಯಿತ ಸರ್ಕಾರ ರಚಿಸಲು ಸಾಧ್ಯವಾಗಿದೆ. ಆ ಎರಡು ಮೈತ್ರಿ ಸರ್ಕಾರಗಳೂ ಸಹ ಸುಧಾರಣೆ ನಡೆಸುವ ಪ್ರಯತ್ನದಲ್ಲಿ ವಿಫಲವಾಗಿ ಪತನಗೊಂಡಿವೆ.

ಕಳೆದ ಜೂನ್ ತಿಂಗಳಲ್ಲಿ ನಡೆದ ಚುನಾವಣೆಯಲ್ಲಿ ಯಾರಿಗೂ ಸ್ಪಷ್ಟ ಬಹುಮತ ದೊರೆತಿರಲಿಲ್ಲ. ಏಳು ಪಕ್ಷಗಳು ಒಡಕಿನ ಜನಾದೇಶ ಪಡೆದಿದ್ದವು. ಈ ಪಕ್ಷಗಳು ಜೊತೆಯಾಗಿ ಮೈತ್ರಿ ಸರ್ಕಾರ ನಡೆಸುವ ಪ್ರಯತ್ನದಲ್ಲಿ ವಿಫಲವಾಗಿಲ್ಲ.

ಮುಂಬರುವ ಚುನಾವಣೆಯಲ್ಲೂ ಸಹ ಅದೇ ಫಲಿತಾಂಶ ಬರಲಿದೆ. ಸದ್ಯಕ್ಕೆ ರಾಜಕೀಯ ಬಿಕ್ಕಟ್ಟಿಗೆ ಪರಿಹಾರ ಸಿಗುವ ಸಾಧ್ಯತೆ ಇಲ್ಲ ಎಂದು ರಾಜಕೀಯ ವಿಶ್ಲೇಷಕರು ಅಭಿಪ್ರಾಯ ಪಡುತ್ತಿದ್ದಾರೆ.

**ಈ ಬಾರಿಯೂ ಸ್ಪಷ್ಟ ಫಲಿತಾಂಶದ ನಿರೀಕ್ಷೆ ಇಲ್ಲ**

ಪದೇ ಪದೇ ಚುನಾವಣೆ ಹಾಗೂ ಅಸ್ಥಿರತೆ ಕಾರಣದಿಂದಾಗಿ ಮತದಾರರು ಹತಾಶಗೊಂಡಿದ್ದಾರೆ. ಈ ಬಾರಿ ಮತದಾನದ ಪ್ರಮಾಣ ಕಡಿಮೆಯಾಗುವ ಸಾಧ್ಯತೆ ಇದೆ ಎಂದೂ ಹೇಳಲಾಗುತ್ತಿದೆ. ಈ ಬಾರಿ ಬಲಪಂಥೀಯ ಜನಪ್ರಿಯ ಪರ ಹಾಗೂ ರಷ್ಯಾ ಪರ ಸಂಘಟನೆಗಳು ಹೆಚ್ಚು ಸ್ಥಾನ ಪಡೆಯುವ ಸಾಧ್ಯತೆ ಇದೆ ಎಂದು ಅಂದಾಜಿಸಲಾಗುತ್ತಿದೆ.

ಅಲ್ಲದೇ ಮತದಾನ ಮುಕ್ತವಾಗಿ ನಡೆಯುವ ಬಗ್ಗೆಯೂ ಅನುಮಾನಗಳಿವೆ. ರಾಜಕೀಯ ಪಕ್ಷಗಳು ಜನರಿಗೆ ಮತಕ್ಕಾಗಿ ಲಂಚ ನೀಡುತ್ತಿವೆ. ಕಾರ್ಪೊರೇಟ್ ಸಂಸ್ಥೆಗಳು ಹಾಗೂ ಸ್ಥಳೀಯ ಸಂಸ್ಥೆಗಳು ಮತದಾರರ ಮೇಲೆ ಒತ್ತಡ ಹೇರುತ್ತಿವೆ ಎಂದು ರಾಜಕೀಯ ವಿಶ್ಲೇಷಕರಾದ ಸ್ಟೊಯಾನಾ ಜಾರ್ಜೀವಾ ಹೇಳಿದ್ದಾರೆ.

ರಷ್ಯಾ ಪರ ಇರುವ ವಾಜ್ರಜ್ಡನೆ ಪಕ್ಷ ಎರಡನೇ ಅತಿ ದೊಡ್ಡ ಪಕ್ಷವಾಗಿ ಹೊರ ಹೊಮ್ಮಬಹುದು. ಬಲಪಂಥೀಯ ಹಾಗೂ ರಾಷ್ಟ್ರೀಯವಾದಿ ಪಕ್ಷವಾದ ವಾಜ್ರಜ್ಡನೆ, ರಷ್ಯಾ ವಿರುದ್ಧ ಹೇರಲಾಗಿರುವ ನಿರ್ಬಂಧಗಳನ್ನು ತೆರವುಗೊಳಿಸಬೇಕು ಹಾಗೂ ಉಕ್ರೇನ್‌ಗೆ ನೀಡುತ್ತಿರುವ ನೆರವು ನಿಲ್ಲಿಸಬೇಕು ಎಂಬ ನಿಲುವು ಹೊಂದಿದೆ. ನ್ಯಾಟೋ ಸದಸ್ಯತ್ವದಿಂದ ಹೊರ ಬರಬೇಕು ಎಂಬುದು ಈ ಪಕ್ಷದ ಮತ್ತೊಂದು ಬೇಡಿಕೆ.

ಬಾಲ್ಕನ್ ಪ್ರಾಂತ್ಯದ ದೇಶವಾದ ಬಲ್ಗೇರಿಯ, 2020ರಿಂದಲೂ ರಾಜಕೀಯ ಅಸ್ಥಿರತೆ ಎದುರಿಸುತ್ತಿದೆ. ಭ್ರಷ್ಟ ರಾಜಕಾರಣಿಗಳು ಅಕ್ರಮವಾಗಿ ಕೆಲ ಉದ್ಯಮಿಗಳು ಬಲಿಷ್ಠರಾಗಲು ಅವಕಾಶ ನೀಡಿದ್ದಾರೆ. ಇದು ದೇಶವ್ಯಾಪಿ ಪ್ರತಿಭಟನೆಗಳಿಗೂ ಕಾರಣವಾಗಿದೆ.

ಯುರೋಪ್ ಒಕ್ಕೂಟದ ದೇಶಗಳ ಪೈಕಿ ಬಲ್ಗೇರಿಯ ಅತ್ಯಂತ ಬಡ ಹಾಗೂ ಭ್ರಷ್ಟ ದೇಶಗಳಲ್ಲಿ ಒಂದಾಗಿದೆ. ಇಲ್ಲಿನ ನ್ಯಾಯಾಂಗವು ರಾಜಕಾರಣಿಗಳ ಹಿತಕ್ಕೆ ಅನುಗುಣವಾಗಿ ವರ್ತಿಸುತ್ತಿದೆ. ಇದರಿಂದಾಗಿ ಭ್ರಷ್ಟಾಚಾರದ ವಿರುದ್ಧ ಹೋರಾಡುವುದು ಹರಸಾಹಸವಾಗಿದೆ.

# ಬನ್ನಿಕೋಡು ಗ್ರಾಮದಲ್ಲಿ ಆಯುರ್ವೇದ ದಿನ ಹಾಗೂ ಸಪ್ತಾಹ



ಹರಿಹರ, ಅ. 25 - ತಾಲ್ಲೂಕಿನ ಬನ್ನಿಕೋಡು ಗ್ರಾಮದ ಕರ್ನಾಟಕ ಪಬ್ಲಿಕ್ ಪದವಿ ಪೂರ್ವ ವಿಭಾಗ ಮತ್ತು ಪ್ರೌಢ ಶಾಲೆಯಲ್ಲಿ ಈಚೆಗೆ 9ನೇ ರಾಷ್ಟ್ರೀಯ ಆಯುರ್ವೇದ ದಿನ ಹಾಗೂ ನಾರಿ ಸ್ವಾಸ್ಥ್ಯ ಮತ್ತು ಸಬಲೀಕರಣಕ್ಕಾಗಿ ಆಯುರ್ವೇದ ಸಪ್ತಾಹದ ನಿಮ್ಮಿತ್ತ್ಯ 12ರಿಂದ 21 ವಯಸ್ಸಿನ ಹೆಣ್ಣು ಮಕ್ಕಳ ಆರೋಗ್ಯದಲ್ಲಿ ಆಯುರ್ವೇದದ ಪಾತ್ರ ಎಂಬ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು.

ಈ ವೇಳೆ ಶಾಲಾ ಮುಖ್ಯ ಶಿಕ್ಷಕ ವಿ.ಬಿ. ಕೊಟ್ರೇಶ್, ಜಿಲ್ಲಾ ಆಯುಷ್ ಅಧಿಕಾರಿ ಡಾ.ಯು.ಬಿ. ಯೋಗೇಂದ್ರ ಕುಮಾರ್, ಉಪ ಮುಖ್ಯ ವೈದ್ಯಾಧಿಕಾರಿ ಡಾ.ಎನ್.ಎಸ್. ಸುಚಿತ್ರಾ, ಹಿರಿಯ ವೈದ್ಯಾಧಿಕಾರಿ ಡಾ.ಎಂ.ಸಿ. ಸುರೇಶ್ ಕುಮಾರ್, ಬಿ.ಎಂ. ಶಿವಲಿಂಗಯ್ಯ, ಶಿಕ್ಷಕ ನಾಗರಾಜ್ ಇದ್ದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ, ಜಿಲ್ಲಾ ಆಯುಷ್ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಕಾರ್ಯಕ್ರಮ ನಡೆಯಿತು.

# ಪರ್ಯಾಯ ಹಸಿ ಮತ್ತು ಒಣಗಿಸುವ ಪದ್ಧತಿಯಿಂದ ಪರಿಸರದ ಸಂರಕ್ಷಣೆ



ದಾವಣಗೆರೆ, ಅ.25- ತಾಲ್ಲೂಕಿನ ಬೆಳವನೂರು ಗ್ರಾಮದಲ್ಲಿ ಭತ್ತದ ಬೆಳೆಯಲ್ಲಿ ಪರ್ಯಾಯ ಹಸಿ ಮತ್ತು ಒಣಗಿಸುವ ಮುಂಚೂಣಿ ಪ್ರಾತ್ಯಕ್ಷಿಕೆಯ ತಾಕುಗಳಿಗೆ ಐಸಿಎಆರ್ ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳು ಭೇಟಿ ನೀಡಿದರು.

ಬೇಸಾಯ ತಜ್ಞ ಮಲ್ಲಿಕಾರ್ಜುನ ಬಿ. ಓ. ಮಾತನಾಡುತ್ತಾ, ನೀರು ನಿಲ್ಲಿಸಿ ಭತ್ತದ ಬೇಸಾಯ ಮಾಡುವ ಗದ್ದೆಗಳಲ್ಲಿ ಶೇ.10 ರಿಂದ ಶೇ.16 ಹಸಿರು ಮನೆಯ ಅನಿಲ ಹೊರ ಸೋಸುವಿಕೆ ವಿವಿಧ ದೇಶಗಳಿಂದ ಆಗುತ್ತದೆ. ಈ ಪರ್ಯಾಯ ಹಸಿ ಮತ್ತು ಒಣಗಿಸುವ ಪದ್ಧತಿಯಿಂದ ಭತ್ತದ ಗದ್ದೆಯಲ್ಲಿ ನೀರು ನಿಲ್ಲುವ ಸಮಯ ಕಡಿಮೆಯಾಗುವುದರಿಂದ ಮಿಥೇನ್ ಉತ್ಪಾದನೆಯೂ ಶೇ.30 ರಿಂದ ಶೇ.50 ರಷ್ಟು ಕಡಿಮೆಯಾಗುತ್ತದೆ ಎಂದರು.

ಪ್ರಗತಿಪರ ಕೃಷಿಕ ಬಸವರಾಜ್ ಮಾತನಾಡಿ, ಈ ವರ್ಷ ಉತ್ತಮ ಮಳೆ ಆಗುವುದರ ಜೊತೆಗೆ ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳ ಮಾರ್ಗದರ್ಶನದಲ್ಲಿ ಪಿವಿಸಿ ಪೈಪ್ ಭತ್ತದ ಗದ್ದೆಯಲ್ಲಿ ಅಳವಡಿಸುವ ಪದ್ಧತಿಯಿಂದ ಬೆಳೆಗೆ ಬೇಕಾದ ಸಮಯದಲ್ಲಿ ನೀರನ್ನು ಒದಗಿಸಿರುತ್ತೇವೆ. ಇದರಿಂದ ರೋಗ ಮತ್ತು ಕೀಟ ಬಾಧೆಗಳೂ ಸಹ ಕಡಿಮೆಯಾಗಿವೆ ಎಂದರು.

ಮಣ್ಣು ವಿಜ್ಞಾನಿಗಳಾದ ಎಚ್.ಎಮ್. ಸಣ್ಣಗೌಡ್ರು ಮಾತನಾಡಿ, 30 ಸೆಂ. ಮೀ. ಉದ್ದದ ಪಿವಿಸಿ ಪೈಪನ್ನು ಅಳವಡಿಸುವ ತಂತ್ರಜ್ಞಾನವನ್ನು ರೈತರು ತಿಳಿದುಕೊಂಡರೆ ಮುಂದಿನ ದಿನಗಳಲ್ಲಿ ನೀರು ಮತ್ತು ಪರಿಸರವನ್ನು ಸಂರಕ್ಷಿಸಬಹುದು ಹಾಗೂ ಕೃಷಿ ಡ್ರೋನ್ ಬಳಸಿ ಭತ್ತಕ್ಕೆ ಸಿಂಪರಣೆ ಮಾಡುವ ಪ್ರಾತ್ಯಕ್ಷಿಕೆಯನ್ನು ಮಾಡಲಾಯಿತು. ಈ ತಂತ್ರಜ್ಞಾನದಿಂದ ಸಮಯ ಮತ್ತು ನೀರು ಉಳಿತಾಯವಾಗುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಪ್ರಗತಿಪರ ರೈತರಾದ ಬಸವರಾಜ್, ರಾಜು, ಸುರೇಶ್, ಪಂಚಯ್ಯ ಮಹೇಂದ್ರ, ನಾಗರಾಜ್ ಹಾಗೂ ಸಂಜೀವ್, ಗರುಡ ಕಂಪನಿಯವರು ಭಾಗವಹಿಸಿದ್ದರು.

# ಶಿಗ್ಗಾಂವ್ ಕ್ಷೇತ್ರದಲ್ಲಿ ಕಾಂಗ್ರೆಸ್‌ಗೆ ಬಂಡಾಯದ ಬಿಸಿ

ಶಿಗ್ಗಾಂವ್, ಅ. 25 – ಶಿಗ್ಗಾಂವ್ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಬಂಡಾಯದ ಬಿಸಿ ಎದುರಾಗಿದ್ದು, ಅಜ್ಜಂಪೀರ್ ಖಾದ್ರಿ ಹಾಗೂ ಮಂಜುನಾಥ ಕುನ್ನೂರು ಅವರು ಬಂಡಾಯ ಅಭ್ಯರ್ಥಿಗಳಾಗಿ ನಾಮಪತ್ರ ಸಲ್ಲಿಸಿದ್ದಾರೆ.

ಉಪಚುನಾವಣೆಯಲ್ಲಿ ಯಾಸಿರ್ ಅಹ್ಮದ್ ಖಾನ್ ಅವರಿಗೆ ಟಿಕೆಟ್ ಘೋಷಣೆಯಾಗಿತ್ತು. ಇದರಿಂದ ಬೇಸರಗೊಂಡಿರುವ ಅಜ್ಜಂಪೀರ್ ಖಾದ್ರಿ ಬಂಡಾಯ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದಾರೆ.

ನಾಮಪತ್ರ ಸಲ್ಲಿಕೆಗೆ ಇನ್ನು 13 ನಿಮಿಷ ಮಾತ್ರ ಬಾಕಿ ಇರುವಂತೆ ಬೈಕಿನಲ್ಲಿ ಬಂದ ಅಜ್ಜಂಪೀರ್ ಖಾದ್ರಿ ನಾಮಪತ್ರ ಸಲ್ಲಿಸಿದ್ದಾರೆ.

ಅಜ್ಜಂಪೀರ್ ಖಾದ್ರಿ ನಾಮಪತ್ರ ಸಲ್ಲಿಸದಂತೆ ಮನವೊಲಿಸಲು ಸಚಿವ ಜಮೀರ್ ಅಹ್ಮದ್ ಖಾನ್ ಬಂದಿದ್ದರೂ ಪ್ರಯೋಜನವಾಗಿಲ್ಲ. ಅಲ್ಲದೆ ಅಜ್ಜಂಪೀರ್ ಖಾದ್ರಿ ಬೆಂಬಲಿಗರು ಜಮೀರ್ ಕಾರಿನ ಮೇಲೆ ಕಲ್ಲು ತೂರಿದ್ದಾರೆ.

ಮತ್ತೊಂದೆಡೆ ಮಾಜಿ ಶಾಸಕ ಮಂಜುನಾಥ ಕುನ್ನೂರು ಸಹ ಪಕ್ಷೇತರರಾಗಿ ನಾಮಪತ್ರ ಸಲ್ಲಿಸಿದ್ದಾರೆ.

# ಮಲೇಬೆನ್ನೂರಿನಲ್ಲಿ ಇಂದು ಬಂಜೆತನ ನಿವಾರಣಾ ಸಮಾಲೋಚನಾ ಶಿಬಿರ

ಸಮುದಾಯ ಆರೋಗ್ಯ ಕೇಂದ್ರದಲ್ಲಿ ಇಂದು ಬೆಳಗ್ಗೆ 10.30 ರಿಂದ ಮಧ್ಯಾಹ್ನ 3 ರವರೆಗೆ ಮಲೇಬೆನ್ನೂರು ಲಯನ್ಸ್ ಕ್ಲಬ್ ಮತ್ತು ಶ್ರೀ ವೀರಭದ್ರೇಶ್ವರ ಚಾರಿಟಬಲ್ ಟ್ರಸ್ಟ್ ಹಾಗೂ ಕಡ್ಲಿ ಐವಿಎಫ್ ಸೆಂಟರ್ (ದಾವಣಗೆರೆ) ಇವರ ವತಿಯಿಂದ ಬಂಜೆತನ ನಿವಾರಣಾ ಕುರಿತು ಉಚಿತ ಸಮಾಲೋಚನಾ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ ಎಂದು ಲಯನ್ಸ್ ವಲಯಾಧ್ಯಕ್ಷ ಚಿಟ್ಟಕ್ಕಿ ನಾಗರಾಜ್ ತಿಳಿಸಿದ್ದಾರೆ.

# ಮುತ್ತಾತರ ಕಾಲದ ಕೃಷಿ ಜಮೀನಿಗೆ ವಕ್ಫ್ ನೋಟಿಸ್: ತೇಜಸ್ವಿ ಸೂರ್ಯ ಕಿಡಿ



ಬೆಂಗಳೂರು, ಅ. 25 - ತಾತ ಮುತ್ತಾತರ ಕಾಲದಿಂದ ಬೇಸಾಯ ಮಾಡಿಕೊಂಡು ಬಂದಿದ್ದ ರೈತರ ಕೃಷಿ ಜಮೀನುಗಳು ವಕ್ಫ್‌ಗೆ ಸೇರಿದ್ದು ಎಂದು ನೋಟಿಸ್ ಕಳಿಸಲಾಗಿದೆ ಎಂದು ಬಿಜೆಪಿ ಸಂಸದ ತೇಜಸ್ವಿ ಸೂರ್ಯ ಕಿಡಿ ಕಾರಿದ್ದಾರೆ.

ವಕ್ಫ್ ಆಕ್ರಮಿತ ಆಸ್ತಿ, ವ್ಯಾಜ್ಯಗಳ ಕುರಿತಾಗಿ ವಿಜಯಪುರ ಜಿಲ್ಲೆಯ ಹೊನವಾಡ ಮತ್ತಿತರೆ ಗ್ರಾಮಗಳ ರೈತರೊಂದಿಗೆ ಸಂಸದ ತೇಜಸ್ವಿ ಸೂರ್ಯ ಸಭೆ ನಡೆಸಿದ ನಂತರ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

ವಿಜಯಪುರ ಜಿಲ್ಲೆಯೊಂದರಲ್ಲೇ 15 ಸಾವಿರ ಎಕರೆಗಳಿಗೂ ಅಧಿಕ ವಕ್ಫ್ ಭೂಮಿ ಅತಿಕ್ರಮಣವಾಗಿದೆ. ತಿಕೋಟಾ ತಾಲ್ಲೂಕಿನ ಹೊನವಾಡ ಗ್ರಾಮ ಒಂದರಲ್ಲೇ 1,200 ಎಕರೆಗಳಷ್ಟು ವಕ್ಫ್ ಆಸ್ತಿ ಎಂದು ನಮೂದು ಮಾಡಲಾಗಿದೆ ಎಂದು ತಿಳಿಸಿದರು.

ಇತ್ತೀಚೆಗಷ್ಟೇ ವಿಜಯಪುರಕ್ಕೆ ಭೇಟಿ ನೀಡಿರುವ ವಕ್ಫ್ ವ್ಯವಹಾರಗಳ ಸಚಿವ ಜಮೀರ್ ಅಹ್ಮದ್ ಖಾನ್ ಮುಂಬರುವ 15 ದಿನಗಳ ಒಳಗೆ ವಕ್ಫ್ ಆಸ್ತಿ ನೋಂದಣಿಗೆ ಜಿಲ್ಲಾಡಳಿತವನ್ನು ಒತ್ತಾಯಿಸಿರುವುದು ಆಶ್ಚರ್ಯ ತಂದಿದೆ ಎಂದು ತೇಜಸ್ವಿ ಸೂರ್ಯ ಹೇಳಿದರು.

ತಾತ - ಮುತ್ತಾತಂದಿರ ಕಾಲದಿಂದಲೂ ಕೃಷಿ, ಇತರೆ ಕಾರ್ಯಗಳನ್ನು ಮಾಡಿಕೊಂಡು ಬಂದಿರುವ ಎಷ್ಟೋ ಕುಟುಂಬಗಳಿಗೆ ತರಾತುರಿಯಲ್ಲಿ ನೋಟಿಸ್ ನೀಡಲಾಗಿದೆ. ಕೆಲವೊಂದು ದಾಖಲೆಗಳಲ್ಲಿ, ವಕ್ಫ್ ಬೋರ್ಡ್ - ಕರ್ನಾಟಕ ಸರ್ಕಾರದ ಅನ್ವಯ ಎಂದು ನಮೂದಿಸಿ ನೋಟಿಸ್ ನೀಡಲಾಗಿದೆ ಎಂದು ತಿಳಿಸಿದರು.

ರಾಜ್ಯ ಸರ್ಕಾರ ಆಡಳಿತ ನಡೆಸಬೇಕಿರುವುದು ಅಂಬೇಡ್ಕರ್ ವಿರಚಿತ ಸಂವಿಧಾನದ ಆಧಾರದ ಮೇಲೆಯೇ ಹೊರತು, ಷರಿಯಾ ಅಥವಾ ಸಚಿವ ಜಮೀರ್ ಅಹ್ಮದ್ ಖಾನ್ ಇಲ್ಲವೇ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಆಣತಿಯಂತೆ ಅಲ್ಲ ಎಂಬುದನ್ನು ನೆನಪಿಟ್ಟುಕೊಳ್ಳಬೇಕು. ರಾಜ್ಯ ಸರ್ಕಾರ, ಸಚಿವರ ಒತ್ತಡದ ಮೇಲೆ ತರಾತುರಿಯಲ್ಲಿ ವಕ್ಫ್ ಹೆಸರಿನಲ್ಲಿ ಆಸ್ತಿ ನಮೂದಿಗೆ ಅಧಿಕಾರಿಗಳು ಪ್ರಯತ್ನಪಟ್ಟಲ್ಲಿ ಕಠಿಣ ಕ್ರಮ ಎದುರಿಸಬೇಕಾಗುತ್ತದೆ ಎಂದೂ ಎಚ್ಚರಿಕೆ ನೀಡಿದರು.



ವಕ್ಫ್ ಕಾಯ್ದೆ ಮೂಲಕ ಬಹುಸಂಖ್ಯಾತ ಹಿಂದೂಗಳಿಗೆ ಕಾಂಗ್ರೆಸ್ ಮಾಡಿರುವ ಮೋಸ, ಅನ್ಯಾಯವನ್ನು ಸಾರ್ವಜನಿಕರು ಅರಿಯಬೇಕಿದೆ. ವಕ್ಫ್ ಬೋರ್ಡ್‌ಗೆ ಸಾರ್ವಜನಿಕ, ಸರ್ಕಾರಿ ಭೂಮಿಯನ್ನು ಕಾನೂನುಬದ್ಧವಾಗಿಯೇ ಕಬಳಿಸುವ ಅವಕಾಶ ಒದಗಿಸಲಾಗಿದೆ ಎಂದವರು ಆರೋಪಿಸಿದರು.

# ನಿಜಲಿಂಗಪ್ಪ, ಬೊಮ್ಮಾಯಿ ಸೇರಿದಂತೆ ಹೊರಗಿನವರಿಗೇ ಮಣೆ ಹಾಕಿದ್ದೇ ಹೆಚ್ಚು...!

ಲಿಂಗಾಯತರಲ್ಲಿ ಪಂಚಮಸಾಲಿಗರೇ ಹೆಚ್ಚಿರುವ ಶಿಗ್ಗಾಂವಿ ವಿಧಾನಸಭಾ ಕ್ಷೇತ್ರದಲ್ಲಿ ಅವಿ ರೋಧ ಆಯ್ಕೆಯಾಗಿ ಮುಖ್ಯ ಮಂತ್ರಿಯಾದ ಎಸ್.ನಿಜಲಿಂಗಪ್ಪ ಚಿತ್ರದುರ್ಗ ಜಿಲ್ಲೆಯವರು.

ಲಿಂಗಾಯತರಲ್ಲಿ ಸಾದರೇ ಕಡಿಮೆ ಸಂಖ್ಯೆಯಲ್ಲಿರುವ ಇಲ್ಲಿ ಮುಖ್ಯಮಂತ್ರಿಯಾದ ಬಸವರಾಜ ಬೊಮ್ಮಾಯಿ ಪಕ್ಕದ ಧಾರವಾಡ ಜಿಲ್ಲೆಯವರು. ಇಲ್ಲಿ ಶಾಸಕರಾಗಿ ಆಯ್ಕೆಯಾದ ಸ್ಥಳೀಯರು ಮಂತ್ರಿಗಳಾಗದೆ, ವಿವಿಧ ಮಂತ್ರಿಗಿರಿ ಪಟ್ಟ ಪಡೆದ ಈರ್ವರೂ ಹೊರಗಿನವರೇ ಆಗಿದ್ದಾರೆ ಎನ್ನುವುದು ಕ್ಷೇತ್ರದ ವಿಶೇಷ.

ಇಲ್ಲಿ ಕಾಂಗ್ರೆಸ್ಸೇ ಅಧಿಕ ಅಂದರೆ ನಾಲ್ಕು ದಶಕಕ್ಕೂ ಹೆಚ್ಚು ಕಾಲ ಆಡಳಿತದ ಚುಕ್ಕಾಣಿ ಹಿಡಿದಿದೆ. ಈರ್ವರು ಪಕ್ಷೇತರರಾಗಿ, ಓರ್ವರು ಜೆಡಿಎಸ್‌ನಿಂದ, ಓರ್ವರು ಬಿಜೆಪಿಯಿಂದ ಆಯ್ಕೆಯಾಗಿದ್ದಾರೆ. ಆರ್.ಸಿ.ಪಾಟೀಲ 1957 ಕಾಂಗ್ರೆಸ್, ಎಫ್.ಎಸ್. ತಾವರೆ 1962

ಕಾಂಗ್ರೆಸ್, ಎಸ್. ನಿಜಲಿಂಗಪ್ಪ 1967 ಕಾಂಗ್ರೆಸ್, ಎಂ.ಎಂ. ನದಾಫ್ 1972, 78 ಹಾಗೂ 83 ಕಾಂಗ್ರೆಸ್ , ಎನ್.ವಿ.ಪಾಟೀಲ ಪಕ್ಷೇತರ 1985, ಮಂಜುನಾಥ ಕುನ್ನೂರ 1989, 1994 ಕಾಂಗ್ರೆಸ್, ಅಜ್ಜಂಪೀರ್ ಖಾದ್ರಿ ಜೆ.ಡಿ.ಎಸ್ 1999, ರಾಜಶೇಖರ ಸಿಂಧೂರ 2004 ಪಕ್ಷೇತರ, ನಂತರದಲ್ಲಿ ಬಿಜೆಪಿಯ ಬಸವರಾಜ ಬೊಮ್ಮಾಯಿ 2008 ರಿಂದ 2023ವರೆಗೆ.

**ಮುತ್ತಜ್ಜ, ಮರಿಮೊಮ್ಮಗ..** 1952 ರಲ್ಲಿ ಕಾಂಗ್ರೆಸ್ ನಿಂದ ಮುಂಬೈ ಸರ್ಕಾರದ

**ಶಿಗ್ಗಾಂವಿ**

ಶಾಸಕರಾಗಿದ್ದ ಮಲ್ಲಪ್ಪ ಹುರಳಿಕೊಪ್ಪ ಅವರ ಮೊಮ್ಮಗ ಸಂಸದ ಬಸವರಾಜ ಬೊಮ್ಮಾಯಿ ರಾಜೀನಾಮೆಯಿಂದ ತೆರವಾಗಿರುವ ಈ ಕ್ಷೇತ್ರದಲ್ಲೀಗ ಬಿಜೆಪಿ ಅಭ್ಯರ್ಥಿಯಾಗಿರುವ ಭರತ್ ಬೊಮ್ಮಾಯಿ, ಬಸವರಾಜ ಬೊಮ್ಮಾಯಿ ಅವರ ಪುತ್ರ, ಮಲ್ಲಪ್ಪ ಹುರಳಿಕೊಪ್ಪ ಅವರ ಮರಿಮೊಮ್ಮಗ, ಮಾಜಿ ಮುಖ್ಯಮಂತ್ರಿ ದಿ. ಎಸ್. ಆರ್. ಬೊಮ್ಮಾಯಿ ಅವರ ಮೊಮ್ಮಗ. ಇವರ ಎದುರಾಳಿ ಕಾಂಗ್ರೆಸ್‌ನಿಂದ ಅಭ್ಯರ್ಥಿಯಾಗಿರುವ ಯಾಸಿರ್ ಆಹ್ಮದ್ ಖಾನ್ ಪಠಾಣ್ ಅವರು ಕಳೆದ ವಿಧಾನ ಸಭೆ ಚುನಾವಣೆಯಲ್ಲಿ ಬಸವರಾಜ ಬೊಮ್ಮಾಯಿ ಎದುರು ಸ್ಪರ್ಧಿಸಿ 30 ಸಾವಿರಕ್ಕೂ ಅಧಿಕ ಮತಗಳ ಅಂತರದಿಂದ ಸೋತವರು. ಈಗ ಕಣದಲ್ಲಿರುವ ಈ ಈರ್ವರೂ ಹೊರಗಿನವರೇ ಆಗಿರುತ್ತಾರೆ ಎಂಬುದು ವಿಶೇಷ.

**-ಮನೋಹರ ಮಲ್ಲಾಡದ,**
ರಾಣೇಬೆನ್ನೂರು.

# ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ ಉಪಯೋಗಿಸಿಕೊಳ್ಳಿ



ದಾವಣಗೆರೆ, ಅ.25- ರಾಜ್ಯದಲ್ಲಿ ಕೋಟ್ಯಾಂತರ ಜನ ಅಸಂಘಟಿತ ವಲಯದಲ್ಲಿದ್ದಾರೆ. ಅವರೆಲ್ಲರೂ ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆಯನ್ನು ಸದುಪಯೋಗ ಪಡಿಸಿಕೊಳ್ಳಬೇಕೆಂದು ಜಿಲ್ಲಾ ಕಾರ್ಮಿಕ ಅಧಿಕಾರಿ ಇಬ್ರಾಹಿಂ ಸಾಬ್ ಹೇಳಿದರು.

ನಗರದ ಕೆ.ಆರ್ ಮಾರುಕಟ್ಟೆಯ ಬೀದಿಬದಿ ವ್ಯಾಪಾರಸ್ಥರ ಕಚೇರಿಯಲ್ಲಿ ಸೋಮವಾರ ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದರು.

ಬೀದಿಬದಿ ವ್ಯಾಪಾರಸ್ಥರ ಸಂಘದ ಸಲಹೆಗಾರ ಮಂಜುನಾಥ್ ಕೈದಾಳೆ ಮಾತನಾಡಿ, ಬೀದಿಬದಿ ವ್ಯಾಪಾರಸ್ಥರು ನಿತ್ಯವೂ ಸರ್ಕಾರಕ್ಕೆ ಅಧಿಕ ಸುಂಕ ಕಟ್ಟುತ್ತಿದ್ದಾರೆ. ಇದೇ ಹಣದಲ್ಲಿ ಕಲ್ಯಾಣ ಮಂಡಳಿಯನ್ನು ನಿರ್ಮಿಸುವ ಮೂಲಕ ಬಡ ವ್ಯಾಪಾರಸ್ಥರಿಗೆ ವಿವಿಧ ಸೌಲಭ್ಯ ಒದಗಿಸಬೇಕೆಂದು ಕಾರ್ಮಿಕ ಅಧಿಕಾರಿಗಳಲ್ಲಿ ಮನವಿ ಮಾಡಿದರು.

ಸಂಘಟನೆಯ ಜಿಲ್ಲಾಧ್ಯಕ್ಷ ಇಸ್ಮಾಯಿಲ್ ಸಾಬ್, ಗೌರವಾಧ್ಯಕ್ಷ ರಹಮತ್ ವುಲ್ಲಾ, ಜಿಲ್ಲಾ ಸಮಿತಿಯ ಕೃಷ್ಣಮೂರ್ತಿ, ಮಂಜುಳಮ್ಮ ಶೀಲಮ್ಮ ಅನೀಲ್ ಹಾಗೂ ಬೀದಿ ಬದಿ ವ್ಯಾಪಾರಸ್ಥರಿದ್ದರು.


**ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ ನಿ. ದೊಡ್ಡಬಾತಿ**
**ದಾವಣಗೆರೆ ತಾ|| ದಾವಣಗೆರೆ ಜಿ||**

**ಪ್ರಕಟಣೆ**

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಮತ್ತು ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ಅನ್ವಯ ಮಾನ್ಯ ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯ, ಬೆಂಗಳೂರು ಇದರ ರಿಟ್ ಪಿಟಿಷನ್ ಸಂಖ್ಯೆ ಡಬ್ಲ್ಯೂ.ಪಿ.ನಂ.17366/2024 ರ ದಿನಾಂಕ:05-09-2024ರ ಆದೇಶದಂತೆ ಭದ್ರಾ ಸಹಕಾರಿ ಕಾರ್ಖಾನೆ ನಿ. ದೊಡ್ಡಬಾತಿ ಕಾರ್ಖಾನೆಯ ಚುನಾವಣಾ ಪ್ರಕ್ರಿಯೆಯನ್ನು ನಾಮ ಪತ್ರ 'ಪರಿಶೀಲನಾ' ಹಂತದಿಂದ ಮುಂದುವರೆಸಲು ಹಾಗೂ ಆದೇಶ ಸ್ವೀಕರಿಸಿ ಎರಡು ತಿಂಗಳಲ್ಲಿ ಚುನಾವಣಾ ಪ್ರಕ್ರಿಯೆಯನ್ನು ಮುಕ್ತಾಯಗೊಳಿಸಲು ಆದೇಶಿಸಿರುವುದರಿಂದ, ಕಾರ್ಖಾನೆಯು ಚುನಾವಣಾಧಿಕಾರಿಗಳಾದ ಮಾನ್ಯ ಚುನಾವಣಾಧಿಕಾರಿಗಳು ಹಾಗೂ ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಂಗಳೂರು ಪ್ರಾಂತ, ಬೆಂಗಳೂರುರವರ ಅಧಿಸೂಚನೆ ಸಂಖ್ಯೆ ಜೆಆರ್‌ಬಿ/ಚುನಾವಣೆ/ಸಿಆರ್-209/2023-24 ದಿನಾಂಕ:14-10- 2024ರಂತೆ ಈ ಕೆಳಕಂಡಂತೆ ಅಧಿಸೂಚನೆ ಹೊರಡಿಸಿರುತ್ತಾರೆ.

| ಕ್ರ.ಸಂ. | ಚುನಾವಣಾ ಪ್ರಕ್ರಿಯೆಗಳ ವಿವರ | ನಿಗದಿಪಡಿಸಿದ ದಿನಾಂಕ |
|---|---|---|
| 01 | ನಾಮಪತ್ರಗಳ ಪರಿಶೀಲನೆ | 28-10-2024 |
| 02 | ನಾಮಪತ್ರಗಳನ್ನು ಹಿಂಪಡೆಯುವುದು | 29-10-2024 |
| 03 | ಅಗತ್ಯಬಿದ್ದಲ್ಲಿ ಮತದಾನ ನಡೆಯುವ ದಿನಾಂಕ | 04-11-2024 |
| 04 | ಚುನಾವಣಾ ಪ್ರಕ್ರಿಯೆ ಪೂರ್ಣಗೊಳಿಸಬೇಕಾದ ದಿನಾಂಕ | 04-11-2024 |

ಮತದಾನ ಪ್ರಕ್ರಿಯೆಯನ್ನು ಪಾರದರ್ಶಕವಾಗಿ ನಡೆಸುವ ಉದ್ದೇಶದಿಂದ ಕಾರ್ಖಾನೆಯಿಂದ ನೀಡಿದ ಭಾವಚಿತ್ರವಿರುವ ಗುರುತಿವ ಚೀಟಿಯನ್ನು ಹಾಜರು ಪಡಿಸಿ ಮತದಾನ ಮಾಡವುದು ಕಡ್ಡಾಯಗೊಳಿಸಲಾಗಿದ್ದು, ಎಲ್ಲಾ ಸದಸ್ಯರಿಗೆ ಗುರುತಿನ ಚೀಟಿಯನ್ನು ನೀಡುವುದು ಕಡ್ಡಾಯವಾಗಿದ್ದು, ಗುರುತಿನ ಚೀಟಿ ಹೊಂದಿರದ ಸದಸ್ಯರು ಆಧಾರ ಕಾರ್ಡ್/ ವೋಟರ್‌ಐಡಿ, ಕಾರ್ಖಾನೆಯಿಂದ ಸದಸ್ಯತ್ವದ ಬಗ್ಗೆ ನೀಡಲಾದ ಯಾವುದಾದರೊಂದು ಪುರಾವೆಯನ್ನು ಒದಗಿಸಿ, ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ ಇಲ್ಲಿ ಹಾಜರಾಗಿ ಬೆಳಿಗ್ಗೆ 10.00 ರಿಂದ ಸಂಜೆ 3.00 ಘಂಟೆಯವರೆಗೆ, ದಿನಾಂಕ:03-11-2024 ರೊಳಗಾಗಿ ಕಾರ್ಖಾನೆಯ ಗುರುತಿನ ಚೀಟಿ ಪಡೆಯಲು ತಿಳಿಸಿದೆ.

ದಿನಾಂಕ: 22-10-2024

ಸಹಿ/- ವ್ಯವಸ್ಥಾಪಕ ನಿರ್ದೇಶಕರು,
ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ ಹಾಗೂ
ಉಪನಿಬಂಧಕರು, ದಾವಣಗೆರೆ ಜಿಲ್ಲೆ.

# ಶಿಕ್ಷಣವು ಉದ್ಯೋಗಕ್ಕೆ ನೆರವಾಗಲಿ



ನಮಗೆಲ್ಲರಿಗೂ ತಿಳಿದಿರುವ ಹಾಗೆ ಎಲ್ಲರ ಬದುಕಿನಲ್ಲಿ ಶಿಕ್ಷಣವು ಬಹುದೊಡ್ಡ ಪಾತ್ರ ವಹಿಸುತ್ತದೆ. ನಾವು ಯಾವುದೇ ನೌಕರಿ, ಉದ್ಯೋಗ ಅಥವಾ ವ್ಯಾಪಾರ ವ್ಯವಹಾರವನ್ನು ಪ್ರಾರಂಭಿಸಬೇಕೆಂದರೆ ನಮಗೆ ಕನಿಷ್ಠ ಜ್ಞಾನದ ಜೊತೆಗೆ ಶಿಕ್ಷಣದ ಅರಿವಿರಬೇಕು.

ಆದರೆ ಇತ್ತೀಚಿನ ದಿನಗಳಲ್ಲಿ ಪದವೀಧರರ ಸಂಖ್ಯೆ ಹೆಚ್ಚಾಗುತ್ತಿದೆ. ಜೊತೆಗೆ ನಿರುದ್ಯೋಗ ಸಮಸ್ಯೆ ಕೂಡ ಹೆಚ್ಚಾಗುತ್ತಿದೆ. ಏಕೆಂದರೆ ನಾವು ಓದಿದ ಶಿಕ್ಷಣಕ್ಕೂ ಮತ್ತು ಉದ್ಯೋಗ ಸಂಸ್ಥೆಗಳು ಕೇಳುತ್ತಿರುವ ಕೌಶಲ್ಯಗಳಿಗೂ ಅಜಗಜಾಂತರ ವ್ಯತ್ಯಾಸವಿದೆ. ರಾಜಕೀಯ ಪಕ್ಷಗಳು ಮತ್ತು ಸರ್ಕಾರಗಳು ತಮಗೆ ಮನಬಂದಂತೆ ಶಿಕ್ಷಣ ಪದ್ಧತಿಯನ್ನು ಬದಲಾಯಿಸುವುದು ಅವರ ಅನುಕೂಲಕ್ಕೆ ತಕ್ಕಂತೆ ಪಿಯುಸಿ ಮತ್ತು ಪದವಿ ಅಥವಾ ಸ್ನಾತಕೋತ್ತರ ಸಿಲೆಬಸ್‌ಗಳನ್ನು ಮತ್ತು ಎನ್‌ಇಪಿ, ಎಸ್‌ಇಪಿ ಇಂತಹ ಹಲವಾರು ಶಿಕ್ಷಣದಲ್ಲಿನ ಬದಲಾವಣೆಯು ಶಿಕ್ಷಕರನ್ನು ಮತ್ತು ವಿದ್ಯಾರ್ಥಿಗಳನ್ನು ಬಹಳಷ್ಟು ತೊಂದರೆಗೆ ಸಿಲುಕಿಸಲು ದಾರಿ ಮಾಡಿಕೊಟ್ಟಿದೆ.

ಪ್ರಸ್ತುತ ದಿನಮಾನಗಳಲ್ಲಿ ಶಿಕ್ಷಣ ಪದ್ಧತಿ ಎಷ್ಟರ ಮಟ್ಟಿಗೆ ಹಳ್ಳ ಹಿಡಿಯುತ್ತಿದೆ ಎಂದರೆ ಪಿಯುಸಿ, ಪದವಿ ಮತ್ತು ಸ್ನಾತಕೋತ್ತರ ಶಿಕ್ಷಣ ವ್ಯವಸ್ಥೆಯು ಕೇವಲ ಮಾರ್ಕ್ಸ್ ಕಾರ್ಡ್ ಆಧರಿತವಾಗಿವೆಯೇ ಹೊರತು ವಿದ್ಯಾರ್ಥಿಗಳಲ್ಲಿ ಕೆಲಸ ಗಿಟ್ಟಿಸಿಕೊಳ್ಳುವ ಕೌಶಲ್ಯಗಳು ನಶಿಸಿ ಹೋಗುತ್ತಿವೆ.

ಬಹುತೇಕ ಹಿಂದಿನ ಶಿಕ್ಷಣ ವ್ಯವಸ್ಥೆಯು ಮಾರ್ಕ್ಸ್‌ಕಾರ್ಡ್ ವಾದಿ ದೃಷ್ಟಿಕೋನದ ಸ್ವರೂಪದ್ದಾಗಿದೆ. ಹೊರತು ಉದ್ಯೋಗಕ್ಕೆ ಬೇಕಾದಂತಹ ಕೌಶಲ್ಯವನ್ನು ಯುವ ಪೀಳಿಗೆಯಲ್ಲಿ ಭರಿಸುವ ಕಾರ್ಯಗಳು ಈಗಿನ ಶಿಕ್ಷಣ ವ್ಯವಸ್ಥೆಯಲ್ಲಿ ಮರೆಮಾಚಿ ಹೋಗುತ್ತಿದೆ. ಇದೇ ಬಹಳಷ್ಟು ವಿಪರ್ಯಾಸ ಸಂಗತಿ.

ಎಷ್ಟೋ ಕೋಟ್ಯಾಂತರ ಪದವೀಧರರು ನಿರಂತರ ಕೆಲಸ ಹುಡುಕುವ ಕಾರ್ಯದಲ್ಲಿ ತೊಡಗಿ ಕಂಗೆಟ್ಟು ಹೋಗಿದ್ದಾರೆ. ಶಿಕ್ಷಣ ಪದ್ಧತಿ ಪರಿಪೂರ್ಣವಾಗಿರಬೇಕೆಂದರೆ ಪದವಿ ವಿಷಯವಾರು ಅಭ್ಯಾಸದ ಜೊತೆಗೆ ವಿದ್ಯಾರ್ಥಿಗಳಲ್ಲಿ ಉತ್ತಮ ಕೌಶಲ್ಯವನ್ನು ನೀಡುವ ಪ್ರಾಯೋಗಿಕ ಮತ್ತು ವೈಜ್ಞಾನಿಕ ಪರಿಕಲ್ಪನೆ ಬರುವಂತೆ ಪ್ರಚೋದಿಸಬೇಕು. ಅವರು ಓದುವ ಕಲಾ, ವಾಣಿಜ್ಯ ಮತ್ತು ಸೈನ್ಸ್ ಇನ್ನಿತರೆ ತಾಂತ್ರಿಕ ವಿಷಯಗಳಲ್ಲಿ ಪ್ರಾಯೋಗಿಕವಾದ ಕಲಿಕೆ ಬಹಳಷ್ಟು ಮುಖ್ಯವಾಗುತ್ತದೆ. ವಿದ್ಯಾರ್ಥಿಗಳು ಬಹುಶಃ ಕಲಿಕೆಯ ಜೊತೆಗೆ ಒಂದಿಷ್ಟು ಕಂಪ್ಯೂಟರ್ ಜ್ಞಾನ, ಸಂವಹನ ಕಲೆ ಮತ್ತು ಕೆಲ ಕೌಶಲ್ಯಗಳನ್ನು ರೂಢಿಸಿಕೊಂಡರೆ ಶಿಕ್ಷಣದ ನಂತರ ಉದ್ಯೋಗ ಗಿಟ್ಟಿಸಿಕೊಳ್ಳುವುದು ಬಹಳಷ್ಟು ಸುಲಭವಾಗುತ್ತದೆ.

ಜೊತೆಗೆ ಸರ್ಕಾರಗಳು ಕೇವಲ ಜಾತಿ ಧರ್ಮ ದೇವರ ಹೆಸರಲ್ಲಿ ದೇಶ ನಡೆಸುವುದನ್ನು ಬಿಟ್ಟು ಕೋಟ್ಯಾಂತರ ಪದವಿದರರಿಗೆ ಉದ್ಯೋಗವನ್ನು ಸೃಷ್ಟಿಸುವ ಕೆಲಸ ಮಾಡಬೇಕು. ನಮ್ಮಲ್ಲಿರುವ ಹೆಚ್ಚಿನ ಮಾನವ ಸಂಪನ್ಮೂಲವನ್ನು ನಾವು ಸುಸಜ್ಜಿತವಾಗಿ ಉಪಯೋಗಿಸಿಕೊಂಡರೆ ಉತ್ಪಾದನಾ ಕಾರ್ಯದಲ್ಲಿ ಅಥವಾ ಮ್ಯಾನುಫ್ಯಾಕ್ಚರಿಂಗ್ ಇಂಡಸ್ಟ್ರೀಸ್‌ಗಳಲ್ಲಿ ಉಪಯೋಗಿಸಿಕೊಂಡು ಉತ್ಪಾದನೆಯನ್ನು ಹೆಚ್ಚಿಸಿದರೆ ಯುವಕರಿಗೆ ಉದ್ಯೋಗದ ಜೊತೆಗೆ ದೇಶದ ಜಿಡಿಪಿಯು ಕೂಡ ಹೆಚ್ಚಾಗುತ್ತದೆ. ಅಂತಹ ಸಂದರ್ಭದಲ್ಲಿ ನಾವು ವಿದೇಶಗಳನ್ನು ಆಮದಿಗೆ ಅವಲಂಬಿತವಾಗುವುದನ್ನು ನಿಲ್ಲಿಸಬಹುದು. ನಮ್ಮಲ್ಲಿರುವ ಮಾನವ ಸಂಪನ್ಮೂಲಗಳಿಗೆ ಕೃಷಿ, ಕೈಗಾರಿಕೆ ಮತ್ತು ಸೇವಾ ವಲಯಕ್ಕೆ ಸೂಕ್ತವಾಗಿ ಬಳಸಿಕೊಂಡರೆ ದೇಶದ ಅಭಿವೃದ್ಧಿ ಆಗುವುದರಲ್ಲಿ ಯಾವುದೇ ಅನುಮಾನವಿರುವುದಿಲ್ಲ.

ಕಳೆದ ಐದರಿಂದ ಆರು ವರ್ಷಗಳಲ್ಲಿ ಉದ್ಯೋಗ ಸೃಷ್ಟಿಯಲ್ಲಿ ಬಹಳಷ್ಟು ಕುಂಟಿತಗೊಂಡಿದೆ. ಇದರ ಪರಿಣಾಮವಾಗಿ ವಿದ್ಯಾಭ್ಯಾಸ ಮಾಡಿದ್ದ ಯುವಕರು ಅಲ್ಲಿ ಇಲ್ಲಿ ಸಣ್ಣಪುಟ್ಟ ಉದ್ಯೋಗವನ್ನು ಪಡೆಯಲು ಪರದಾಡುತ್ತಿದ್ದಾರೆ. ಕೇವಲ 15 ಸಾವಿರ ತಿಂಗಳಿಗೆ ಪಡೆಯಲು ಪರದಾಡುತ್ತಿದ್ದಾರೆ. ದೇಶದಲ್ಲಿ ನಿರುದ್ಯೋಗ ಸಮಸ್ಯೆ ಕೂಡ ಬಹಳಷ್ಟು ಹೆಚ್ಚಾಗಿದ್ದು, ಪದವಿ ಮತ್ತು ಸ್ನಾತಕೋತ್ತರ ಪದವೀಧರರಿಗೂ ಮತ್ತು ಸಾಮಾನ್ಯ ವ್ಯಕ್ತಿಗಳಿಗೂ ವ್ಯತ್ಯಾಸವಿಲ್ಲದಂತಾಗಿದೆ.

ಇತ್ತೀಚಿನ ದಿನಗಳ ಶಿಕ್ಷಣ ಪದ್ಧತಿಯು ಬಹಳಷ್ಟು ವ್ಯಾಪಾರವಾಗಿ ಪರಿಣಮಿಸಿಬಿಟ್ಟಿದೆ ಯಾವುದೇ ನೈತಿಕ ಮತ್ತು ಸಾಮಾಜಿಕ ಕಾಳಜಿ ಇಲ್ಲದೇ ಕೇವಲ ಕಮರ್ಷಿಯಲ್ ಮತ್ತು ಕಾರ್ಪೊರೇಟ್ ರೂಪವೂ ಶಿಕ್ಷಣದಲ್ಲಿ ಬಂದಿದೆ.

ನಿರುದ್ಯೋಗದಿಂದ ಕಂಗೆಟ್ಟ ಯುವ ಜನತೆಗೆ ಉದ್ಯೋಗ ದೊರಕಲಿ ಮತ್ತು ಶಿಕ್ಷಣ ಪದ್ಧತಿಯಲ್ಲಿ ಬದಲಾವಣೆ ಆಗಲಿ. ಕೇವಲ ಮಾರ್ಕ್ಸ್ ಕಾರ್ಡ್ ಆಧಾರಿತ ಶಿಕ್ಷಣ ವ್ಯಾಪಾರವಾಗದಿರಲಿ ಎಂಬುದೇ ಈ ಲೇಖನದ ಆಶಯ.

**- ಮಲ್ಲೇಶ್ ಎಂ. ನಾಯ್ಕ**
ಉಪನ್ಯಾಸಕರು, ದಾವಣಗೆರೆ.

# ಅತಿವೃಷ್ಟಿ: ನಿರಾಶ್ರಿತರಿಗೆ ಶಾಶ್ವತ ಪರಿಹಾರ

**(1ನೇ ಪುಟದಿಂದ)** ಕಾಲದಲ್ಲಿ ಪರಿಹಾರ ನೀಡಿದಲ್ಲಿ ಉಪಯುಕ್ತವಾಗಲಿದೆ ಎಂದು ತ್ವರಿತವಾಗಿ ಪರಿಹಾರ ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು.

ದಾವಣಗೆರೆ ಜಿಲ್ಲೆಯಲ್ಲಿ ಹಿಂಗಾರಿನಲ್ಲಿ ಶೇ. 190 ರಷ್ಟು ವಾಡಿಕೆಗಿಂತ ಹೆಚ್ಚು ಮಳೆಯಾಗಿದ್ದರಿಂದ ಅನೇಕ ಕೆರೆ, ಕಟ್ಟೆಗಳು ತುಂಬಿವೆ ಮತ್ತು ಬೆಳೆ ನಷ್ಟ ಉಂಟಾಗಿದೆ. ಬೆಳೆ ನಷ್ಟವಾದ ಬಗ್ಗೆ ಜಂಟಿ ಸಮೀಕ್ಷೆ ನಡೆಸಿ ವರದಿ ನೀಡಲು ಹಣವಿರುತ್ತದೆ. ಯಾವುದೇ ಅನುದಾನದ ಕೊರತೆ ಇರುವುದಿಲ್ಲ. ಹಿರೇಮಲ್ಲನಹೊಳೆ ಗ್ರಾಮದಲ್ಲಿ ಕೆರೆ ಕೋಡಿಯಲ್ಲಿ ಅನಧಿಕೃತವಾಗಿ ಮನೆಗಳನ್ನು ನಿರ್ಮಿಸಿದ್ದರಿಂದ, ಇಲ್ಲಿನ ಮನೆಗಳಿಗೆ ನೀರು ನುಗ್ಗಿದ್ದು ಇಲ್ಲಿರುವ 35 ಮನೆಗಳನ್ನು ಬೇರೆ ಕಡೆ ಸ್ಥಳಾಂತರಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದ್ದು, ಮನೆ ಪರಿಹಾರದ ಜೊತೆಗೆ ಬೇರೆಡೆ ನಿವೇಶನ ನೀಡಿ ಇವರಿಗೆ ಮನೆ ನಿರ್ಮಿಸಿಕೊಡಲಾಗುತ್ತದೆ.

ಇವರಿಗೆ ಮುಂದಿನ ಎರಡು ತಿಂಗಳಲ್ಲಿ ಶಾಶ್ವತವಾದ ಪರಿಹಾರ ಕಂಡುಕೊಳ್ಳಲು ಸೂಚಿಸಲಾಗಿದೆ ಮತ್ತು ಇದೇ ಗ್ರಾಮದಲ್ಲಿ ಮನೆಗಳು ಕುಸಿದಿದ್ದು ಈ ಮನೆಗಳಿಗೂ ಪರಿಹಾರದ ಜೊತೆಗೆ ಬದಲಿ ನಿವೇಶನ ಹಾಗೂ ಮನೆ ನಿರ್ಮಾಣ ಮಾಡಿಕೊಡಲು ತಿಳಿಸಲಾಗಿದೆ ಎಂದರು.

ದಾವಣಗೆರೆ ಜಿಲ್ಲೆಯಲ್ಲಿ ಮಾರ್ಚ್‌ನಿಂದ ಮೇ ವರೆಗೆ ಜಿಲ್ಲೆಯಲ್ಲಿ ಸಂಪೂರ್ಣ ಹಾನಿಯಾದ 1 ಮನೆ, ಭಾಗಶಃ 35 ಮನೆಗಳು, 25 ಕುರಿಗಳು ಮೃತ, 251.8 ಹೆಕ್ಟೇರ್ ಬೆಳೆ ಹಾನಿಯಾಗಿದ್ದು11.24 ಲಕ್ಷ ರೂ. ಪರಿಹಾರ ನೀಡಿದೆ. ಜೂನ್ ನಿಂದ ಸೆಪ್ಟೆಂಬರ್ ವರೆಗೆ 5 ಹಸು, 17 ಕುರಿಗಳು ಮೃತಪಟ್ಟಿದ್ದು, 2.71 ಲಕ್ಷ ರೂ. ಪರಿಹಾರ ನೀಡಲಾಗಿದೆ. ಮನೆಗಳಲ್ಲಿ 85 ಪೂರ್ಣ ಹಾನಿ, 97 ಭಾಗಶಃ ಹಾನಿ, 109 ಅಲ್ಪ ಹಾನಿಯಾಗಿದ್ದು, ಒಟ್ಟು 1,83,20,000 ರೂ.ಪರಿಹಾರ ನೀಡಿದೆ. ಹಾನಿಯಾದ ಮೂಲ ಸೌಕರ್ಯಗಳ ಅಭಿವೃದ್ಧಿಗೆ 2,14,95,000 ರೂ. ಗಳನ್ನು ಒದಗಿಸಲಾಗಿದೆ.

ಹಿಂಗಾರು ಹಂಗಾಮಿನಲ್ಲಿ ಅಕ್ಟೋಬರ್‌ನಲ್ಲಿ ಮನೆ ಗೋಡೆ ಬಿದ್ದು ಮೃತರ ಕುಟುಂಬಕ್ಕೆ 5 ಲಕ್ಷ ರೂ. ಪರಿಹಾರ ನೀಡಿದೆ. ನ್ಯಾಮತಿ ತಾಲ್ಲೂಕಿನಲ್ಲಿ ಹಳ್ಳದಲ್ಲಿ ಕೊಚ್ಚಿ ಹೋಗಿ ಮೃತರಾದವರ ಕುಟುಂಬಕ್ಕೆ ವರದಿ ಬಂದ ತಕ್ಷಣ ಪರಿಹಾರ ಒದಗಿಸಲಾಗುತ್ತದೆ. 4 ಹಸುಗಳು, 16 ಕುರಿಗಳು ಮರಣ ಹೊಂದಿದ್ದು 2.13 ಲಕ್ಷ ರೂ. ಪರಿಹಾರ ನೀಡಲಾಗಿದೆ. ಬೆಳೆ ಸಮೀಕ್ಷೆ ನಡೆಯುತ್ತಿದ್ದು, ಸಮೀಕ್ಷೆ ನಂತರ ಪರಿಹಾರ ನೀಡಲಾಗುತ್ತದೆ. ಜಿಲ್ಲೆಯ ಎಲ್ಲಾ ತಹಶೀಲ್ದಾರರ ಖಾತೆಯಲ್ಲಿ 1.68 ಕೋಟಿ ರೂ. ಮತ್ತು ಜಿಲ್ಲಾಧಿಕಾರಿಗಳ ಪಿ.ಡಿ. ಖಾತೆಯಲ್ಲಿ 10.60 ಕೋಟಿ ರೂ. ಹಣವಿರುತ್ತದೆ. ಅನುದಾನದ ಕೊರತೆ ಇರುವುದಿಲ್ಲ ಸಚಿವರು ತಿಳಿಸಿದರು.

ಶಾಸಕ ಬಿ.ದೇವೇಂದ್ರಪ್ಪ ಮಾತನಾಡಿ, ತಾಲೂಕಿನಲ್ಲಿ ಕೆರೆ ಕೋಡಿ ಬಿದ್ದಿರುವ ಹಾಗೂ ಅತಿವೃಷ್ಟಿಯಿಂದ ಮನೆಹಾನಿ, ಬೆಳೆಹಾನಿ ಕುರಿತು ಸಚಿವರಿಗೆ ಮಾಹಿತಿ ನೀಡಲಾದ ಹಿನ್ನೆಲೆ ಸ್ಪಂದಿಸಿ ಇಂದು ಕ್ಷೇತ್ರಕ್ಕೆ ಆಗಮಿಸಿರುವುದು ಪರಿಹಾರದ ಭರವಸೆ ಈಡೇರಿದೆ. ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಒತ್ತುನೀಡುವುದಾಗಿ ತಿಳಿಸಿದರು.

ಜಿಲ್ಲಾಧಿಕಾರಿ ಜಿ.ಎಂ.ಗಂಗಾಧರಸ್ವಾಮಿ, ಅಪರ ಜಿಲ್ಲಾಧಿಕಾರಿ ಪಿ.ಎನ್.ಲೋಕೇಶ್, ತಹಶಿಲ್ದಾರ್ ಸೈಯದ್ ಕಲೀಮ್‌ಉಲ್ಲಾ, ತಾ. ಪಂ. ಇಒ ಕೆಂಚಪ್ಪ, ಜಂಟಿ ಕೃಷಿ ನಿರ್ದೇಶಕ ಶ್ರೀನಿವಾಸ ಚಿಂತಾಲ್ ಸೇರಿದಂತೆ ಕಂದಾಯ ಇಲಾಖೆ, ತೋಟಗಾರಿಕೆ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

## ಫಿಲಿಪೈನ್ಸ್‌ಗೆ ಮತ್ತೆ ಅಪ್ಪಳಿಸಲಿದೆ 'ಟ್ರಾಮಿ'


**(1ನೇ ಪುಟದಿಂದ)** 125 ಕಿ.ಮೀ. ವೇಗ ಹೊಂದಿರುವ ಟ್ರಾಮಿ ಚಂಡಮಾರುತವು ತೀವ್ರ ಹಾನಿಗೆ ಕಾರಣವಾಗಿದೆ. ಈ ಚಂಡಮಾರುತ ವಿಯಟ್ನಾಂ ಕಡೆ ತೆರಳಿದೆ. ಆದರೆ, ದಕ್ಷಿಣ ಚೀನಾ ಸಮುದ್ರದಲ್ಲಿ ಗಾಳಿಯ ತೀವ್ರ ಒತ್ತಡವಿದೆ. ಇದೂ ಸೇರಿದಂತೆ ಹಲವಾರು ಕಾರಣಗಳಿಂದಾಗಿ ಚಂಡಮಾರುತ ವಾಪಸ್ ಬಂದು ಫಿಲಿಪೈನ್ಸ್‌ಗೆ ಅಪ್ಪಳಿಸುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಮುಂದಿನ ವಾರದಲ್ಲಿ ಚಂಡಮಾರುತ ಫಿಲಿಪೈನ್ಸ್ ಕಡೆ ವಾಪಸ್ ಬರಲಿದೆ. ಆದರೆ, ನೆಲಕ್ಕೆ ಅಪ್ಪಳಿಸದೇ ದಾಟಿ ಹೋಗುವ ಸಾಧ್ಯತೆ ಇದೆ ಎಂದು ತಿಳಿಸಲಾಗಿದೆ.

ರಿವರ್ಸ್ ಬರುವ ಚಂಡಮಾರುತ ಏಷಿಯಾದ ಹವಾಮಾನ ಪರಿಣಿತರ ಆಸಕ್ತಿಗೆ ಕಾರಣವಾಗಿದೆ. ಚಂಡಮಾರುತದ ದಾರಿಯನ್ನು ಗುರುತಿಸಲು ಫಿಲಿಪೈನ್ಸ್‌ಗೆ ನೆರವಾಗುವುದಾಗಿ ಜಪಾನ್ ಹೇಳಿದೆ. ಇದಲ್ಲದೇ ಪೆಸಿಫಿಕ್ ಸಮುದ್ರದಲ್ಲಿ ಮತ್ತೊಂದು ಚಂಡಮಾರುತ ಸೃಷ್ಟಿಯಾಗುತ್ತಿದೆ. ಇದು ದೇಶಕ್ಕೆ ಹಾನಿ ತರುವ ಸಾಧ್ಯತೆ ಇದೆ.

## ರತನ್ ಎಂಬ ಭಾರತ ರತ್ನ

ನಂದಿ ಹೋಯಿತು ಮಾನವೀಯತೆಯ ನಂದಾದೀಪವು
ಆಧುನಿಕ ಭಾರತದ ಕರ್ಣನ ವ್ಯಕ್ತಿತ್ವವು
ಅಸಹಾಯಕರಿಗೆ ಆಸರೆಯಾದ ಆ ನಗುವು
ಕಳೆದುಕೊಂಡು ಶೋಕಿಸುತ್ತಿದೆ ಜಗವು



ಉಪ್ಪಿನಿಂದ ಉಕ್ಕಿನವರೆಗೂ
ಹಬ್ಬಿದ ಉದ್ಯಮ
ಆಡದೆ ಮಾಡುವ
ಗುಣದೊಳ್ ಸರ್ವೋತ್ತಮ
ಕರುಣೆಯ ತುಂಬಿದ ಕಣ್ಣಿನ
ಕಡಲು
ನೊಂದ ಜೀವಗಳನ್ನು ಸಂತೈಸಿದ ಮಡಿಲು

ನೋವುಗಳ ಮೆಟ್ಟಿ ನಿಂತ ಉಕ್ಕಿನ ಮನುಷ್ಯ
ಭವ್ಯ ಭಾರತಕ್ಕೆ ಬಂಗಾರದ ಕಳಸ
ರಾಷ್ಟ್ರಕ್ಕಾಗಿ ದುಡಿದ ಜೀವ
ಭಾರತದ ಅಭಿವೃದ್ಧಿಯೇ ಬದುಕಿನ ಭಾವ

ಜೋಪಡಿಗಳಿಗೆ ಬೆಳಕನಿಟ್ಟು
ಬಡತನಕ್ಕೆ ಬೆಂಕಿಯನಿಟ್ಟ
ಹಸಿದೊಡಲಿಗೆ ಅನ್ನವನಿಟ್ಟು
ಆರ್ಥಿಕತೆಯ ಅಭಿವೃದ್ಧಿಗೆ ಹೆಗಲ ಕೊಟ್ಟ

ವರ್ಣಿಸುವುದೇನಿದೆ ರತನ್ ಎನ್ನುವುದೇ ರೂಪಕ
ಸ್ಟಾರ್ಟಪ್ ಗಳಿಗೆ ಜನ್ಮನೀಡಿದ ಜನಕ
ಕಲ್ಯಾಣಕ್ಕೆ ಹೊಸ ಭಾಷ್ಯ ಬರೆದ ಕನಕ
ವಸುದೈವ ಕುಟುಂಬದ ಪಾಲಕ

ಭವ್ಯ ಭಾರತಕ್ಕೆ ಪದ್ಮವಿಭೂಷಣ
ದಾನ ಧರ್ಮಕ್ಕೆ ಅವರೇ ವಿಶೇಷಣ
ಜನ್ಮನೀಡಲಿ ಭಾರತಾಂಬೆ ರತನ್ ಟಾಟಾರಂತಹ
ಮಗನಿಗೆ
ನೋವ ನುಂಗಿ ನಲಿವ ಹಂಚಿದ ಸಂತನಿಗೆ

ಬಹು ಭಾರ ಹೃದಯದಿ ನಿಮಗೆ ಭಾವಪೂರ್ಣ ನಮನ
ಒದ್ದೆಗಣ್ಣು ಬೇಡುತ್ತಿವೆ ಭಾರತಕ್ಕೆ ಆಗಲಿ
ನಿಮ್ಮಮರು ಆಗಮನ.!

**ಬಸವರಾಜ. ಕರುವಿನ , ಬಸವನಾಳು**

# ಷೇರುಪೇಟೆಯಲ್ಲಿ ಕರಗಿದ 6.80 ಲಕ್ಷ ಕೋಟಿ

**(1ನೇ ಪುಟದಿಂದ)** ಕುಸಿತಕ್ಕೆ ಪ್ರಮುಖ ಕಾರಣವಾಗಿದೆ ಎಂದು ಸ್ವಾಸ್ತಿಕಾ ಇನ್ವೆಸ್ಟ್‌ಮೆಂಟ್ ಮುಖ್ಯ ಸಂಶೋಧಕ ಸಂತೋಷ್ ಮೀನಾ ಹೇಳಿದ್ದಾರೆ.

ಗ್ರಾಹಕರ ವಲಯದಲ್ಲಿ ಕಾರ್ಯನಿರ್ವಹಿಸುವ ಕಂಪನಿಗಳ ಆದಾಯ ವರದಿ ನಿರಾಶಾದಾಯಕವಾಗಿದೆ. ಇದು ಆರ್ಥಿಕತೆ ಮಂದವಾಗುತ್ತಿರುವುದನ್ನು ತೋರಿಸಿದೆ. ವಿಶೇಷವಾಗಿ ನಗರ ಪ್ರದೇಶಗಳಲ್ಲಿ ಗ್ರಾಹಕರ ವಸ್ತುಗಳ ಬಳಕೆ ಕಡಿಮೆಯಾಗಿದೆ ಎಂದು ಅವರು ಹೇಳಿದ್ದಾರೆ.

ಇಂಡಸ್‌ಇಂಡ್ ಬ್ಯಾಂಕ್ ಸೆಪ್ಟೆಂಬರ್ ಚತುರ್ಥದಲ್ಲಿ ಗಳಿಸಿದ ಲಾಭ ಶೇ.40ರಷ್ಟು ಕುಸಿದಿದೆ. ಇದರಿಂದಾಗಿ ಬ್ಯಾಂಕ್ ಷೇರು ಮೌಲ್ಯ ಶೇ.18.56ರಷ್ಟು ಕುಸಿದಿದೆ.

ಮಹೀಂದ್ರ ಅಂಡ್ ಮಹೀಂದ್ರ, ಲಾರ್ಸೆನ್ ಅಂಡ್ ಟರ್ಬೋ, ಎನ್.ಟಿ.ಪಿ.ಸಿ., ಅದಾನಿ ಪೋರ್ಟ್ಸ್, ಟಾಟಾ ಸ್ಟೀಲ್, ಮಾರುತಿ, ಬಜಾಜ್ ಫೈನಾನ್ಸ್ ಹಾಗೂ ಟೈಟನ್ ಸೇರಿದಂತೆ ಹಲವು ಕಂಪನಿಗಳ ಷೇರು ಮೌಲ್ಯ ಕುಸಿದಿದೆ.

ಎರಡನೇ ಚತುರ್ಥದಲ್ಲಿ ಕಂಪನಿಗಳ ಲಾಭ ಕಡಿಮೆಯಾಗಿರುವುದು ಷೇರು ಪೇಟೆಯಲ್ಲಿ ಕುಸಿತಕ್ಕೆ ಕಾರಣವಾಗಿದೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಮಾರುಕಟ್ಟೆಯಿಂದ ಹಿಂದೆ ಸರಿಯುತ್ತಿರುವುದರಿಂದ ಪರಿಣಾಮವಾಗುತ್ತಿದೆ ಎಂದು ಮೆಹ್ತಾ ಇಕ್ವಿಟೀಸ್ ಹಿರಿಯ ಉಪಾಧ್ಯಕ್ಷ ಪ್ರಶಾಂತ್ ತಾಪ್ಸೆ ಹೇಳಿದ್ದಾರೆ.

ಗುರುವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು 5,062.45 ಕೋಟಿ ರೂ.ಗಳ ಹೂಡಿಕೆ ಹಿಂಪಡೆದಿದ್ದರು. ಇದೇ ವೇಳೆ ದೇಶೀಯ ಸಾಂಸ್ಥಿಕ ಹೂಡಿಕೆದಾರರು 3,620.47 ಕೋಟಿ ರೂ.ಗಳ ಷೇರು ಖರೀದಿಸಿದ್ದಾರೆ.

ಏಷಿಯಾದ ಮಾರುಕಟ್ಟೆಗಳ ಪೈಕಿ ಸಿಯೋಲ್, ಶಾಂಘೈ ಹಾಗೂ ಹಾಂಕಾಂಗ್ ಷೇರುಪೇಟೆಗಳು ಏರುಮುಖವಾಗಿವೆ. ಟೋಕಿಯೋ ಷೇರು ಪೇಟೆ ಕುಸಿದಿದೆ.

# ವಲಸೆ ಸಮಸ್ಯೆ ಸುಳಿಯಲ್ಲಿ ಕೆನಡಾ ಸರ್ಕಾರ

**(1ನೇ ಪುಟದಿಂದ)** ಪೊಲಿವ್ರೆ, ಟ್ರುಡ್ಯೂ ವೈಯಕ್ತಿಕ ಅಸಮರ್ಥತೆ ಕಾರಣದಿಂದ ವಲಸೆ ವ್ಯವಸ್ಥೆ ನಾಶವಾಗಿದೆ. ಲಿಬರಲ್ ಹಾಗೂ ಕನ್ಸರ್ವೇಟಿವ್‌ಗಳು ವಲಸೆ ಬಗ್ಗೆ 150 ವರ್ಷಗಳಿಂದ ಹೊಂದಿದ್ದ ಸಾಮಾನ್ಯ ಜ್ಞಾನದ ಸರ್ವಸಮ್ಮತಿಯನ್ನು ಹಾಳು ಮಾಡಲಾಗಿದೆ ಎಂದಿದ್ದಾರೆ.

ಕೆನಡಾದಲ್ಲಿ ವೃದ್ಧರ ಸಂಖ್ಯೆ ಹೆಚ್ಚಾಗುತ್ತಿದೆ. ಹೆಚ್ಚು ಯುವ ವಲಸಿಗರ ಅಗತ್ಯವಿದೆ. ಆದರೆ, ವಲಸೆ ಬಂದವರ ವಸತಿ, ಆರೋಗ್ಯ, ಶಿಕ್ಷಣ ಮತ್ತಿತರೆ ಅಗತ್ಯಗಳ ಬಗ್ಗೆ ನಿಯಂತ್ರಣ ಇಲ್ಲದಂತಾಗಿದೆ. ದೇಶಕ್ಕೆ ಬಂದವರನ್ನು ವಲಸಿಗರೆನ್ನಬೇಕೇ ಅಥವಾ ನಾಗರಿಕರೆನ್ನಬೇಕೇ ಎಂಬುದರಲ್ಲಿ ಸ್ಪಷ್ಟತೆ ಇಲ್ಲ ಎಂದು ಟೊರಂಟೊ ವಿಶ್ವವಿದ್ಯಾಲಯದ ರಾಜಕೀಯ ವಿಜ್ಞಾನ ಉಪನ್ಯಾಸಕ ನೆಲ್ಸನ್ ವೈಸ್‌ಮ್ಯಾನ್ ಹೇಳಿದ್ದಾರೆ.

# ಅದ್ಧೂರಿ ಮೆರವಣಿಗೆಯಲ್ಲಿ ನಿಖಿಲ್ ಕುಮಾರಸ್ವಾಮಿ ನಾಮಪತ್ರ ಸಲ್ಲಿಕೆ



ಬೆಂಗಳೂರು, ಅ. 25 - ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಪುತ್ರ ನಿಖಿಲ್ ಕುಮಾರಸ್ವಾಮಿ ಎನ್‌ಡಿಎ ಮೈತ್ರಿ ಅಭ್ಯರ್ಥಿಯಾಗಿ ಚನ್ನಪಟ್ಟಣ ವಿಧಾನಸಭಾ ಉಪಚುನಾವಣೆಯಲ್ಲಿ ಆಯ್ಕೆ ಬಯಸಿ ಇಂದು ನಾಮಪತ್ರ ಸಲ್ಲಿಸಿದರು.

ಬಿಜೆಪಿ ಹಾಗೂ ಜೆಡಿಎಸ್ ಮುಖಂಡರ ಜೊತೆಗೂಡಿ ಅದ್ಧೂರಿ ಮೆರವಣಿಗೆಯಲ್ಲಿ ತೆರಳಿ ನಿಖಿಲ್ ನಾಮಪತ್ರ ಸಲ್ಲಿಸಿದರು.

ನಾಮಪತ್ರ ಸಲ್ಲಿಸುವುದಕ್ಕೂ ಮುನ್ನ ತಮ್ಮ ತಾತ ಹೆಚ್.ಡಿ.ದೇವೇಗೌಡ ಹಾಗೂ ಕುಟುಂಬ ಸದಸ್ಯರೊಂದಿಗೆ ನಗರದ ವೆಂಕಟ ರಮಣಸ್ವಾಮಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿದರು. ಅಲ್ಲಿಂದ ತಮ್ಮ ತಂದೆ ಕುಮಾರಸ್ವಾಮಿ ಹಾಗೂ ಪತ್ನಿ ಜೊತೆಗೂಡಿ ಚನ್ನಪಟ್ಟಣದ ಕೆಂಗಲ್ ದೇವಾಲಯಕ್ಕೆ ತೆರಳಿ ಪೂಜೆ ಸಲ್ಲಿಸಿದರು. ಬಿಜೆಪಿ ಹಿರಿಯ ಮುಖಂಡರಾದ ಡಿ.ವಿ. ಸದಾನಂದಗೌಡ, ಆರ್.ಅಶೋಕ್, ಡಾ.ಅಶ್ವತ್ಥನಾರಾಯಣ, ಸಂಸದರಾದ ಡಾ.ಕೆ.ಸುಧಾಕರ್, ಯದುವೀರ ಒಡೆಯರ್ ಮತ್ತಿತರೆ ಗಣ್ಯರ ಜೊತೆ ಚನ್ನಪಟ್ಟಣದ ಹೊರವಲಯದ ಶೇರ್ವಾ ವೃತ್ತದಿಂದ ಜನಸಾಗರದೊಂದಿಗೆ ಬೃಹತ್ ಮೆರವಣಿಗೆಯಲ್ಲಿ ತೆರಳಿ ಚುನಾವಣಾಧಿಕಾರಿಯೂ ಆದ ತಹಶೀಲ್ದಾರ್ ಕಚೇರಿ ತಲುಪಿದರು.

ರೋಡ್ ಶೋದಲ್ಲಿ ಜನಸಾಗರವೇ ಬಂದಿದ್ದರಿಂದ ಶೇರ್ವಾ ವೃತ್ತದಿಂದ ತಹಶೀಲ್ದಾರ್ ಕಚೇರಿ ಮುಟ್ಟಲು ಒಂದು ತಾಸಿಗೂ ಹೆಚ್ಚು ಸಮಯ ಹಿಡಿಯಿತು. ನಂತರ ನಿಖಿಲ್ ಅವರು, ಸಂಸದ ಬಿ.ವೈ.ರಾಘವೇಂದ್ರ, ಸದಾನಂದ ಗೌಡ, ಕುಮಾರಸ್ವಾಮಿ ಹಾಗೂ ಪತ್ನಿ ಜೊತೆ ತೆರಳಿ ನಾಮಪತ್ರ ಸಲ್ಲಿಸಿದರು.

ಬಿಜೆಪಿ ತೊರೆದು ಕಾಂಗ್ರೆಸ್ ಅಭ್ಯರ್ಥಿಯಾಗಿರುವ ಸಿ.ಪಿ. ಯೋಗೇಶ್ವರ್, ಗುರುವಾರವಷ್ಟೇ ಮುಖ್ಯಮಂತ್ರಿ ಸಿದ್ದರಾಮಯ್ಯ ಜೊತೆಗೂಡಿ ಅದ್ಧೂರಿ ಮೆರವಣಿಗೆಯಲ್ಲಿ ತೆರಳಿ ನಾಮಪತ್ರ ಸಲ್ಲಿಸಿದ್ದರು.

ಇಂದು ಎನ್‌ಡಿಎ ಮೈತ್ರಿಕೂಟದ ಕಾರ್ಯಕರ್ತರು, ಅಭ್ಯರ್ಥಿ ಹಾಗೂ ರಾಜ್ಯ ನಾಯಕರನ್ನು ಜಯಘೋಷದೊಂದಿಗೆ ಬೃಹತ್ ಮೆರವಣಿಗೆಯಲ್ಲಿ ಕೊಂಡೊಯ್ದರು.

## ಲೆಬನಾನ್ ಮಾಧ್ಯಮ ಕೇಂದ್ರದ ಮೇಲೆ ಇಸ್ರೇಲ್ ದಾಳಿ

ಬ್ಯೂರತ್, ಅ. 25 - ದಕ್ಷಿಣ ಲೆಬನಾನ್‌ನಲ್ಲಿ ಮಾಧ್ಯಮದವರಿದ್ದ ಕಟ್ಟಡದ ಮೇಲೆ ಇಸ್ರೇಲ್ ದಾಳಿ ನಡೆಸಿದ್ದು, ಮೂವರು ಮಾಧ್ಯಮ ಸಿಬ್ಬಂದಿ ಸಾವನ್ನಪ್ಪಿದ್ದಾರೆ ಎಂದು ಲೆಬನಾನ್ ಸರ್ಕಾರಿ ಸ್ವಾಮ್ಯದ ಸುದ್ದಿ ಸಂಸ್ಥೆಯಾದ ನ್ಯಾಷನಲ್ ನ್ಯೂಸ್ ಏಜೆನ್ಸಿ ತಿಳಿಸಿದೆ.

ಹಲವಾರು ಮಾಧ್ಯಮ ಸಂಸ್ಥೆಗಳಿದ್ದ ತಾಣದ ಮೇಲೆ ದಾಳಿ ನಡೆಸಲಾಗಿದೆ. ಈ ದಾಳಿಗೆ ಮುಂಚೆ ಇಸ್ರೇಲ್ ಮುನ್ನೆಚ್ಚರಿಕೆ ನೀಡಿರಲಿಲ್ಲ ಎಂದು ಸ್ಥಳೀಯ ಸುದ್ದಿ ಸಂಸ್ಥೆಯಾದ ಎ.ಐ. ಜದೀದ್ ತಿಳಿಸಿದೆ.


**ಸೈಟುಗಳು ಮಾರಾಟಕ್ಕಿವೆ**
ವಿವೇಕಾನಂದ ಬಡಾವಣೆಯಲ್ಲಿ ತರಳಬಾಳು ಕೃಷಿ ಕೇಂದ್ರ ಹಿಂಭಾಗದಲ್ಲಿ 40x80 East, 30x54 North, 30x70 North, 30x40 North, 30x50 East-South Corner.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ಹದಡಿ ರಸ್ತೆ, ಶಿರಮಗೊಂಡನಹಳ್ಳಿ ಸುತ್ತ-ಮುತ್ತ 30x50 ಪಶ್ಚಿಮ ಅಕ್ಕ-ಪಕ್ಕ, 30x46 ಪೂರ್ವ ಅಕ್ಕ-ಪಕ್ಕ, 30x50 ಪೂರ್ವ, 30x40 ಪಶ್ಚಿಮ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಮನೆ ಬಾಡಿಗೆಗೆ ಇದೆ**
3 BHK + 1 ಅಟ್ಯಾಚ್ ರೂಂ ಮಹಡಿ ಮೇಲೆ ಹಾಗೂ 3 ಕಾರು ನಿಲ್ಲಿಸಲು ಸ್ಥಳವಿರುವ, ಆಫೀಸು ಅಥವಾ ವಾಸಕ್ಕೆ ಯೋಗ್ಯವಾದ ವಿಶಾಲವಾದ ಮನೆ ಬಾಡಿಗೆಗೆ ಇದೆ. ಸೋಲಾರ್, ಬೋರ್‌ವೆಲ್ ಹಾಗೂ ಮುನ್ಸಿಪಲ್ ನೀರಿನ ಸೌಲಭ್ಯವಿದೆ. 4ನೇ ಮೇನ್, ನಿಟುವಳ್ಳಿ ಹೊಸ ಬಡಾವಣೆ, SBI ಹತ್ತಿರ
94482 01195

**ವಾಟರ್ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**ಕಾಡಜ್ಜಿಯಲ್ಲಿ ಶಿಕ್ಷಕಿಯರು ಬೇಕಾಗಿದ್ದಾರೆ**
Subject : Science, Mathematics, Hindi, Play group, LKG, UKG
Qualification : PUC, BA, D. Ed, B. Ed, B. Sc, NTC,
ವ್ಯಾನ್ ಸೌಲಭ್ಯವಿರುತ್ತದೆ.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :
99729 35569

**ಬಾಡಿಗೆಗೆ**
ಪಿ.ಜೆ ಬಡಾವಣೆ, 8ನೇ ಮೇನ್, 8ನೇಕ್ರಾಸ್
3 ಬೆಡ್ ರೂಂವುಳ್ಳ ಮನೆ
P.B. Road, Reliance trends Building, 1st floor. 2000 sq.ft, Covered terrace 3300sq.ft.
94480 28103

**ತಕ್ಷಣ ಬೇಕಾಗಿದ್ದಾರೆ**
ದಾವಣಗೆರೆ, ಹರಿಹರ, ಹರಪನಹಳ್ಳಿ ಹೊನ್ನಾಳಿ, ಚನ್ನಗಿರಿ, ಜಗಳೂರು ಎಲೆಕ್ಟ್ರಾನಿಕ್ಸ್ ಸರ್ವೀಸ್ ಸೆಂಟರ್‌ನಲ್ಲಿ ಕೆಲಸ ಮಾಡಲು ITI, Diploma ಆದ ಸ್ವಂತ ದ್ವಿಚಕ್ರ ವಾಹನ ಹೊಂದಿರುವವರು ಮತ್ತು ಸಿಸ್ಟಂ ಆಪರೇಟರ್ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ.
9986394387, 08192 230103

**ಬಾಡಿಗೆಗೆ ಮನೆಗಳು ದೊರೆಯುತ್ತವೆ ವಿಚಾರಿಸಿ**
1) ಎರಡು ಬೆಡ್ ರೂಮ್ ಇಂಡಿಪೆಂಡೆಂಟ್ ಹೊಸ ಆಂಜನೇಯ ಬಡಾವಣೆಯ South
2) ಎರಡು ಬೆಡ್ ರೂಮ್ ಇಂಡಿಪೆಂಡೆಂಟ್ ಹೊಸ ಡಾಲರ್ಸ್‌ಕಾಲೋನಿ ಹತ್ತಿರ 100 ಅಡಿ ರೋಡಿಗೆ ಹತ್ತಿರ East.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಕಾರು ಮಾರಾಟಕ್ಕೆ**
KIA Sonet Sept .22ರ ಮಾಡೆಲ್ 7000 KMS. ಹೊಚ್ಚ ಹೊಸ ಕಂಡೀಷನ್. ಡಾಕ್ಟರ್ ಕಾರು HTE (Basic) ಮಾಡೆಲ್
94480 28103

**ಮನೆ ಬಾಡಿಗೆಗೆ ಇದೆ**
ಗಣೇಶ ಲೇಔಟ್, ಹೊಸ ಬಸ್ ನಿಲ್ದಾಣ ಪಕ್ಕ, ಆದಿತ್ಯಾ ಕಾಂಪ್ಲೆಕ್ಸ್, # 337/33, ಗ್ರೌಂಡ್ ಫ್ಲೋರ್ ಮನೆ, ಮೆಡ್‌ಪ್ಲಸ್ ಔಷಧಿ ಅಂಗಡಿ ಪಕ್ಕ, ದಾವಣಗೆರೆ.
90088 39722

**WANTED**
OM DENTAL CARE
Ram & Co Circle, Near Bank of Baroda ,Davangere.
1) Staff 2) Attender 3) Cosmotologist
(with prior experience)
90669 93738

**FOR RENT**
Commercial place 12x20 for Rent in Vidayanagara first Bus Stop. Contact :
9844174555

**CARS FOR SALE**
- Vitara Brezza ZDI +
- ALTO K10 Vxi
- Innova Crysta [Z]
- Hyundai I10 Grand
Contact : Daivik lynahalli
99456 43223

**ಓಂ ವರಸಿದ್ಧಿ ವಿನಾಯಕ**
SS ದಾವಣಗೆರೆ ಶೈಲಿಯ ಕ್ಲೌಡ್ ಕಿಚನ್ ನಮ್ಮ ಮನೆಯಿಂದಲೇ ಊಟ ತಯಾರಿಸಿ ನೀವು ಇರುವ ಸ್ಥಳಕ್ಕೆ ಕಳಿಸುತ್ತೇವೆ. ಸಂಪರ್ಕಿಸಿ :
+91 91102 74329

**ಮನೆ & ಮಳಿಗೆ ಬಾಡಿಗೆಗೆ ಇದೆ**
2 BHK ಮನೆ ಕಾರ್ಪೊರೇಷನ್ & ಬೋರ್‌ವೆಲ್ ನೀರಿನ ಸೌಕರ್ಯವಿರುವ 1st Floor 2 BHK ಹಾಗೂ 2nd Floor 2 BHK ಮನೆ ಶಂಕರ್ ವಿಹಾರ್ ಲೇಔಟ್‌ನಲ್ಲಿ ಹಾಗೂ 2 ಮಳಿಗೆ ಬಾಡಿಗೆಗೆ ಇವೆ.
80883 99567

**ಬೇಕಾಗಿದ್ದಾರೆ**
ಆಸ್ಪತ್ರೆ ಕ್ಲೀನಿಂಗ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ಸಂಪರ್ಕಿಸಿ. 94488 86026,
94495 80701, 81238 95187

**ಸೈಟು ಮಾರಾಟಕ್ಕಿದೆ**
ಭೂಮಿಕಾ ನಗರದಲ್ಲಿ ದಕ್ಷಿಣಾಭಿಮುಖವಾಗಿರುವ ಮತ್ತು ಉದ್ಯಾನವನ ಎದುರಿಗೆ ಇರುವ 34 x73 ಸೈಟು ಮಾರಾಟಕ್ಕಿದೆ. ಸಂಪರ್ಕಿಸಿ
94485 89727

**Requirement**
Receptionist (only female)
Age: 20-25, Salary: 10,000 - 15,000
HAIRPOINT SALON
MCC `B' block, 7th main 3rd cross, Davanagere.
9148319342, 9738664400
08192220755

**ಶಿಕ್ಷಕ/ಶಿಕ್ಷಕಿಯರು ಬೇಕಾಗಿದ್ದಾರೆ**
ನಿಸರ್ಗ ಆಂಗ್ಲ ಮಾಧ್ಯಮ ಪ್ರಾಥಮಿಕ ಹಾಗೂ ಪ್ರೌಢಶಾಲೆ, ಎಸ್‌ಓಜಿ ಬಡಾವಣೆ, ದಾವಣಗೆರೆ.
1) NTC/RBST/PUC.,-01
2) B.com/BSc., - 01
3) BSc., BEd.,-01
4) BPED/CPED - 01
87927 02690, 99862 26454

**ಸೈಟು, ಮನೆ & ಹೊಲ ಬೇಕಾದಲ್ಲಿ ಸಂಪರ್ಕಿಸಿ**
ಶಿವ-ಪಾರ್ವತಿಯಲ್ಲಿ 30x50 ಪೂರ್ವ 40x52 ಪಶ್ಚಿಮ-ಉತ್ತರ ಕಾರ್ನರ್ 40x60 ಪೂರ್ವ 40 ಅಡಿ ರಸ್ತೆಗೆ ಬನಶಂಕರಿಯಲ್ಲಿ (ಹೊಸ) 40x70 ಪಶ್ಚಿಮ 30x57 ಪೂರ್ವ ಸರಕಾರಿ ನೌಕರರ ಬಡಾವಣೆಯಲ್ಲಿ 30x40 ಪೂರ್ವ 30x51 ಉತ್ತರ, 30x50 ಉತ್ತರ ಹಳೆ ಬಾತಿ & ಹೊಸ ಬಾತಿ ಮಧ್ಯ 28 ಗುಂಟೆ ಜಮೀನು ಮಾರಾಟಕ್ಕೆ, ಸೈಟುಗಳು ಸೇಲ್ ಮಾರಾಟಕ್ಕಿವೆ. ಸಂಪರ್ಕಿಸಿ: (ಪ್ರಾಪರ್ಟಿ ಅಡ್ವೈಸರ್) ಸುರೇಶ್ ಪಿ.ಎಸ್. ಶಾಮನೂರು
ಮೊ: 84314 00907

**ಬೇಕಾಗಿದ್ದಾರೆ**
ಗ್ಯಾಸ್ ಏಜೆನ್ಸಿಯಲ್ಲಿ ಮ್ಯಾನೇಜರ್ ಹುದ್ದೆಗೆ ಬೇಕಾಗಿದ್ದಾರೆ.
ಶಂಕರಲೀಲಾ ಗ್ಯಾಸ್ ಏಜೆನ್ಸಿ
ಎಂಸಿಸಿ ಬಿ ಬ್ಲಾಕ್, ಕುವೆಂಪು ನಗರ, ದಾವಣಗೆರೆ.
90190 94446

**WALK IN INTERVIEW**
Required for Entire Karnataka
Team Leaders
(For Banking Recovery & Collections)
Salary Upto 30,000/- + Incentive
Telecallers
(Computer Knowledge must)
Salary upto 10,000/- _ Incentive
Field Executives
2 wheeler must, Salary upto 15,000/- + Incentive + Insurance Facility
91084 53333, 8310034934

**CHANGE OF NAME**
I Yuvaraj S. Guptha s/o Shantha Narashimha Gupta want give clarification about to correction my mother's name to Srilatha Gupta Instead of Sree Latha Gupta which wrongly Enterered in my school records this Correction was decreed through PRL Civil Judge and JMFC Davangere at Davangere Presided by Honarable Judge smt Gayathri H.D OS/443/2024 1st day of October 2024
Sd/- Yuvaraj S. Guptha

**REQUIREMENT**
Marketing Exicutives (Experianced Candidates) for FMCG Products
THRIVE VENTURES
95906 07846
98866 76676

**ಮಳಿಗೆ ಬಾಡಿಗೆಗೆ**
ದೊಡ್ಡಪೇಟೆ ಮೇನ್ ರೋಡ್‌ಗೆ ಲಗತ್ತಾಗಿರುವ ಅಮರಾವತಿ ಹಾಲಪ್ಪನ ಅಂಗಡಿ ಹತ್ತಿರವಿರುವ 15x15= 225 ಜಾಗವುಳ್ಳ ಮಳಿಗೆ ಬಾಡಿಗೆಗೆ ಇದೆ.
Mob: 93433 73412, 98451 04109

**ERA GROUP OF COMPANIES CALL CENTRE**
ಮಹಿಳೆಯರು ಟೆಲಿಕಾಲರ್ಸ್ ಬೇಕಾಗಿದ್ದಾರೆ. ಕನ್ನಡ ಮತ್ತು ಇಂಗ್ಲಿಷ್ ಓದಲು ಮತ್ತು ಬರೆಯಲು ಬರಬೇಕು.
Qualification: Anything is OK
ಸ್ಥಳ: 1) K.R. Market, Davanagere 2) Charlie Pailwan Road, Davangere.
Contact: 99167 36057, 95350 51589

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**FLAT FOR LEASE**
3 BHK, Sqft :1888
AM Apartment
Nainika Prime Rose
Vidyanagar last city bus stop Davanagere.
89519 38228, 80502 22181

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು, ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಆ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಹೆಸರು ಸ್ಪಷ್ಟೀಕರಣ**
ನಾನು ಶ್ರೀ ಪ್ರಭಾಕರ ಟಿ. ಬಿನ್ ಲೇಟ್ ತಿಪ್ಪೇಶ್ ನಾಯ್ಕ್ # 45, ದಿದ್ದಿಗಿ ತಾಂಡಾ, ಹರಪನಹಳ್ಳಿ ತಾ।। ದಾವಣಗೆರೆ ಜಿಲ್ಲೆ ವಾಸಿಯಾದ ನಾನು ನನ್ನ ಡಿ.ಎಲ್ ನಲ್ಲಿ Prabhu T. S/o Thippesh Nayaka ಎಂದು ತಪ್ಪಾಗಿ ನಮೂದಾಗಿದೆ. ಆಧಾರ್‌ನಲ್ಲಿ ಪ್ರಭಾಕರ ಟಿ. ತಂದೆ ಲೇಟ್ ತಿಪ್ಪೇಶ್ ನಾಯ್ಕ ಎಂದು ಸರಿಯಿದೆ. ಆದ್ದರಿಂದ ದಿನಾಂಕ : 25.10.2024 ರಂದು ನೋಟರಿ ದಾವಣಗೆರೆಯವರ ಮುಂದೆ ನನ್ನ ಹೆಸರು ಪ್ರಭಾಕರ್ ಟಿ. ಸರಿ ಎಂದು ನನ್ನ ಎಲ್ಲಾ ದಾಖಲೆಗಳಲ್ಲೂ ಈ ಹೆಸರಿನಿಂದ ಮುಂದು ವರೆಯುತ್ತೇನೆಂದು ಪ್ರಮಾಣ ಮಾಡಿದ್ದೇನೆ.
ಸಹಿ/- ಪ್ರಭಾಕರ್ ಟಿ.

**HOUSE FOR SALE (KHB COLONY)**
(In Karnataka Housing Board) Kundwada, Dimension 30x40 (East Phase) 2 Bedroom, Borewell+Water Connection (Opposite Park) Contact :
81479 61152

**TO LET**
2 BHK House for Lease Doggalli Compound, Near LIC Office, K.R. Road, Davangere.
94483 76399

**REQUIRED**
Male candidate for Sales & Marketing Executive
Minimum 2 years experience in Sales & Marketing.
AM Builders, Vidyanagar last city Bus stop Davanagere.
8951938228, 8050222047

**ಮಾರಾಟಕ್ಕಿದೆ**
ದಾವಣಗೆರೆಯ ವಿನೋಬ ನಗರದಲ್ಲಿ $12\frac{1}{2}$x34 ಉತ್ತರ ಮುಖದ ಮನೆ ಮಾರಾಟಕ್ಕಿದೆ. ಹರಿಹರದ ಇಂಡಸ್ಟ್ರೀಯಲ್ ಏರಿಯಾದಲ್ಲಿ 30x60 ಅಳತೆಯ ಗೋಡೌನ್ ಮಾರಾಟಕ್ಕಿದೆ.
72043 06065

**ಶಿಕ್ಷಕಿಯರು ಬೇಕಾಗಿದ್ದಾರೆ**
ಹಿಂದಿ, ಕನ್ನಡ, ವಿಜ್ಞಾನ, ಸಮಾಜ ವಿಜ್ಞಾನ, ಪ್ರೈಮರಿ ಹಾಗೂ ಹೈಸ್ಕೂಲ್ ತರಗತಿಗಳಿಗೆ ಬೋಧಿಸಲು ಹಾಗೂ ಆಯಾ ಕೆಲಸಕ್ಕೆ ಬೇಕಾಗಿದ್ದಾರೆ. ಆಕರ್ಷಕ ಸಂಬಳ ಕೊಡಲಾಗುತ್ತದೆ. ತಕ್ಷಣ ಸಂಪರ್ಕಿಸಿ :
95356 10817

**ಯೋಗ ಚಿಕಿತ್ಸಾ & ತರಬೇತಿ ಕೇಂದ್ರ, ಹರಿಹರ.**
ಎಲ್ಲಾ ರೀತಿಯ ನರ ಸೆಳೆತ, ಮೈಕೈ ನೋವಿಗೆ ಯೋಗದ ಚಿಕಿತ್ಸೆ ನೀಡಲಾಗುವುದು.
ಸಂಪರ್ಕಿಸಿ : ರವೀಂದ್ರ ಸಿಂಗ್
94820 31495

**ಬೇಕಾಗಿದ್ದಾರೆ**
ಟೀ ಶಾಪ್‌ನಲ್ಲಿ ಅನುಭವವುಳ್ಳ ಕೆಲಸಗಾರರು ಬೇಕಾಗಿದ್ದಾರೆ. ಕ್ಲೀನಿಂಗ್ & ಟೀ ಮಾಡುವುದಕ್ಕೆ
99800 32310

**ಬೇಕಾಗಿದ್ದಾರೆ**
ನಗರದ ಪ್ರತಿಷ್ಠಿತ ಕಿರಾಣಿ ಅಂಗಡಿಯಲ್ಲಿ ಕೆಲಸ ಮಾಡಲು ಚುರುಕಾದ ಹುಡುಗರು ಬೇಕಾಗಿದ್ದಾರೆ. ಅನುಭವವುಳ್ಳವರಿಗೆ ಆದ್ಯತೆ, ಅನುಭವ ಇಲ್ಲದವರು ಸಂಪರ್ಕಿಸಬಹುದು.
70229 59805, 80733 01110

**ತಕ್ಷಣ ಸೆಕ್ಯೂರಿಟಿ ಗಾರ್ಡ್/ ಸೂಪರ್‌ವೈಸರ್ ಬೇಕಾಗಿದ್ದಾರೆ**
12 hurs duty + ESI, PF
ಊಟ, ವಸತಿ, ತುಮಕೂರು ಶಿರಾದಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ.
ಸಂಬಳ : 9000-14000
91130 53483

**ಉದ್ಯೋಗಾವಕಾಶ**
ಹೆಸರಾಂತ ಕಂಪನಿಯಾದ ಸಂಜೀವಿನಿ ಹೆಲ್ತ್‌ಕೇರ್‌ನಲ್ಲಿ ಹೋಂ ನರ್ಸಿಂಗ್ ಕೆಲಸ ಮಾಡಲು (ವಯೋವೃದ್ಧರನ್ನು ನೋಡಿಕೊಳ್ಳಲು) ಮಹಿಳೆಯರು, ಯುವತಿಯರು ಬೇಕಾಗಿದ್ದಾರೆ. ವಿದ್ಯಾರ್ಹತೆ 7th, 10th PUC, ANM, GNM, Any Degree ಉಚಿತ ಊಟ, ವಸತಿಯೊಂದಿಗೆ 18,000 ರೂ. ನಿಂದ 20,000 ರೂ. ಸಂಬಳವಿದೆ. ಆಸಕ್ತಿ ಇರುವವರು ಸಂಪರ್ಕಿಸಿ.
95355 32369

**TUITIONS**
ಗುರುದತ್ತ ಬಿ. ನಾಡಿಗೇರ್
PUC I / PUC II / Longterm / PCMB
NEET / IIT - JEE / KCET / CLAT - Printed Notes + Study Materials
97398 65711, 94822 44114

**TUITIONS**
ಗುರುದತ್ತ ಬಿ. ನಾಡಿಗೇರ್
Class 6 ಇಂದ Class 10
CBSE / ICSE Boards, NEET / IIT - JEE / Olympiads
Memory Techniques + Hand Writing
97398 65711, 94822 44114



ಹಳೆ ಊರಲ್ಲಿನ ಹಳೆಯ ಕಾಲದ ದೀಪಾವಳಿ ಸ್ವಾರಸ್ಯಗಳು...

## ನಮ್ಮ ಬಾಲ್ಯದಲ್ಲಿನ ದೀಪಾವಳಿಯ ಕೆಲವು ಸ್ವಾರಸ್ಯಗಳು ಹಾಗೂ ನೆನಪುಗಳು

# 'ಅಂಚೆ ಅಣ್ಣಪ್ಪನ ಬತ್ತಾಸು ಬಟವಾಡೆ ?!'

**ಹೆಚ್.ಬಿ.ಮಂಜುನಾಥ್, ಹಿರಿಯ ಪತ್ರಕರ್ತ**

ವರ್ತಕರು ದೀಪಾವಳಿ ಪೂಜೆಗೆ ತಮಗೆ ಬೇಕಾದ ತೆರಿಗೆ ಇಲಾಖೆಯ ಅಧಿಕಾರಿಗಳನ್ನು, ಬ್ಯಾಂಕ್ ಮ್ಯಾನೇಜರ್‌ಗಳನ್ನು, ಆಡಿಟರ್‌ಗಳನ್ನು, ವಕೀಲರುಗಳನ್ನು ಕರೆದು ಆದರಿಸುವುದು ಸ್ವಾಭಾವಿಕ. ನಮ್ಮ ಬಾಲ್ಯದ ದಿನಗಳಲ್ಲಿ ಪೋಸ್ಟ್ ಮ್ಯಾನ್‌ಗಳನ್ನು, ಟೆಲಿಫೋನ್ ಆಪರೇಟರ್‌ಗಳನ್ನು, ಟೆಲಿಗ್ರಾಂ ತಂದು ಕೊಡುವವರನ್ನೂ ಸಹ ವರ್ತಕರು ದೀಪಾವಳಿ ಪೂಜೆಗೆ ಕರೆದು ವಿಶೇಷವಾಗಿ ಆದರಿಸುತ್ತಿದ್ದರು. ಕಾರಣ ಆಗ ಈಗಿನಂತೆ ಯಾವುದೇ ಆಧುನಿಕ ಸಂಪರ್ಕ ಮಾಧ್ಯಮಗಳಿರಲಿಲ್ಲ. ಹುಂಡಿಗಳಾಗಲೀ ಚೆಕ್‌ಗಳಾಗಲೀ ಪೋಸ್ಟ್ ಮುಖಾಂತರವೇ ಕಳಿಸಬೇಕಿತ್ತು ಹಾಗೂ ತರಿಸಬೇಕಾಗಿತ್ತು.

ಟೆಲಿಗ್ರಾಂ ಸಹಾ ವ್ಯಾಪಾರ ವ್ಯವಹಾರಕ್ಕೆ ಅಷ್ಟೇ ಅವಶ್ಯವಾಗಿತ್ತು. ಅದು ಮೊಬೈಲ್ ಇಂಟರ್ನೆಟ್, ಇ-ಮೇಲ್ ಯಾವುದೂ ಇಲ್ಲದ ಕಾಲ. ಟೆಲಿಫೋನ್ ಮುಖಾಂತರವೇ ವ್ಯವಹಾರವೆಲ್ಲಾ ನಡೆಯಬೇಕಿತ್ತು. ಫೋನುಗಳಿಗೆ ನೇರ ಡಯಲಿಂಗ್ ವ್ಯವಸ್ಥೆಯೂ ಇರಲಿಲ್ಲ. ಟ್ರಂಕ್ ಕಾಲ್ ಲೈಟನಿಂಗ್ ಕಾಲ್‌ಗಳು ಇರಲಿ ಲೋಕಲ್ ಕಾಲ್‌ಗೂ ಸಹಾ ಟೆಲಿಫೋನ್ ಎಕ್ಸ್‌ಚೇಂಜ್‌ನ ಆಪರೇಟರ್ ಮೂಲಕ ಸಂಪರ್ಕ ಪಡೆದು ಮಾತನಾಡಬೇಕಿತ್ತು.

ದೇವಸ್ಥಾನದಿಂದ ತಂದ ಹೂವುಗಳನ್ನು ಅಂಗಡಿಯ ಟೆಲಿಫೋನುಗಳ ಮೇಲೆ ಇಟ್ಟು ಭಕ್ತಿಯಿಂದ ಕೈಮುಗಿಯುವುದು ವರ್ತಕರ ಅಂಗಡಿಗಳಲ್ಲಿ ರೂಢಿಯಲ್ಲಿತ್ತು.

ಈ ಪದ್ಧತಿ ಡಾ. ಶಾಮನೂರು ಶಿವಶಂಕರಪ್ಪನವರ ಚೌಕಿಪೇಟೆಯ ಕಲ್ಲಪ್ಪ ಅಂಡ್ ಸನ್ಸ್ ಅಂಗಡಿಯಲ್ಲಿ ಈಗಲೂ ರೂಢಿಯಲ್ಲಿದೆ. ಪೋಸ್ಟ್‌ಮ್ಯಾನ್‌ಗಳಿಗೆ, ಟೆಲಿಗ್ರಾಂ ತಂದು ಕೊಡುವವರಿಗೆ, ಟೆಲಿಫೋನ್ ಆಪರೇಟರ್ ಗಳಿಗೆ ಸಹಾ ದೀಪಾವಳಿ ಪೂಜೆಯಲ್ಲಿ ವರ್ತಕರಿಂದ ವಿಶೇಷ ಮನ್ನಣೆ, ಅಂದರೆ ಎಲೆ ಅಡಿಕೆಯ ಮೇಲೆ ಒಂದು ಮೂಸುಂಬೆ ಹಣ್ಣು ಅಥವಾ ಬಾಳೆಹಣ್ಣು ನಾಲ್ಕಾರು ಚಿಕ್ಕ ಬತ್ತಾಸುಗಳು ಹಾಗೂ ಒಂದೋ ಎರಡೋ ರೂಪಾಯಿ ಇಟ್ಟುಕೊಡುವುದೇ ವಿಶೇಷ.



ಸಕ್ಕರೆ ಪಾಕದಿಂದ ಮಾಡುವ ಬೆಂಡು ಬತ್ತಾಸುಗಳು ಆಗ ದೀಪಾವಳಿ ಪೂಜೆಯಲ್ಲಿ ಹೆಚ್ಚಾಗಿ ಎಲ್ಲರೂ ಬಳಸುತ್ತಿದ್ದರು. ಹಳೆ ಊರಿನ ಬಿ.ಟಿ.ಗಲ್ಲಿ ಚೌಡೇಶ್ವರಿ ದೇವಸ್ಥಾನದ ಪಕ್ಕದ ಶಾಮನೂರು ಸೀನಪ್ಪ (ಶ್ರೀನಿವಾಸ ಶೆಟ್ರು ಲಕ್ಷ್ಮಿನಾರಾಯಣ ಶೆಟ್ಟಿ) ರ ಮನೆಯ ಹಿಂಭಾಗದಲ್ಲಿ ಬೆಂಡು ಬೆತ್ತಾಸು ಮಾಡುವ ಕೈಗಾರಿಕೆಯೂ ಇತ್ತು.

ಈಗಿನಂತೆ ಸ್ವೀಟ್ ಬಾಕ್ಸ್‌ಗಳು, ಡ್ರೈ ಫ್ರೂಟ್ ಪ್ಯಾಕ್‌ಗಳು ಉಡುಗೊರೆಗಳು ಆಗ ಅಷ್ಟಾಗಿ ರೂಢಿಯಲ್ಲಿ ಇರಲಿಲ್ಲ. ಹಳೇ ಊರಿನ ಪ್ರಮುಖ ಬೀದಿಗಳಾದ ತಂಬಾಕುಪೇಟೆ, ಚೌಕಿಪೇಟೆ, ಚಾಮರಾಜಪೇಟೆ ಭಾಗದ ಪೋಸ್ಟ್ ಮ್ಯಾನ್ ಅಣ್ಣಪ್ಪ ಎಂದರೆ ಎಲ್ಲರಿಗೂ ಅಚ್ಚು ಮೆಚ್ಚು ನಗು ಮೊಗದ ಅಣ್ಣಪ್ಪ ಜನಪ್ರಿಯ.

ಒಮ್ಮೆ ದೀಪಾವಳಿಯ ಮರುದಿನ ಅಣ್ಣಪ್ಪ ಅಂಚೆ ಬಟವಾಡೆಗೆ (ಹಂಚುವುದು) ಬಂದಾಗ ಬೀದಿಯ ಮಕ್ಕಳೆಲ್ಲಾ ಆತನ ಸುತ್ತ ಸೇರಿದ್ದರು?!. ಮಕ್ಕಳಿಗೆಲ್ಲಾ ಅಣ್ಣಪ್ಪ ತನ್ನ ಹೆಗಲ ಚೀಲದಿಂದ ತೆಗೆದು ಕೊಡುತ್ತಿದ್ದ. ನಮ್ಮ ಪ್ರಾಥಮಿಕ ಶಾಲೆಯ ಪದ್ಯವೊಂದು ನನಗಾಗ ನೆನಪಾಯಿತು.

**'ಅಂಚೆಯ ಅಣ್ಣ, ಬಂದಿಹ ಚಿನ್ನ,**
**ಅಂಚೆಯ ಹಂಚಲು ಮನೆ ಮನೆಗೆ,**
**ಸಾವಿರ ಸುದ್ದಿಯ ಬೀರುತ ಬರುವನು**
**ತುಂಬಿದ ಚೀಲವು ಹೆಗಲೊಳಗೆ,**
**ಬಾಗಿಲು ತಟ್ಟಿ ಚಿಲಕವ ಕುಟ್ಟಿ**
**ಸದ್ದನು ಮಾಡುತ ಕರೆಯುವನು,**
**ಕಾಗದ ಬಂದಿದೆ ಬೇಗನೆ ಬನ್ನಿರಿ,**
**ಕಾಗದಕೊಳ್ಳಿರಿ ಎನ್ನುವನು,**
**ಕಾಗದ ವಿದೆಯೇ ಕಾಗದ ಎಂದು**
**ಮಕ್ಕಳು ಕೇಳಲು ಬಾಯ್ ತುಂಬಾ,**
**ಕೊರಳಿನ ಚೀಲದಿ ಬೆರಳುಗಳಾಡಿಸಿ**
**ಕಾಗದವಿದೆಯೇ ನೋಡುವನು"....**

ಮುಂತಾಗಿ ಪದ್ಯದ ಸಾಲುಗಳಿದ್ದವು.

ಇದೇನು ಇವತ್ತು ಮಕ್ಕಳಿಗೆ ಅಣ್ಣಪ್ಪ ಇಷ್ಟೊಂದು ಪತ್ರಗಳನ್ನು ಕೊಡುತ್ತಿದ್ದಾನೆ ಎಂದು ನೋಡಲು ಹೋದರೆ, ಅಣ್ಣಪ್ಪ ತನ್ನ ಚೀಲದಿಂದ ಮಕ್ಕಳಿಗೆ ಕೊಡುತ್ತಿದ್ದುದು ಪತ್ರಗಳನ್ನಲ್ಲ, ಹಿಂದಿನ ದಿನ ಅಂಗಡಿ ಪೂಜೆಯಲ್ಲಿ ತನಗೆ ಬಂದ ಬತ್ತಾಸುಗಳನ್ನೆಲ್ಲಾ ಮಕ್ಕಳಿಗೆ ತಿನ್ನಲಿಕ್ಕಾಗಿ ಹಂಚುತ್ತಿದ್ದ. ಅಣ್ಣಪ್ಪನಿಂದ ಟಪಾಲು ಬಟವಾಡೆಯಲ್ಲ, ಬತ್ತಾಸು ಬಟವಾಡೆಯಾಗಿತ್ತು.

# ಕಲೆಯ ಏಳಿಗೆಗೆ ಎಲ್ಲರೂ ದುಡಿಯಬೇಕಿದೆ

## 2024ರ ಚಿತ್ರೋತ್ಸವ ಸಮಾರೋಪ ಸಮಾರಂಭದಲ್ಲಿ ಹರೀಶ್ ಮಾಳಪ್ಪನವರ್

ದಾವಣಗೆರೆ, ಅ.25- ರಾಜ್ಯದಲ್ಲಿರುವ ವಿವಿಧ ಕಲೆಗಳ ಏಳಿಗೆಗಾಗಿ ಎಲ್ಲರು ಶ್ರಮವಹಿಸಿ ದುಡಿಯಬೇಕಿದೆ ಎಂದು ಶಿಲ್ಪಕಲಾ ಅಕಾಡೆಮಿ ಸದಸ್ಯ ಹರೀಶ್ ಮಾಳಪ್ಪನವರ್ ಹೇಳಿದರು.

ನಗರದ ದೃಶ್ಯಕಲಾ ಮಹಾವಿದ್ಯಾಲಯದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಚಿತ್ರೋತ್ಸವ 2024ರ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಅವರು ಮಾತನಾಡಿದರು.

ಕಾಲೇಜಿನ ವಿದ್ಯಾರ್ಥಿಗಳು ಎಲ್ಲಾ ಬಗೆಯ ಕಲಾ ಕ್ಷೇತ್ರದಲ್ಲಿ ಪರಿಣಿತಿ ಹೊಂದಬೇಕು. ಈ ನಿಟ್ಟಿನಲ್ಲಿ ಕಲಿಕಾ ದಿನಗಳಲ್ಲೇ ಕಲಾ ವಿದ್ಯಾರ್ಥಿಗಳು ತಮ್ಮ ಪ್ರತಿಭೆ ಅನಾವರಣ ಗೊಳಿಸಿಕೊಳ್ಳಬೇಕು ಎಂದರು.

ಇಂದಿನ ಕಲಾ ವಿದ್ಯಾರ್ಥಿಗಳಲ್ಲಿ ಪ್ರಾಯೋಗಿಕ ಅಭ್ಯಾಸ ಕಡಿಮೆ ಆಗುತ್ತಿದೆ. ಆದ್ದರಿಂದ ಕಲಾ ವಿದ್ಯಾರ್ಥಿಗಳು ನಿರಂತರ ಕಲಿಕೆಗೆ ಹೆಚ್ಚು ಒತ್ತು ನೀಡಬೇಕಿದೆ ಎಂದು ಸಲಹೆ ನೀಡಿದರು.

ವಿದ್ಯಾರ್ಥಿಗಳು ತಮ್ಮ ಆಲೋಚನೆಗಳಿಗೆ ಬಣ್ಣ ಹಚ್ಚುವ ಮೂಲಕ ಗುರುಗಳೊಟ್ಟಿಗೆ ಉತ್ತಮ ಒಡನಾಟ ಇಟ್ಟುಕೊಳ್ಳುವ ಜತೆಗೆ ಅವರ ಮಾರ್ಗದರ್ಶನದಲ್ಲಿ ಉತ್ತಮ ಕಲಾವಿದರಾಗಿ ಸಮಾಜದಲ್ಲಿ ಹೊರ ಹೊಮ್ಮಬೇಕು ಎಂದರು.

ಕಲಿಕಾ ಹಂತದಲ್ಲಿರುವ ಕಲಾವಿದರು ಶಿಲ್ಪ ಕಲಾ ಅಕಾಡೆಮಿಯೊಂದಿಗೆ ಸಂಪರ್ಕ ಬೆಳೆಸಿ, ಅಲ್ಲಿನ ಸೌಲಭ್ಯಗಳನ್ನು ಸದುಪಯೋಗ ಪಡಿಸಿಕೊಳ್ಳಬೇಕು ಎಂದ ಅವರು, ವಿದ್ಯಾರ್ಥಿ ಹಂತದಲ್ಲಿನ ದಿನಗಳು ಹಾಗೂ ಗುರುಗಳನ್ನು ಸ್ಮರಿಸಿದರು.



**ವಿದ್ಯಾರ್ಥಿಗಳು ಶೈಕ್ಷಣಿಕ ಜೀವನದಲ್ಲಿ ಕಾಲಹರಣ ಮಾಡಬಾರದು. ಇಟ್ಟುಕೊಂಡ ಗುರಿ ಸಾಧಿಸುವ ಕಡೆಗೆ ಶ್ರಮವಹಿಸಬೇಕು ಎಂದು ಶಿಲ್ಪಕಲಾ ಅಕಾಡೆಮಿ ಸದಸ್ಯ ಹರೀಶ ಮಾಳಪ್ಪನವರ್ ಹೇಳಿದರು.**

ಶಿಲ್ಪಕಲಾ ಅಕಾಡೆಮಿ ಸದಸ್ಯ ವೈ. ಕುಮಾರ್ ಮಾತನಾಡಿ, ಕಲಾವಿದರನ್ನು ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಬೆಳೆಯುವ ನಿಟ್ಟಿನಲ್ಲಿ ಈ ದೃಶ್ಯ ಕಲಾ ಮಹಾವಿದ್ಯಾಲಯ ಮಾಡುತ್ತಿದೆ ಎಂದು ಶ್ಲಾಘಿಸಿದರು. ನೂತನ ಕಲಾವಿದರನ್ನು ಸೃಷ್ಟಿಸುವ ಈ ಕಲಾ ಶಾಲೆ, 'ನಿಂತ ನೀರಾಗದೆ ಹರಿಯುವ ನೀರಿನಂತೆ ಅಂತರ್ ರಾಷ್ಟ್ರೀಯ ಮಟ್ಟದಲ್ಲಿ ಬೆಳೆಯಬೇಕು ಎಂದು ಆಶಯ ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ಚಿತ್ರೋತ್ಸವದ ನಿಮಿತ್ತ ಹಮ್ಮಿಕೊಂಡಿದ್ದ ವಿವಿಧ ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸಿ ಜಯಿಸಿದ ವಿದ್ಯಾರ್ಥಿಗಳಿಗೆ ಅತಿಥಿಗಳಿಂದ ಪ್ರಮಾಣ ಪತ್ರ ನೀಡಲಾಯಿತು.

ಈ ವೇಳೆ ಕಾಲೇಜಿನ ಪ್ರಾಚಾರ್ಯ ಡಾ. ಜೈರಾಜ್ ಎಂ. ಚಿಕ್ಕಪಾಟೀಲ್, ಲಲಿತ ಕಲಾ ಅಕಾಡೆಮಿ ಸದಸ್ಯೆ ನೂರ್ ಫಾತಿಮಾ, ಸಹಾಯಕ ಪ್ರಾಧ್ಯಾಪಕ ಡಾ. ಸತೀಶ್ ಕುಮಾರ್ ಪಿ. ವಲ್ಲೇಪುರೆ, ಬೋಧನಾ ಸಹಾಯಕ ದತ್ತಾತ್ರೇಯ ಎನ್. ಭಟ್ ಮತ್ತು ಕಾಲೇಜಿನ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳಿದ್ದರು.

## ಕ್ರಮಕ್ಕೆ ಒತ್ತಾಯಿಸಿ ತಂಜೀಂ ಪ್ರತಿಭಟನೆ

ದಾವಣಗೆರೆ ಅ 25- ಪ್ರವಾದಿ ಮಹಮ್ಮದ್ ಪೈಗಂಬರ್ ಅವರ ಬಗ್ಗೆ ಅವಹೇಳನವಾಗಿ ಪ್ರಚೋದನಾಕಾರಿ ಭಾಷಣ ಮಾಡಿರುವ ಯತಿ ನರಸಿಂಹನಂದಾ ಸ್ವರಸ್ವತಿ ಸ್ವಾಮೀಜಿ ವಿರುದ್ಧ ಕಾನೂನು ಕ್ರಮ ಜರುಗಿಸಲು ಒತ್ತಾಯಿಸಿ ತಂಜೀಮುಲ್ ಮುಸ್ಲಿಂ ಮೀನ್ ಫಂಡ್ ಅಸೋಸಿಯೇಷನ್, ತಂಜೀಮ್ ಉಲೇಮಾ-ಎ-ಅಹಲೇ ಸುನ್ನತ್ ಸೇರಿದಂತೆ ವಿವಿಧ ಸಂಘಗಳ ಸಂಯುಕ್ತಾಶ್ರಯದಲ್ಲಿ ಇಂದು ಮಿಲಾದ್ ಮೈದಾನದಲ್ಲಿ ನಡೆದ ಪ್ರತಿ ಭಟನಾ ಸಮಾವೇಶದಲ್ಲಿ ರಾಷ್ಟ್ರ ಪತಿಗೆ ಮನವಿ ಸಲ್ಲಿಸಲಾಯಿತು.

ಅಪರ ಜಿಲ್ಲಾಧಿಕಾರಿ ಲೋಕೇಶ್ ಅವರಿಗೆ ಮನವಿ ಪತ್ರ ಅರ್ಪಿಸಲಾಯಿತು. ತಂಜೀಮ್ ಅಧ್ಯಕ್ಷ ದಾದಾಪೀರ್ (ದಾದುಸೇಠ್ ) ಮೌಲಾನಾ ಮಹ ಮ್ಮದ್ ಹನೀಫ್ ರಜಾ, ಮಿಲಾದ್ ಸಮಿತಿ ಅಧ್ಯಕ್ಷ ಎ.ಬಿ. ಹಬೀಬ್ ಸಾಬ್, ಪದಾಧಿಕಾರಿಗಳಾದ ದಾದಾ ಪೀರ್, ಮಟನ್ ಮಹಮ್ಮದ್ ಅಲಿ, ಇಮ್ರಾನ್ ರಜಾ, ಶಫೀವುಲ್ಲಾ, ಸಾಬೀರ್ ಅಲಿ, ಇಮ್ತಿಯಾಜ್ ಸೇರಿದಂತೆ ಇನ್ನು ಅನೇಕ ಉಲೇಮಾಗಳು ಮುಸ್ಲಿಂ ಮುಖಂಡರು ಉಪಸ್ಥಿತರಿದ್ದರು.

# ಒಳ ಮೀಸಲಾತಿ : ಬಂಜಾರ ಸಮುದಾಯದ ನಡೆಗೆ ಆಕ್ಷೇಪ

ದಾವಣಗೆರೆ, ಅ. 25- ಒಳ ಮೀಸಲಾತಿ ಜಾರಿಗೆ ಸಂಬಂಧಿಸಿದಂತೆ ಬಂಜಾರ ಸಮುದಾಯದ ನಡೆ ಸರಿಯಾದುದಲ್ಲ ಎಂದು ದಲಿತ ಸಂಘಟನೆ ಅಧ್ಯಕ್ಷ ಹೆಚ್. ಮಲ್ಲೇಶ್ ಆಕ್ಷೇಪ ವ್ಯಕ್ತಪಡಿಸಿದರು.

ಇಂದಿಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ 30 ವರ್ಷಗಳಿಂದ ಅಸ್ಪೃಶ್ಯ ಮಾದಿಗ ಸಮುದಾ ಯವು ವೈಜ್ಞಾನಿಕ ರೀತಿಯಲ್ಲಿ ಒಳ ಮೀಸಲಾತಿ ಸೌಲಭ್ಯ ಕ್ಕಾಗಿ ಹೋರಾಟ ಮಾಡುತ್ತಾ ಬಂದಿರುವುದು ತಿಳಿದ ವಿಷಯವಾಗಿದೆ. ಸಂವೇದನಾಶೀಲ ಗುಣವುಳ್ಳ ಮತ್ತು ಅಹಿಂದ ಸಮಾಜವಾದದ ಹಿನ್ನೆಲೆಯುಳ್ಳ ತಾವು ಒಳ ಮೀಸಲಾತಿ ಬಗ್ಗೆ ಸಕಾರಾತ್ಮಕ ನಿಲುವ ತಾಳಿರುವುದು ಸುಸ್ಪಷ್ಟ. ಒಳ ಮೀಸಲಾತಿ ಹೋರಾಟದ ಪರಿಣಾಮವಾಗಿ ರಾಜ್ಯ ಸರ್ಕಾರವು ಸದಾಶಿವ ಆಯೋಗವನ್ನು ರಚಿಸಿ ಅಭಿಪ್ರಾಯ ವನ್ನು ಪಡೆದು ಇದರ ಅನುಷ್ಠಾನಕ್ಕಾಗಿ ಅನುಮತಿ ಕೋರಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿರುತ್ತದೆ ಎಂದು ಹೇಳಿದರು.

ಕಾನೂನಾತ್ಮಕ ಹೋರಾಟ ನಡೆಸುತ್ತಿದ್ದ ದಲಿತ ಸಮುದಾಯದ ಹೋರಾಟದ ಫಲವಾಗಿ 1-08-2024 ರಂದು ಸರ್ವೋಚ್ಚ ನ್ಯಾಯಾಲಯದ ಪೂರ್ಣ ಪೀಠವು ಒಳ ಮೀಸಲಾತಿಯ ಉಪ ವರ್ಗೀಕರಣದ ಅಗತ್ಯ ಮತ್ತು ಒಳ ಮೀಸಲಾತಿಯ ವರ್ಗೀಕರಣ ರಾಜ್ಯ ಸರ್ಕಾರದ ವ್ಯಾಪ್ತಿಗೆ ಬರುತ್ತದೆ ಎಂದು ಐತಿಹಾಸಿಕ ತೀರ್ಪು ನೀಡಿದ್ದು, ಈ ತೀರ್ಪಿನ ಅನ್ವಯ ಅನುಷ್ಠಾನ ಮಾಡುವುದು ರಾಜ್ಯ ಸರ್ಕಾರದ ಜವಾಬ್ದಾರಿಯಾಗಿರುತ್ತದೆ ಎಂದರು.

ವಿನಾಕಾರಣ ಬಂಜಾರ ಸಮುದಾಯವು ಸರ್ಕಾರದ ದಿಕ್ಕು ತಪ್ಪಿಸುವ ರೀತಿಯಲ್ಲಿ ಹೇಳಿಕೆಗಳನ್ನು ಕೊಡದೇ ಸಂವಿಧಾನ ಪರಿಚ್ಛೇದ 15(4) 16(4) ರ ಅನ್ವಯ ಸಮಾನ ಸೌಲಭ್ಯ ಹಂಚಿಕೊಳ್ಳುವ ನಿಟ್ಟಿನಲ್ಲಿ ನಾವೆಲ್ಲರೂ ಇರಬೇಕಾಗುತ್ತದೆ ಎಂದು ಹೇಳಿದರು.

ನಿಮ್ಮ ಬಳಿ ಅಂಕಿ-ಅಂಶಗಳಿದ್ದರೆ ಸರ್ಕಾರಕ್ಕೆ ನೀಡಿ, ಈಗಾಗಲೇ 2011 ರ ಜನಸಂಖ್ಯೆ ಅನುಗುಣವಾಗಿ ಶೇಕಡಾವಾರು ಮೀಸಲನ್ನು ನಿಗದಿಪಡಿಸಿದ್ದು, ಆ ಎಲ್ಲಾ ದತ್ತಾಂಶಗಳು ಸರ್ಕಾರದ ಬಳಿ ಇವೆ. ಅದರ ಆಧಾರದ ಮೇಲೆ ಸುಪ್ರೀಂಕೋರ್ಟ್ ತೀರ್ಪಿನ ಅನ್ವಯ ಒಳಮೀಸಲಾತಿ ಜಾರಿಗೆ ನಾವೆಲ್ಲರೂ ಬದ್ಧತೆಯಿಂದ ಇರಬೇಕು. ಅಸ್ಪೃಶ್ಯತೆ ನೋವು ನಿಮಗೆ ಗೊತ್ತಿಲ್ಲ ಎಂದರು.

ಸಹೋದರತ್ವದ ಸಾಮರಸ್ಯದೊಂದಿಗೆ 101 ಜಾತಿಗಳಿಗೂ ಒಳ ಮೀಸಲಾತಿ ಸೌಲಭ್ಯ ಕಲ್ಪಿಸುವುದು ಸರ್ಕಾರದ ಕರ್ತವ್ಯವಾಗಿದೆ. ಸರ್ಕಾರ ಕೂಡಲೇ ಒಳ ಮೀಸಲಾತಿ ಜಾರಿಗೊಳಿಸಬೇಕೆಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ದುಗ್ಗಪ್ಪ, ರವಿಕುಮಾರ್, ಮುತ್ತಣ್ಣ, ನಾಗರಾಜ್, ಕಡೇಮನಿ ರಾಜಕುಮಾರ್, ತಿಪ್ಪೇಸ್ವಾಮಿ, ಜಯಪ್ಪ ಉಪಸ್ಥಿತರಿದ್ದರು.

## ಎಲ್ಲ ನಗ್ನ ಚಿತ್ರಗಳೂ ಅಶ್ಲೀಲವಲ್ಲ : ಹೈಕೋರ್ಟ್

ಮುಂಬೈ, ಅ. 25 - ಪ್ರತಿಯೊಂದು ನಗ್ನ ಚಿತ್ರವು ಅಶ್ಲೀಲತೆ ಅಲ್ಲ ಎಂದು ಹೇಳಿರುವ ಬಾಂಬೆ ಹೈಕೋರ್ಟ್, ಕಳೆದ ವರ್ಷ ವಶಪಡಿಸಿ ಕೊಳ್ಳಲಾಗಿದ್ದ ಹೆಸರಾಂತ ಕಲಾವಿದರಾದ ಎಫ್.ಎನ್. ಸೌಜಾ ಹಾಗೂ ಅಕ್ಬರ್ ಪದಮಸೀ ಅವರ ಕಲಾಕೃತಿಗಳನ್ನು ಬಿಡುಗಡೆ ಮಾಡುವಂತೆ ಸುಂಕಾಧಿಕಾರಿಗಳಿಗೆ ತಿಳಿಸಿದೆ. ನ್ಯಾಯಮೂರ್ತಿಗಳಾದ ಎಂ.ಎಸ್. ಸೋನಕ್ ಹಾಗೂ ಜಿತೇಂದ್ರ ಜೈನ್ ಅವರನ್ನು ಒಳಗೊಂಡ ಪೀಠ ಈ ನಿಲುವು ತಳೆದಿದೆ. ಈ ಕಲಾಕೃತಿಗಳು ವಿಕೃತವಾಗಿವೆ ಎಂದು ಮುಂಬೈ ಸುಂಕ ವಿಭಾಗದ ಸಹಾಯಕ ಆಯುಕ್ತರು ಹೊರಡಿಸಿದ್ದ ಆದೇಶವನ್ನು ಹೈಕೋರ್ಟ್ ತಳ್ಳಿ ಹಾಕಿದೆ.

## ಹರಿಹರ ಊರಮ್ಮ ದೇವಿ ಹಬ್ಬ ಆಚರಣೆಗೆ ತೀರ್ಮಾನ

**(1ನೇ ಪುಟದಿಂದ)** ಪುನಃ ಸಭೆಯನ್ನು ಆಯೋಜಿಸಿ ಉತ್ಸವ ಸಮಿತಿಗೆ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗುವುದು. ಈ ಬಾರಿ ಮಾಜೇನ ಹಳ್ಳಿ ಭಾಗಕ್ಕೆ ಅಧ್ಯಕ್ಷ, ಕಾರ್ಯದರ್ಶಿ ಮತ್ತು ಸಹ ಕಾರ್ಯದರ್ಶಿ ಸ್ಥಾನ, ಕಸಬಾ ಭಾಗಕ್ಕೆ ಖಜಾಂಚಿ ಸ್ಥಾನ ನೀಡಬೇಕು ಎಂಬ ಒಮ್ಮತದ ತೀರ್ಮಾನವನ್ನು ಸಭೆಯಲ್ಲಿ ಮಾಡಲಾಯಿತು.

ಈ ಸಂದರ್ಭದಲ್ಲಿ ಕಸಬಾ ಬಣಕಾರ್ ಸಿದ್ದಪ್ಪ, ಮಾಜೇನಹಳ್ಳಿ ಬಣಕಾರ್ ಆಂಜನೇಯ, ಶಾನಭೋಗರ ಗಿರೀಶ್, ಚಿದಂಬರ ಜೋಯಿಸರು, ಗೌಡ್ರು ಪಟ್ಟಪ್ಪ, ಕೆ. ಜಡಿಯಪ್ಪ. ವೈ.ಎನ್. ಮಹೇಶ್, ಟಿ.ಜೆ. ಮುರುಗೇಶಪ್ಪ, ಕೆ. ಅಣ್ಣಪ್ಪ,, ಶೇರಾಪುರ ರಾಜಪ್ಪ, ಬೆಣ್ಣೆ ರೇವಣಸಿದ್ದಪ್ಪ, ಪಾಲಾಕ್ಷಪ್ಪ, ಕೆ.ಬಿ. ರಾಜಶೇಖರ್, ಸಿ.ಎನ್. ಹುಲುಗೇಶ್, ಜಿ.ನಂಜಪ್ಪ, ಎಸ್.ಎಂ. ವಸಂತ್, ಹೆಚ್. ನಿಜಗುಣ, ಹಂಚಿನ ನಾಗರಾಜಪ್ಪ, ವೈ.ಎನ್. ಕೃಷ್ಣ ಮೂರ್ತಿ, ಹೆಚ್.ಕೆ. ಕೊಟ್ರಪ್ಪ, ಶ್ರೀನಿವಾಸ್ ಚಂದಪೂರ್, ಮುದೇಗೌಡ್ರು ಪ್ರಭು, ಬಸವನಗೌಡ, ಗಿರೀಶ್ ಗೌಡ, ರೇವಣಪ್ಪ, ಚೂರಿ ಜಗದೀಶ್, ಸುರೇಶ್ ಚಂದಾಪೂರ್, ಶ್ಯಾವಿಗೆ ಅಣ್ಣಪ್ಪ, ಕರಿಬಸಪ್ಪ ಕಂಚಿಕೇರಿ, ರಾಕೇಶ್, ನಲ್ಲಿ ಬಸವರಾಜ್, ಶೇಖರಗೌಡ, ಚಿದಾನಂದ ಕಂಚಿಕೇರಿ, ಹೆಚ್. ಸುಧಾಕರ, ಪಕ್ಕೀರಪ್ಪ, ಬೆಣ್ಣೆ ಸಿದ್ದೇಶ್, ಪರಮೇಶ್ವರಪ್ಪ, ಸಿದ್ದಪ್ಪ, ರಾಘು ಚೌಗಲೆ, ಚೇತನ್ ಹೆಚ್.ಶಿವಪ್ಪ, ಎಂ.ಎಸ್. ಆನಂದ್, ಸಂತೋಷ ದೊಡ್ಡಮನೆ, ಕೊಪ್ಪಳ ಮಂಜುನಾಥ್, ಕೆಂಚಪ್ಪ, ದೇವೇಂದ್ರಪ್ಪ, ಕೃಷ್ಣ, ಅರ್ಚಕರಾದ ಈರಣ್ಣ ಪೂಜಾರ್, ಜನಾರ್ಧನ್ ಪೂಜಾರ್ ಹಾಗೂ ಇತರರು ಹಾಜರಿದ್ದರು.

## ಶೇಂಗಾ ಖರೀದಿಗೆ ಕೇಂದ್ರ ಸಮ್ಮತಿ

**(1ನೇ ಪುಟದಿಂದ)** ಏಜೆನ್ಸಿಗಳೊಂದಿಗೆ ಸಮಾಲೋಚನೆ ನಡೆಸಿ ಖರೀದಿ ಕೇಂದ್ರಗಳನ್ನು ತೆರೆದು ನೋಂದಣಿ ಪ್ರಕ್ರಿಯೆ ಆರಂಭಿಸಲು ಜಿಲ್ಲಾ ಕಾರ್ಯಪಡೆ ಸಮಿತಿಗಳಿಗೆ ನಿರ್ದೇಶನ ನೀಡಲಾಗಿದೆ ಎಂದು ಹೇಳಿದರು.

ಬೆಂಬಲ ಬೆಲೆ ಯೋಜನೆಯಡಿ ಶೇಂಗಾ ಖರೀದಿ ಪ್ರಕ್ರಿಯೆಯಲ್ಲಿ ರೈತರಿಗೆ ಯಾವುದೇ ಸಮಸ್ಯೆಯಾಗದಂತೆ ಜಿಲ್ಲಾಧಿಕಾರಿಗಳು ಮುನ್ನೆಚ್ಚರಿಕೆ ವಹಿಸಬೇಕು, ನೋಂದಣಿ ಮತ್ತು ಖರೀದಿ ಪ್ರಕ್ರಿಯೆ ಆರಂಭಿಸುವ ಮುನ್ನ ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು, ಯಾವುದೇ ಖರೀದಿ ಕೇಂದ್ರದಿಂದ ದೂರುಗಳು ಬರದಂತೆ ನಿಗಾವಹಿಸಬೇಕು ಎಂದು ಸಚಿವರು ಎಚ್ಚರಿಸಿದ್ದಾರೆ.

## ಗ್ರಾಮ ಆಡಳಿತಾಧಿಕಾರಿಗಳ ಹುದ್ದೆಗೆ ನಗರದಲ್ಲಿ ಇಂದು ಸ್ಪರ್ಧಾತ್ಮಕ ಪರೀಕ್ಷೆ

ಗ್ರಾಮ ಆಡಳಿತ ಅಧಿಕಾರಿಗಳ ಹುದ್ದೆಯ ನೇಮಕಾತಿಗೆ ಇಂದು ಮತ್ತು ನಾಳೆ ಸ್ಪರ್ಧಾತ್ಮಕ ಪರೀಕ್ಷೆ ನಡೆಯಲಿದ್ದು, ವ್ಯವಸ್ಥಿತವಾಗಿ ಪರೀಕ್ಷೆ ನಡೆಸಲು ಜಿಲ್ಲಾಧಿಕಾರಿ ಜಿ.ಎಂ.ಗಂಗಾಧರಸ್ವಾಮಿ ಸೂಚಿಸಿದ್ದಾರೆ.

ಜಿಲ್ಲೆಯಲ್ಲಿ ಇಂದು 5 ಕೇಂದ್ರಗಳಲ್ಲಿ ಮತ್ತು ನಾಳೆ ಭಾನುವಾರ 38 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ. ಇಂದು 5 ಪರೀಕ್ಷಾ ಕೇಂದ್ರಗಳಲ್ಲಿ 2090 ಅಭ್ಯರ್ಥಿಗಳು, ನಾಳೆ 17920 ಅಭ್ಯರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ. ಇಂದು ಮಧ್ಯಾಹ್ನ 2.30 ರಿಂದ ಸಂಜೆ 4.30 ರವರೆಗೆ ಕಡ್ಡಾಯ ಕನ್ನಡ ಭಾಷೆ ನಾಳೆ ಬೆಳಿಗ್ಗೆ 10-30ರಿಂದ12.30ರವರೆಗೆ ಪತ್ರಿಕೆ-1 ಹಾಗೂ ಮಧ್ಯಾಹ್ನ 2-30ರಿಂದ ಸಂಜೆ 4.30 ರವರೆಗೆ ಪತ್ರಿಕೆ-2ರ ಪರೀಕ್ಷೆಗಳು ನಡೆಯಲಿವೆ.

## ನಾಮದೇವ ಸಿಂಪಿ ಸಮಾಜದ ಅಧ್ಯಕ್ಷರಾಗಿ ಪುಂಡಲೀಕ ಪುಟಾಣಕರ್ ಆಯ್ಕೆ

ದಾವಣಗೆರೆ, ಅ.25- ನಾಮದೇವ ಸಿಂಪಿ ಸಮಾಜದಲ್ಲಿ 2024-27ನೇ ಸಾಲಿಗೆ ನೂತನವಾಗಿ ತರುಣ ಮಂಡಳಿಯನ್ನು ರಚಿಸಲಾಗಿದ್ದು, ಅಧ್ಯಕ್ಷರಾಗಿ ಪುಂಡಲೀಕ ಪುಟಾಣಕರ್ ಆಯ್ಕೆಯಾಗಿದ್ದಾರೆ.

ಉಪಾಧ್ಯಕ್ಷರಾಗಿ ನಾಗರಾಜ್ ಪಿಸೆ, ಮಂಜುನಾಥ್ ರಾಕುಂಡೆ, ಗಣೇಶ್ ಕಂಚಿಕೆರೆ, ಪ್ರಧಾನ ಕಾರ್ಯದರ್ಶಿಯಾಗಿ ಮಹೇಂದ್ರಕರ್ ಪಿ. ಹನುಮಂತರಾವ್, ಸಹಕಾರ್ಯದರ್ಶಿಯಾಗಿ ಅಶೋಕ್ ಮಹೇಂದ್ರಕರ್, ಖಜಾಂಚಿಯಾಗಿ ಸಚಿನ್ ಹೊವಳೆ, ಸಂಚಾಲಕರಾಗಿ ಚಂದನ್ ರಾಕುಂಡೆ, ಸಂಘಟನಾ ಕಾರ್ಯದರ್ಶಿಯಾಗಿ ಪ್ರಶಾಂತ್ ಹೂರಣ್‌ಕರ್, ಮಾಧ್ಯಮ ಪ್ರಮುಖರಾಗಿ ಮಣಿಕಂಠ ಕೆ.ಆರ್. ಹೊವಳೆ ಹಾಗೂ ಉಳಿದಂತೆ ಸುಮಾರು 30 ಜನ ಯುವಕರು ಸದಸ್ಯರಾಗಿ ಆಯ್ಕೆಯಾಗಿದ್ದಾರೆ.



## ಹಳೆಪೇಟೆ ಶಾಲೆಯ ಆರ್. ಬೃಂದಾ ರಾಜ್ಯಕ್ಕೆ ಪ್ರಥಮ






ದಾವಣಗೆರೆ, ಅ.25- ಸ್ಥಳೀಯ ಹಳೆಪೇಟೆಯ ಶತಮಾನದ ಶಾಲೆಯಾದ ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ 7ನೇ ತರಗತಿ ವಿದ್ಯಾರ್ಥಿನಿ ಆರ್. ಬೃಂದಾ ರಾಜ್ಯ ಮಟ್ಟದ ಯೋಗಾಸನ ಸ್ಪರ್ಧೆಯಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದಿದ್ದಾರೆ.

ವಿಭಾಗೀಯ ಮಟ್ಟದ ಯೋಗಾಸನ ಸ್ಪರ್ಧೆಯಲ್ಲಿ ಈ ಶಾಲೆಯ 7ನೇ ತರಗತಿ ವಿದ್ಯಾರ್ಥಿಗಳಾದ ಐಶ್ವರ್ಯ, ವಿ., ಬೃಂದಾ ಆರ್., ಧನುಷ್ ಮತ್ತು 8ನೇ ತರಗತಿಯ ಎ.ಶಿವಾಜಿರಾವ್ ಸ್ಪರ್ಧಿಸಿದ್ದರು.

ವಿದ್ಯಾರ್ಥಿಗಳಿಗೆ ಶಾಲೆಯ ದೈಹಿಕ ಶಿಕ್ಷಕರಾದ ಸುಜಾತ ಅವರು ಪ್ರತಿನಿತ್ಯ ತರಬೇತಿ ನೀಡುವ ಮೂಲಕ ಪ್ರೋತ್ಸಾಹ ನೀಡುತ್ತಿದ್ದಾರೆ ಮತ್ತು ಬೇಸಿಗೆ ಹಾಗೂ ದಸರಾ ರಜೆಯಲ್ಲಿ ಕೂಡ ವಿದ್ಯಾರ್ಥಿಗಳಿಗೆ ತರಬೇತಿ ನೀಡುತ್ತಿದ್ದರು.

ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದು ಹಳೆಪೇಟೆ ಶಾಲೆಗೆ ಕೀರ್ತಿ ತಂದಿರುವ ವಿದ್ಯಾರ್ಥಿನಿ ಆರ್.ಬೃಂದಾಗೆ ದಾವಣಗೆರೆ ಉತ್ತರ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ (ಬಿಇಓ) ಶೇರ್‌ಅಲಿ, ಸಿಇಓ ಸರಳ, ಶಿವಲೀಲಾ, ಜಿಲ್ಲಾ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳ ಒಕ್ಕೂಟದ ಜಿಲ್ಲಾ ಪತ್ರಿಕಾ ಕಾರ್ಯದರ್ಶಿ ರಮೇಶ್ ಸಿ. ದಾಸರ್, ಅಧ್ಯಕ್ಷ ನಿಂಗರಾಜ ಹಾವನೂರು, ಕ್ಲಸ್ಟರ್ ಸಿ. ಆರ್.ಪಿ. ಮಲ್ಲಿಕಾರ್ಜುನ, ಎಸ್.ಡಿ.ಎಂ.ಸಿ. ಅಧ್ಯಕ್ಷ ಕೋಡಬಾಳ ಚನ್ನಬಸಪ್ಪ, ಮುಖ್ಯೋಪಾಧ್ಯಾಯ ಲೋಕಣ್ಣ, ಶಿಕ್ಷಕರಾದ ಸದಾನಂದ ಕೆ. ಹೆಚ್., ಶಿಕ್ಷಕಿ ಅನಸೂಯ ಆರ್.ಸಿ., ಸುಜಾತ, ನಮಿತಾ ಎಂ.ಎನ್., ಜಯಶ್ರೀ, ಶಿಲ್ಪಾ, ರೂಪಾ ಮತ್ತು ಶಾಲೆಯ ಅಡುಗೆ ಸಿಬ್ಬಂದಿ ಅಭಿನಂದನೆ ಸಲ್ಲಿಸಿದ್ದಾರೆ.

# ಬಿಸಿಯೂಟ ತಯಾರಕರಿಗೆ 3 ತಿಂಗಳ ವೇತನ ಬಿಡುಗಡೆ

## ಸಭೆ ನಡೆಸಿದ ದಿನವೇ ತತ್‌ಕ್ಷಣ ಆದೇಶ ಹೊರಡಿಸಿದ ಶಿಕ್ಷಣ ಸಚಿವ ಮಧು ಬಂಗಾರಪ್ಪ

ದಾವಣಗೆರೆ, ಅ.25- ಬೆಂಗಳೂರಿನ ಸಮಗ್ರ ಶಿಕ್ಷಣ ಯೋಜನಾಧಿಕಾರಿಗಳ ಸಭಾಂಗಣದಲ್ಲಿ ರಾಜ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರ ನೇತೃತ್ವದಲ್ಲಿ ಎಐಟಿಯುಸಿ ಬಿಸಿಯೂಟ ತಯಾರಕರ ಮತ್ತು ಮಧ್ಯಾಹ್ನ ಉಪಹಾರ ಯೋಜನೆ ರಾಜ್ಯಮಟ್ಟದ ಅಧಿಕಾರಿಗಳ ಜೊತೆ ಮೊನ್ನೆ ಸಭೆ ನಡೆಸಲಾಯಿತು.



ಬಿಸಿಯೂಟ ತಯಾರಕರ ವಿವಿಧ ಸಮಸ್ಯೆಗಳಾದ ಏಪ್ರಿಲ್ ಮತ್ತು ಮೇ ತಿಂಗಳ ಬರಗಾಲ ಕಾರ್ಯಕ್ರಮದಲ್ಲಿ ಅಡುಗೆ ಮಾಡಿದ ವೇತನವನ್ನು ಕೂಡಲೇ ಬಿಡುಗಡೆ ಮಾಡಬೇಕು, ಬಾಕಿ ಇರುವ ಆಗಸ್ಟ್, ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳ ವೇತನವನ್ನು ಬಿಡುಗಡೆ ಮಾಡಬೇಕು. ಮರಣ ಪರಿಹಾರ ಜಾರಿಗೊಳಿಸ ಬೇಕು. ನಿವೃತ್ತ ಬಿಸಿಯೂಟ ತಯಾರಕರಿಗೆ ಘೋಷಣೆಯಾಗಿರುವ ಇಡುಗಂಟು ಹಣವನ್ನು ಕೂಡಲೇ ಬಿಡುಗಡೆ ಮಾಡಬೇಕು ಹಾಗೂ ಹತ್ತರಿಂದ ಇಪ್ಪತ್ತು ವರ್ಷ ಅಡುಗೆ ತಯಾರಕರಾಗಿ ಕೆಲಸ ನಿರ್ವಹಿಸಿ ಶಾಲೆಯಲ್ಲಿ ಮಕ್ಕಳ ಸಂಖ್ಯೆ ಕಡಿಮೆಯಾದಾಗ ಬಿಡುಗಡೆಗೊಳಿಸಿದ ಬಿಸಿಯೂಟ ತಯಾರಕರಿಗೂ ಇಡುಗಂಟು ಹಣ ಕೊಡಬೇಕೆಂದು ಸಭೆಯಲ್ಲಿ ಒತ್ತಾಯಿಸಲಾಯಿತು.

ಬಿಸಿಯೂಟ ತಯಾರಕರಿಗೆ ಪ್ರತಿ ತಿಂಗಳು 5ನೇ ತಾರೀಖಿನ ಒಳಗೆ ವೇತನ ಪಾವತಿಸಬೇಕು, ಎಸ್. ಡಿ.ಎಂ.ಸಿ. ಮತ್ತು ಮುಖ್ಯ ಶಿಕ್ಷಕರ ಜಂಟಿ ಖಾತೆ ರದ್ದುಗೊಳಿಸಿ ಮುಖ್ಯ ಶಿಕ್ಷಕರು ಮತ್ತು ಅಡುಗೆಯವರ ಜಂಟಿ ಬ್ಯಾಂಕ್ ಖಾತೆ ಪುನಃ ಮುಂದುವರೆಸಬೇಕೆಂದು ಒತ್ತಾಯಿಸಲಾಯಿತು.

ವಾರಕ್ಕೆ ಎರಡು ದಿನ ಮೊಟ್ಟೆ ಕೊಡುತ್ತಿದ್ದನ್ನು ಈಗ ಆರು ದಿನ ಮೊಟ್ಟೆ ಕೊಡುವುದು ಜಾರಿಗೆ ಬಂದಿದೆ. ಆದ್ದರಿಂದ ಮೊಟ್ಟೆ ಸುಲಿಯುವುದಕ್ಕೆ ಈಗ ಇರುವ 30 ಪೈಸೆ ಬದಲಾಗಿ 50 ಪೈಸೆ ಕೊಡಬೇಕು, ಈಗ ಶಾಲೆಯಲ್ಲಿ ಹೆಚ್ಚುವರಿ ಕೆಲಸ ಇರುವುದರಿಂದ ಬಿಸಿಯೂಟ ತಯಾರಕರಿಗೆ ಕನಿಷ್ಠ ವೇತನ ಕೊಡಬೇಕೆಂದು ಒತ್ತಾಯಿಸಲಾಯಿತು.

ಈ ಎಲ್ಲಾ ಬೇಡಿಕೆಗಳನ್ನು ಆಲಿಸಿದ ಸಚಿವ ಮಧು ಬಂಗಾರಪ್ಪ ಅವರು, ಈ ಎಲ್ಲಾ ಬೇಡಿಕೆಗಳನ್ನು ಈಡೇರಿಸುವುದಾಗಿ ತಿಳಿಸಿ, ವೇತನವನ್ನು ಹೆಚ್ಚುವರಿ ಮಾಡುವುದಕ್ಕೆ ಮುಖ್ಯಮಂತ್ರಿಗಳ ಜೊತೆ ಮಾತನಾಡುವುದಾಗಿ ತಿಳಿಸಿದರು.

ಸಂಘಟನೆ ರಾಜ್ಯಾಧ್ಯಕ್ಷ ಹೊನ್ನಪ್ಪ ಮರೆಮ್ಮನವರ ಮತ್ತು ರಾಜ್ಯ ಪ್ರಧಾನ ಕಾರ್ಯದರ್ಶಿ ಆವರಗೆರೆ ಚಂದ್ರು ಮುಖಂಡರುಗಳಾದ ನಿರ್ಮಲ ಮತ್ತು ಶಶಿಕಲಾ ಮತ್ತಿತರರು ಸಭೆಯಲ್ಲಿ ಭಾಗವಹಿಸಿದ್ದರು.

ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ರಿತೇಶ್ ಕುಮಾರ್, ಶಿಕ್ಷಣ ಇಲಾಖೆ ಕಮೀಷನರ್ ತ್ರಿಲೋಕ ಚಂದ್ರ, ಮಧ್ಯಾಹ್ನ ಉಪಹಾರ ಯೋಜನೆ ನಿರ್ದೇಶಕ ಕುರ್ಮಾ ರಾವ್, ಮಂಜುನಾಥ್ ಸೇರಿದಂತೆ ಇಲಾಖೆಯ ಇತರೆ ಅಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.

ಒಟ್ಟಾರೆ ಸಭೆಯಲ್ಲಿ ಸಕಾರಾತ್ಮಕವಾಗಿ ಸ್ಪಂದಿಸಿದ ಸಚಿವರು ಎಲ್ಲಾ ಸಮಸ್ಯೆಗಳ ಬಗ್ಗೆ ಕೂಲಂಕುಶವಾಗಿ ಚರ್ಚಿಸಿ ಹಂತ ಹಂತವಾಗಿ ಬಿಸಿಯೂಟ ತಯಾರಕರ ಬೇಡಿಕೆಗಳನ್ನು ಈಡೇರಿಸಲಾಗುವುದು ಎಂದು ತಿಳಿಸಿದರು.

ಸಭೆ ನಡೆದ ದಿನವೇ ಬಾಕಿ ಇದ್ದ ಮೂರು ತಿಂಗಳ ವೇತನವನ್ನು ಬಿಡುಗಡೆಗೊಳಿಸಿ ಆದೇಶ ಹೊರಡಿಸಿದರು.


**ICAR-TARALABALU KRISHI VIGYAN KENDRA, DAVANGERE**

Kadalivana, LIC Colony Layout, Taralabalu KVK Road,
Davanagere-577 004, Karnataka, India
Ph. : Off : 08192-263462, 297142
Email : kvk.Davanagere@icar.gov.in/dvgtkvk@yahoo.com

**Corrigendum**

With reference to the vacancy advertised in Employment News (EN No. 50/48/2023 dated 11 March, 2023 page No. 33), applicants are hereby notified that the post advertised will be filled in the Pay Level 5 (Rs. 29,200/-) as per cadre strength of KVKs stipulated in the OM No. F.No.TS. 19-3/2023-Estt. IV dated 21st December, 2023 of Indian Council of Agricultural Research, New Delhi.

Sd/- **Secretary**
Taralabalu Rural Development Foundation
Sirigere-577 541, Chitradurga Dist
Karnataka

# ವಿದ್ಯಾರ್ಥಿ ದೆಸೆಯಲ್ಲಿಯೇ ಸಂಶೋಧನಾ ಪ್ರವೃತ್ತಿ ಬೆಳೆಸಿಕೊಳ್ಳಿ



ಪ್ರೊ. ಸಿ.ಕೆ. ರಮೇಶ್

ದಾವಣಗೆರೆ, ಅ. 25- ವಿದ್ಯಾರ್ಥಿಗಳು ಪಠ್ಯ ವಿಷಯಗಳ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ತಮ್ಮ ವ್ಯಕ್ತಿತ್ವವನ್ನು ಚೆನ್ನಾಗಿ ರೂಪಿಸಿಕೊಳ್ಳಬೇಕು ಹಾಗೂ ವಿದ್ಯಾರ್ಥಿ ದೆಸೆಯಲ್ಲಿಯೇ ಸಂಶೋಧನಾ ಪ್ರವೃತ್ತಿ ರೂಢಿಸಿಕೊಳ್ಳಬೇಕೆಂದು ದಾವಣಗೆರೆ ವಿವಿ ಕುಲಸಚಿವ (ಪರೀಕ್ಷಾಂಗ) ಪ್ರೊ. ಸಿ.ಕೆ. ರಮೇಶ್ ತಿಳಿ ಹೇಳಿದರು.

ನಗರದ ಧ.ರಾ.ಮ. ವಿಜ್ಞಾನ ಕಾಲೇಜು ವತಿಯಿಂದ ಕಾಲೇಜಿನ ಸಭಾಂಗಣದಲ್ಲಿ ನಿನ್ನೆ ಹಮ್ಮಿಕೊಂಡಿದ್ದ ಸಹ ಪಠ್ಯ ಚಟುವಟಿಕೆಗಳ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವ ಮೂಲಕ ವಿದ್ಯಾರ್ಥಿ ಜೀವನವನ್ನು ಸಾರ್ಥಕಗೊಳಿಸಿಕೊಳ್ಳಬೇಕೆಂದರು.

ಕರ್ನಾಟಕ ರಾಜ್ಯ ವಿವಿ ಹಾಗೂ ಕಾಲೇಜು ಅಧ್ಯಾಪಕರ ಸಂಘಗಳ ಒಕ್ಕೂಟದ ಮಾಜಿ ಅಧ್ಯಕ್ಷ ಪ್ರೊ. ಸಿ.ಹೆಚ್.ಮುರುಗೇಂದ್ರಪ್ಪ ಅವರು ಕಾಲೇಜಿನ ಐ.ಕ್ಯು.ಎ.ಸಿ. ಬುಲೆಟಿನ್ ಬಿಡುಗಡೆ ಮಾಡಿ ಮಾತನಾಡಿ, ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹೆಚ್ಚಿನ ಮಹತ್ವ ಕೊಟ್ಟು ಜಯಶೀಲರಾಗಿ ಚೆನ್ನಾಗಿ ಬದುಕು ರೂಪಿಸಿಕೊಳ್ಳಬೇಕೆಂದು ತಮ್ಮ ಬದುಕಿನ ಹೋರಾಟದ ಹಾದಿಯನ್ನು ಹೇಳುತ್ತಾ ವಿದ್ಯಾರ್ಥಿಗಳಿಗೆ ತಿಳಿಸಿಕೊಟ್ಟರು.

ಸಮಾರಂಭದ ಅಧ್ಯಕ್ಷತೆ ವಹಿಸಿಕೊಂಡಿದ್ದ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಎಂ.ಪಿ. ರೂಪಶ್ರೀ ಮಾತನಾಡಿ, ವಿದ್ಯಾರ್ಥಿಗಳು ಪಠ್ಯದಷ್ಟೇ ಸಹ ಪಠ್ಯಗಳಿಗೆ ಮಹತ್ವ ಕೊಟ್ಟು ಸೃಜನ ಶೀಲತೆ ಅಳವಡಿಸಿಕೊಳ್ಳಬೇಕೆಂದು ಕಿವಿ ಮಾತು ಹೇಳಿದರು.

ವಿದ್ಯಾರ್ಥಿನಿ ಪುಷ್ಪ ಪ್ರಾರ್ಥಿಸಿದರು. ಸಾಂಸ್ಕೃತಿಕ ಚಟುವಟಿಕೆ ಸಮಿತಿ ಸಂಚಾಲಕ ಶಿವಪ್ಪ ಮುಳ್ಳೂರ ಸ್ವಾಗತಿಸಿದರು.

ಡಾ. ಹೆಚ್.ಬಿ. ಸೌಮ್ಯ ನಿರೂಪಿಸಿದರು. ಡಾ. ಮೊಹಮ್ಮದ್ ಇಮದಾದುಲ್ಲಾ ವಂದಿಸಿದರು.

ಐ.ಕ್ಯು.ಎ.ಸಿ ಸಂಯೋಜಕ ಡಾ. ಟಿ. ಮಂಜುರಾಜ್, ಸಹ ಸಂಯೋಜಕರಾದ ಡಾ. ಟಿ.ಎಸ್. ಹರೀಶ್ ಕುಮಾರ್, ಮಂಜುನಾಥ್, ಬಸಪ್ಪ ಚನ್ನಿ ಅವರು ಅತಿಥಿಗಳನ್ನು ಪರಿಚಯಿಸಿದರು. ವಿದ್ಯಾರ್ಥಿ ಸಂಘದ ಪದಾಧಿಕಾರಿಗಳಾದ ಸಿರಿಗೌರಿ ಮತ್ತು ಜಿ. ಆರ್. ಮಧು ಉಪಸ್ಥಿತರಿದ್ದರು.

# ಉದ್ಯಮಿಯ ಮಕ್ಕಳ ಅಪಹರಣ : ಪೊಲೀಸರಿಂದ ರಕ್ಷಣೆ

ಬೆಳಗಾವಿ, ಅ. 25 - ಉದ್ಯಮಿಯೊಬ್ಬರ ಇಬ್ಬರು ಮಕ್ಕಳನ್ನು ಅವರ ಮನೆಯಿಂದ ಅಪಹರಿಸಿದ ಘಟನೆ ಬೆಳಗಾವಿಯಲ್ಲಿ ನಡೆದಿದೆ. ಮಕ್ಕಳನ್ನು ಪೊಲೀಸರು ಕೆಲವೇ ಗಂಟೆಗಳಲ್ಲಿ ರಕ್ಷಿಸಿ ಪೋಷಕರಿಗೆ ಮರಳಿಸಿದ್ದಾರೆ.

ಇಬ್ಬರು ವ್ಯಕ್ತಿಗಳು ಮಕ್ಕಳ ಮನೆಗೆ ನುಗ್ಗಿ ನಾಲ್ಕು ವರ್ಷದ ಹೆಣ್ಣು ಹಾಗೂ ಮೂರು ವರ್ಷದ ಗಂಡು ಮಗುವನ್ನು ಅಪಹರಿಸಿದ ದೃಶ್ಯ ಸಿಸಿಟಿವಿಯಲ್ಲಿ ಸೆರೆಯಾಗಿತ್ತು. ತಾಂತ್ರಿಕ ನಿಗಾ ವ್ಯವಸ್ಥೆಯ ನೆರವಿನಿಂದ ಅಪಹರಣ ನಡೆಸಿದ ಮೂವರನ್ನು ಬಂಧಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ.

ಈ ಉದ್ಯಮಿಯ ಟ್ರೇಡಿಂಗ್ ವೇದಿಕೆಯಲ್ಲಿ ಹೂಡಿಕೆ ಮಾಡಿದವರಿಗೆ ತೀವ್ರ ನಷ್ಟವಾಗಿತ್ತು. 1 ಕೋಟಿ ರೂ. ಹಣ ನೀಡುವಂತೆ ಉದ್ಯಮಿಗೆ ಬೇಡಿಕೆ ಇಡಲಾಗಿತ್ತು. ಆದರೆ, ಉದ್ಯಮಿ ಇದಕ್ಕೆ ಒಪ್ಪಿರಲಿಲ್ಲ. ಈ ಹಿನ್ನೆಲೆಯಲ್ಲಿ ಹಣದ ಬೇಡಿಕೆ ಮುಂದಿಡಲು ಮಕ್ಕಳನ್ನು ಅಪಹರಿಸ ಲಾಗಿತ್ತು ಎಂದು ಬಂಧಿತರಲ್ಲಿ ಓರ್ವ ತಿಳಿಸಿದ್ದಾನೆ.

ಶಾಲೆಯಿಂದ ಮರಳಿದ ಮಕ್ಕಳು ತಮ್ಮ ಮನೆಯೊಳಗೆ ಆಡುತ್ತಿದ್ದರು. ಆಗ ಮನೆಯಲ್ಲಿ ಮಕ್ಕಳ ಅಜ್ಜಿ ಒಬ್ಬರೇ ಇದ್ದರು. ಮನೆಗೆ ನುಗ್ಗಿದ ಇಬ್ಬರು ಮಕ್ಕಳನ್ನು ಹೊತ್ತುಕೊಂಡು ಬಂದಿದ್ದರೆ, ಇನ್ನೋರ್ವ ಹೊರಗಡೆ ಕಾರಿನಲ್ಲಿ ಕಾಯುತ್ತಿದ್ದ.

ತಾಂತ್ರಿಕ ನಿಗಾ ನೆರವಿನಿಂದ ಪೊಲೀಸರು ವಾಹನವನ್ನು ಬೆನ್ನತ್ತಿ, ಮಕ್ಕಳನ್ನು ರಕ್ಷಿಸಿದ್ದಾರೆ. ಬೆಳಗಾವಿ ಜಿಲ್ಲೆಯ ಕೊಹಳ್ಳಿ ಎಂಬಲ್ಲಿ ವಾಹನವನ್ನು ತಡೆಯಲಾಯಿತು. ಮಕ್ಕಳನ್ನು ಸುರಕ್ಷಿತವಾಗಿ ವಾಪಸ್ ತರಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

# ಜಗಳೂರಿನ ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿ ಗಾರ್ಮೆಂಟ್ಸ್ ಸ್ಥಾಪನೆಗೆ ಕ್ರಮ: ಡಾ.ಪ್ರಭಾ



ಸಂಗೇನಹಳ್ಳಿ ಕೆರೆ ಕೋಡಿ ಬಿದ್ದ ಹಿನ್ನೆಲೆಯಲ್ಲಿ ಬಾಗಿನ ಅರ್ಪಿಸಿದ ಸಂಸದೆ

ಜಗಳೂರು, ಅ. 25- ಸ್ಥಳೀಯ ನಿರುದ್ಯೋಗ ಸಮಸ್ಯೆ ನಿವಾರಣೆಗಾಗಿ ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿ ಗಾರ್ಮೆಂಟ್ಸ್ ಸ್ಥಾಪಿಸಲಾಗುವುದು ಎಂದು ಸಂಸದರಾದ ಡಾ.ಪ್ರಭಾ ಮಲ್ಲಿಕಾರ್ಜುನ್ ತಿಳಿಸಿದರು.

ತಾಲ್ಲೂಕಿನ ಕಲ್ಲೇದೇವರಪುರ ಗ್ರಾಮದಲ್ಲಿ ಸಂಸದೆ ಡಾ.ಪ್ರಭಾಮಲ್ಲಿಕಾರ್ಜುನ್ ಅವರು ಐತಿಹಾಸಿಕ ಕಲ್ಲೇಶ್ವರ ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿ, ವಿವಿಧ ದೇವಸ್ಥಾನಗಳ ಜೀರ್ಣೋದ್ಧಾರಕ್ಕೆ ಗುದ್ದಲಿ ಪೂಜೆ ನೆರವೇರಿಸಿದ ನಂತರ ಸಂಗೇನಹಳ್ಳಿ ಕೆರೆ ಕೋಡಿಬಿದ್ದ ಹಿನ್ನೆಲೆಯಲ್ಲಿ ಬಾಗಿನ ಅರ್ಪಿಸಿ ಅವರು ಮಾತನಾಡಿದರು.

ಲೋಕಸಭಾ ಕ್ಷೇತ್ರದಲ್ಲಿ ಅತ್ಯಂತ ಹಿಂದುಳಿದ ಹರಪನಹಳ್ಳಿ ಮತ್ತು ಜಗಳೂರು ಕ್ಷೇತ್ರಗಳಿಗೆ ಆದ್ಯತೆ ನೀಡಿ ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರಗಳನ್ನು ಹಂತ ಹಂತವಾಗಿ ಅಭಿವೃದ್ಧಿಗೊಳಿಸುವುದಾಗಿ ಭರವಸೆ ವ್ಯಕ್ತಪಡಿಸಿದರು.

ತಮ್ಮ ಬೇಡಿಕೆಯಂತೆ ಶೀಘ್ರದಲ್ಲಿ ಈ ಭಾಗದ ಗ್ರಾಮಸ್ಥರು ಹಾಗೂ ಕೆರೆ ಸಮಿತಿ, ಶಾಸಕರೊಡನೆ ಒಂದು ದಿನ ಸುದೀರ್ಘವಾಗಿ ಚರ್ಚಿಸಿ ಪ್ರವಾಸಿ ತಾಣ, ಸಿರಿಧಾನ್ಯ ಕೇಂದ್ರ ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ರಾಷ್ಟ್ರೀಯ ಹೆದ್ದಾರಿ ಪಕ್ಕದ ಅಭಿವೃದ್ಧಿ ಕಾಮಗಾರಿ ಕುರಿತು ನಿತಿನ್ ಗಡ್ಕರಿ ಬಳಿ ನಿಯೋಗ ತೆರಳೋಣ ಎಂದರು.

ಶಾಸಕ ಬಿ.ದೇವೇಂದ್ರಪ್ಪ ಮಾತನಾಡಿ, ಮೇಲ್ಸೇತುವೆ ನಿರ್ಮಾಣಕ್ಕೆ ಪ್ರಸ್ತಾವನೆಯನ್ನು ಕಂದಾಯ ಸಚಿವರಿಗೆ ಸಲ್ಲಿಸಲಾಗಿದೆ. ಶೀಘ್ರದಲ್ಲಿ ಅನುಮೋದನೆ ಸಿಗಲಿದೆ. ತಾಲ್ಲೂಕಿನ ಬಹುತೇಕ ಕೆರೆಗಳು ಕಳೆದ ಅರ್ಧ ಶತಕಗಳಿಂದ ಕೆರೆ ಕೋಡಿಗಳು ಬಿದ್ದಿಲ್ಲ. ಆದ್ದರಿಂದ ರೈತರು, ಕೆಲವರು ವಸತಿಗಾಗಿ ಕೆರೆ ಒತ್ತುವರಿಯಾಗಿದ್ದವು. ಇದೀಗ ಕೆರೆ ಕೋಡಿ ಬಿದ್ದ ಪರಿಣಾಮ ಕೆರೆಗಳ ನಿರ್ದಿಷ್ಟ ವಿಸ್ತೀರ್ಣ ಗೋಚರಿಸುತ್ತವೆ. ಸಿರಿಗೆರೆ ಶ್ರೀಗಳ ಆಶಯದಂತೆ ಬರದ ನಾಡು ಬಂಗಾರದ ನಾಡಾಗಲಿದೆ. ಕೆರೆಗಳ ಸಂರಕ್ಷಣೆ ಪ್ರತಿಯೊಬ್ಬರ ಹೊಣೆಗಾರಿಕೆಯಾಗಬೇಕಿದೆ ಎಂದು ಸಲಹೆ ನೀಡಿದರು.

ಕುದುರೆ ಲಾಳಾಕೃತಿ ಕೋಡಿಯ ಐತಿಹಾಸಿಕ ಸಂಗೇನಹಳ್ಳಿ ಕೆರೆ ಕಳೆದ 15 ವರ್ಷಗಳಿಂದ ಸತತ ಮೂರು ಬಾರಿ ಕೆರೆ ಕೋಡಿ ಬಿದ್ದರೂ ಕೆಲ ಅವೈಜ್ಞಾನಿಕ ಕಾಮಗಾರಿಗಳಿಂದ ರೈತರಿಗೆ ಪ್ರಯೋಜನವಾಗುತ್ತಿಲ್ಲ. ಗ್ರಾಮಕ್ಕೆ ಸೂಕ್ತ ರಸ್ತೆ ಸಂಚಾರ ಸಂಪರ್ಕಕ್ಕಾಗಿ ಮೇಲ್ಸೇತುವೆ ನಿರ್ಮಾಣವಾಗಬೇಕಿದೆ. ಕೆರೆ ಏರಿಯ ಸುತ್ತಲೂ ಬೆಳೆದಿರುವ ಜಾಲಿ ಗಿಡಗಳನ್ನು ತೆರವುಗೊಳಿಸಬೇಕು. ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿ ಸಿರಿಧಾನ್ಯಗಳನ್ನು ಬೆಳೆಯುವ ಹಬ್ ಮತ್ತು ಪ್ರವಾಸಿ ತಾಣವಾಗಬೇಕಿದೆ ಎಂದು ಸಾಹಿತಿ ಡಾ.ಅಶೋಕ ಕುಮಾರ್ ಸಂಗೇನಹಳ್ಳಿ ಸಲಹೆ ನೀಡಿದರು.

ಗ್ರಾ.ಪಂ ಅಧ್ಯಕ್ಷ ಕೊಟ್ರಿಗೆ ತಿಪ್ಪೇಸ್ವಾಮಿ, ವಸಂತ ಕುಮಾರಿ, ಉಪಾಧ್ಯಕ್ಷೆ ಅನ್ನಪೂರ್ಣಮ್ಮ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಷಂಷೀರ್ ಅಹ್ಮದ್, ಮುಖಂಡರಾದ ಕೆ.ಪಿ.ಪಾಲಯ್ಯ, ಕಲ್ಲೇಶ್‌ರಾಜ್ ಪಟೇಲ್, ಸಣ್ಣಸೂರಯ್ಯ, ಕೆ.ಟಿ.ಬಡಯ್ಯ, ಶಿವನಗೌಡ, ಡಿ.ಎಸ್. ಕಲ್ಲಪ್ಪ, ಬಿ.ಮಹೇಶ್ವರಪ್ಪ, ಅಜ್ಜಣ್ಣ, ದುಬೈ ಕಲ್ಲೇಶ್, ತಿಪ್ಪೇಸ್ವಾಮಿ ಸೇರಿದಂತೆ ಗ್ರಾ.ಪಂ ಸದಸ್ಯರು, ನೆರೆಹೊರೆ ಗ್ರಾಮಸ್ಥರು ಭಾಗವಹಿಸಿದ್ದರು.

# ಓಬಿಸಿ ಪಟ್ಟಿಯಲ್ಲಿ 'ಸ್ವಕುಳಸಾಳಿ' ಪದ ತಪ್ಪು ಸರಿಪಡಿಸಲು ಮನವಿ



ದಾವಣಗೆರೆ, ಅ.25- ಈಗಾಗಲೇ ಮುದ್ರಣ ಗೊಂಡಿರುವ ಓಬಿಸಿ ಪಟ್ಟಿಯಲ್ಲಿ 'ಸ್ವಕುಳಸಾಳಿ' ಜಾತಿ ಪದ ತಪ್ಪಾಗಿದ್ದು, ಅದನ್ನು ಸರಿಯಾಗಿ ಮುದ್ರಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಸ್ವಕುಳಸಾಳಿ ಸಮಾಜವು ಲೋಕಸಭಾ ಸದಸ್ಯ ತೇಜಸ್ವಿ ಸೂರ್ಯ ಅವರಿಗೆ ಮನವಿ ಸಲ್ಲಿಸಿದೆ.

'ಸ್ವಕುಳಸಾಳಿ' ಜಾತಿ ಪದ ತಪ್ಪಾಗಿರುವ ಹಿನ್ನೆಲೆಯಲ್ಲಿ ಈ ಸಮಾಜವು ಕೇಂದ್ರ ಸರ್ಕಾರದ ಶೈಕ್ಷಣಿಕ ಮತ್ತು ಉದ್ಯೋಗ ಸೌಲಭ್ಯ ಪಡೆಯುವಲ್ಲಿ ಸ್ವಕುಳಸಾಳಿ ಸಮಾಜದ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತಿದೆ ಎಂದು ನಿವೃತ್ತ ಪೊಲೀಸ್ ವರಿಷ್ಠಾಧಿಕಾರಿಯೂ ಆಗಿರುವ ಸ್ವಕುಳಸಾಳಿ ಸಮಾಜದ ರಾಜ್ಯಾಧ್ಯಕ್ಷ ಚಂದ್ರಕಾಂತ ಭಂಡಾರೆ ತಿಳಿಸಿದ್ದಾರೆ.

ಈಗ ಮುದ್ರಣಗೊಂಡಿರುವ ಓಬಿಸಿ ಪಟ್ಟಿಯಲ್ಲಿ Sakulasali ಯನ್ನು Swakulasale; Swakulasali (ಸ್ವಕುಳಸಾಳಿ) ಎಂದು ಸರಿಪಡಿಸಿ ಮುದ್ರಿಸಬೇಕು ಎಂದು ಸಂಸದ ತೇಜಸ್ವಿ ಸೂರ್ಯ ಅವರಿಗೆ ಭಂಡಾರೆ ಅವರು ಮನವರಿಕೆ ಮಾಡಿಕೊಟ್ಟರು. ಮನವಿಗೆ ಸ್ಪಂದಿಸಿದ ಸಂಸದರು ಸರಿಪಡಿಸಿಕೊಡುವ ಭರವಸೆ ನೀಡಿದರು.

'ಸ್ವಕುಳಸಾಳಿ ವಾರ್ತೆ' ಪತ್ರಿಕೆಯನ್ನು ಸಂಸದರಿಗೆ ನೀಡಲಾಯಿತು. ಈ ಸಂದರ್ಭದಲ್ಲಿ ಸ್ವಕುಳಸಾಳಿ ಸಮಾಜದ ಮುಖಂಡರೂ ಆಗಿರುವ ಬಿಜೆಪಿ ಮುಖಂಡ ಸುರೇಶ್ ಚಿಲ್ಲಾಳ್ ಉಪಸ್ಥಿತರಿದ್ದರು.

# ಬೆಳೆ ಹಾನಿ ಪರಿಹಾರ ಹೆಚ್ಚಳದತ್ತ ಕೇಂದ್ರ ಗಮನಹರಿಸಲಿ: ಸಚಿವ ಕೃಷ್ಣ

ದಾವಣಗೆರೆ, ಅ. 25- ರಾಷ್ಟ್ರೀಯ ವಿಪತ್ತು ರೆಸ್ಪಾನ್ಸ್ ಫೋರ್ಸ್ (ಎನ್‌ಡಿಆರ್‌ಎಫ್) ಮಾರ್ಗಸೂಚಿಗಳನ್ನು ಪರಿಷ್ಕರಿಸಿ, ಬೆಳೆ ಹಾನಿ ಪರಿಹಾರ ಮೊತ್ತ ಹೆಚ್ಚಳ ಮಾಡುವ ಕಡೆ ಕೇಂದ್ರ ಸರ್ಕಾರ ಗಮನಹರಿಸಬೇಕು ಎಂದು ಸಚಿವ ಕೃಷ್ಣ ಭೈರೇಗೌಡ ಹೇಳಿದರು.

ಜಗಳೂರು ತಾಲ್ಲೂಕು ಹುಚ್ಚವ್ವನಹಳ್ಳಿ ಗ್ರಾಮದಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, ಈಗಾಗಲೇ ನಾವು ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರನ್ನು ಭೇಟಿಯಾಗಿ ಬೆಳೆ ಹಾನಿ ಪರಿಹಾರ ಮೊತ್ತವನ್ನು ಹೆಚ್ಚಿಸುವಂತೆ ಮನವಿ ಮಾಡಲಾಗಿದ್ದು, ಬೆಳೆ ಹಾನಿ ಪರಿಹಾರ ಮೊತ್ತ ಹೆಚ್ಚಳದ ನಿರೀಕ್ಷೆಯಲ್ಲಿ ಇದ್ದೇವೆ ಎಂದರು.

ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ಒಂದೇ ವರ್ಷದಲ್ಲಿ 1500 ತಾಂಡಾ, ಹಟ್ಟಿ, ಹಾಡಿ ಸೇರಿದಂತೆ ಇತರೆ ಜನ ವಸತಿ ಪ್ರದೇಶಗಳಿಗೆ ಕಂದಾಯ ಗ್ರಾಮಗಳ ಸ್ಥಾನಮಾನ ಕಲ್ಪಿಸಲಾಗಿದ್ದು, ಡಿಸೆಂಬರ್ ಅಂತ್ಯದೊಳಗೆ 1.20 ಲಕ್ಷ ಕುಟುಂಬಗಳಿಗೆ ಮನೆಗಳ ಹಕ್ಕುಪತ್ರ ನೀಡಲಾಗುವುದು ಎಂದು ಹೇಳಿದರು.

ಗ್ರಾಮ ಠಾಣಾ ವಿಸ್ತರಿಸಲು ಗ್ರಾಮ ಪಂಚಾಯತಿಗಳು ಆ ಜಾಗವನ್ನು ಗುರುತಿಸಿ, ಪಂಚಾಯತ್ ರಾಜ್ ಇಲಾಖೆಗೆ ವರದಿ ಸಲ್ಲಿಸಬೇಕು. ನಂತರ ಕಂದಾಯ ಇಲಾಖೆಗೆ ಗ್ರಾಮ ಠಾಣಾ ವಿಸ್ತರಣೆಗೆ ಪ್ರಸ್ತಾವನೆ ಸಲ್ಲಿಸಿದರೆ ಮಾತ್ರ ಅದಕ್ಕೆ ಬೇಕಾದ ಅಗತ್ಯ ಸಹಕಾರವನ್ನು ಕಾನೂನಾತ್ಮಕವಾಗಿ ನೀಡಲಾಗುವುದು ಎಂದು ಮಾಹಿತಿ ನೀಡಿದರು.

ಜಗಳೂರು ತಾಲ್ಲೂಕಿನ ಎಲ್ಲೆಂದರಲ್ಲಿ ವಿಂಡ್ ಎನರ್ಜಿ ಫಾರ್ಮ್ ತೆರೆಯುತ್ತಿರುವ ಬಗ್ಗೆ ವ್ಯಾಪಕ ದೂರುಗಳು ಬಂದಿದ್ದು, ಇದರ ಪರಿಶೀಲನೆಗಾಗಿ ಜಿಲ್ಲಾಧಿಕಾರಿಗಳು ಸಮಿತಿ ರಚಿಸಿದ್ದಾರೆ. ವರದಿಯ ನಂತರ ಕ್ರಮ ಕೈಗೊಳ್ಳುವುದಾಗಿ ಕಂದಾಯ ಸಚಿವ ಕೃಷ್ಣ ಭೈರೇಗೌಡ ತಿಳಿಸಿದರು.

# ಬೆಂಗಳೂರಿನಲ್ಲಿ ನಾಳೆ ರಾಜ್ಯ ಮಟ್ಟದ ಕಾಂಗ್ರೆಸ್ ಪ್ರಚಾರ ಸಮಿತಿ ಸಭೆ



ದಾವಣಗೆರೆ, ಅ.25- ಕರ್ನಾಟಕ ಪ್ರದೇಶ ಕಾಂಗ್ರೆಸ್ ಪ್ರಚಾರ ಸಮಿತಿ ಸಭೆಯನ್ನು ನಾಡಿದ್ದು ದಿನಾಂಕ 27ರ ಭಾನುವಾರ ಕೆಪಿಸಿಸಿ ಕಚೇರಿಯಲ್ಲಿ ಬೆಳಿಗ್ಗೆ 10.30ಕ್ಕೆ ಕರೆಯಲಾಗಿದೆ ಎಂದು ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ಶಾಮನೂರು ಟಿ. ಬಸವರಾಜ್ ತಿಳಿಸಿದ್ದಾರೆ.

ಕೆಪಿಸಿಸಿ ಅಧ್ಯಕ್ಷರೂ ಆದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕೆಪಿಸಿಸಿ ಕಾರ್ಯಾಧ್ಯಕ್ಷರೂ ಆದ ಸಂಸದ ಜಿ.ಸಿ. ಚಂದ್ರಶೇಖರ್ ಸಭೆಯಲ್ಲಿ ಭಾಗವಹಿಸಲಿದ್ದಾರೆ. ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿ ಪ್ರಧಾನ ಕಾರ್ಯದರ್ಶಿಗಳು, ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿಯ ಜಾಲತಾಣದ ಉಸ್ತುವಾರಿಗಳು ಸಭೆಯಲ್ಲಿ ಭಾಗವಹಿಸುವಂತೆ ಬಸವರಾಜ್ ಕೋರಿದ್ದಾರೆ.

# ಅಂತರರಾಷ್ಟ್ರೀಯ ಪಂಜ ಕುಸ್ತಿ ಕೆ. ಕೆಂಚಪ್ಪಗೆ ಬೆಳ್ಳಿ ಪದಕ




ದಾವಣಗೆರೆ, ಅ.25- ಮುಂಬೈ ನಗರದಲ್ಲಿ ಅ.19ರಿಂದ 26ರ ವರೆಗೆ ನಡೆದ ಅಂತರರಾಷ್ಟ್ರೀಯ 2024ರ ಏಷಿಯನ್ ಆರ್ಮ್ ರೆಸ್ಲಿಂಗ್ ಕಪ್ ಕ್ರೀಡೆಯಲ್ಲಿ ಹರಿಹರ ತಾಲ್ಲೂಕಿನ ಕುಂಬಳೂರು ಗ್ರಾಮದ ಕೆ.ಎ. ಕನ್ನಾಳ್ ಕೆಂಚಪ್ಪ ದೇಶವನ್ನು ಪ್ರತಿನಿಧಿಸಿ ಬೆಳ್ಳಿ ಪದಕ ಪಡೆದಿದ್ದಾರೆ.

90 ಕೆ.ಜಿ ವಿಭಾಗದ ಪಂಜ ಕುಸ್ತಿಯಲ್ಲಿ ಭಾಗವಹಿಸಿದ ಅವರು, ಉತ್ತಮ ಪ್ರದರ್ಶನದೊಂದಿಗೆ ದ್ವಿತೀಯ ಸ್ಥಾನ ಪಡೆದಿದ್ದಾರೆ.

ಕ್ರೀಡಾಪಟು ಕೆಂಚಪ್ಪ, ಪ್ರಸ್ತುತ ದಾವಣಗೆರೆ ವಿವಿಯ ಬಿ.ಪಿ.ಇಡಿಯಲ್ಲಿ ಅಂತಿಮ ವರ್ಷದ ವಿದ್ಯಾರ್ಥಿಯಾಗಿ ವ್ಯಾಸಂಘ ಮಾಡುತ್ತಿದ್ದು, ಕ್ರೀಡೆಯಲ್ಲಿ ಉತ್ತಮ ಸಾಧನೆ ಗೈಯ್ಯುವ ಗುರಿ ಹೊಂದಿದ್ದಾರೆ.












KA/SK/DVG-028/2024-2026. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas